ಭಾನುವಾರ, ಜೂನ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 167 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಹಣ ಖರ್ಚು ಮಾಡದೇ ಸಸಿ ನೆಡುವ ಸರಳ ತಂತ್ರ

ವಾರ್ಷಿಕ ₹3 ಸಾವಿರ ಕೋಟಿ ವರಮಾನ ಹೆಚ್ಚಳ ● ಮಧ್ಯರಾತ್ರಿಯಿಂದಲೇ ಜಾರಿ

ಪೆಟ್ರೋಲ್–ಡೀಸೆಲ್ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಚಿಲ್ಲರೆ ಮಾರಾಟ ತೆರಿಗೆ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದ್ದು, ಇದರಿಂದಾಗಿ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹ 3.02ರಷ್ಟು ಹಾಗೂ ಡೀಸೆಲ್ ದರ ಲೀಟರ್‌ಗೆ ₹ 3ರಷ್ಟು ಹೆಚ್ಚಾಗಿದೆ.

ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಚಿಲ್ಲರೆ ಮಾರಾಟದ ಬೆಲೆ ₹ 102.85 ಹಾಗೂ ಡೀಸೆಲ್ ಬೆಲೆ ₹ 88.93 ಆಗಿದೆ. ಶನಿವಾರ (ಜೂನ್ 15) ಮಧ್ಯರಾತ್ರಿಯಿಂದಲೇ ಪರಿಷ್ಕೃತ ದರ ಜಾರಿಗೆ ಬಂದಿದೆ.

ಈ ದರವು, ಸಾಗಣೆ ವೆಚ್ಚದ ಆಧಾರದಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಸ್ವಲ್ಪ ಪ್ರಮಾಣದ ವ್ಯತ್ಯಾಸವಿರುತ್ತದೆ. ಹೆಚ್ಚಳಕ್ಕೂ ಮೊದಲು ಪೆಟ್ರೋಲ್ ಬೆಲೆ ಲೀಟರ್‌ಗೆ ₹ 99.83, ಡೀಸೆಲ್ ಲೀಟರ್‌ಗೆ ₹ 85.93 ಇತ್ತು. ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ₹ 1.10 ಲಕ್ಷ ಕೋಟಿ ವರಮಾನ ಸಂಗ್ರಹಿಸುವ ಗುರಿಯನ್ನು ರಾಜ್ಯ ಸರ್ಕಾರ ನಿಗದಿಪಡಿಸಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಚಿಲ್ಲರೆ ಮಾರಾಟ ತೆರಿಗೆ ಹೆಚ್ಚಳದಿಂದ ಸುಮಾರು ₹ 3 ಸಾವಿರ ಕೋಟಿ ಹೆಚ್ಚುವರಿ ಸಂಗ್ರಹದ ನಿರೀಕ್ಷೆಯಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಮೂಲಗಳು ಹೇಳಿವೆ.

ಶೇ 25.92ರಷ್ಟಿದ್ದ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 29.84ಕ್ಕೆ ಹಾಗೂ ಶೇ 14.34 ರಷ್ಟಿದ್ದ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 18.44ಕ್ಕೆ ಹೆಚ್ಚಳ ಮಾಡಲಾಗಿದೆ.

ಪೆಟ್ರೋಲ್–ಡೀಸೆಲ್ ಮೂಲ ಬೆಲೆಯ ಏರಿಳಿತಕ್ಕೆ ಅನುಗುಣವಾಗಿ, ಮಾರಾಟ ತೆರಿಗೆ ಅನ್ವಯವಾಗಲಿದೆ. ಹೀಗಾಗಿ, ಆಯಾ ದಿನದ ಬೆಲೆ ಆಧರಿಸಿ ದರದಲ್ಲಿ ವ್ಯತ್ಯಾಸವಾಗಲಿದೆ.

ಮೂರು ವರ್ಷ ಹಿಂದೆ ತೆರಿಗೆ ಇಳಿಕೆ: ಮೂರು ವರ್ಷಗಳ ಹಿಂದೆ ಒಂದು ಲೀಟರ್ ಪೆಟ್ರೋಲ್ ಬೆಲೆ ₹ 100 ದಾಟಿದ್ದರಿಂದ ರಾಜ್ಯದ ಎಲ್ಲೆಡೆ ಪ್ರತಿಭಟನೆಗಳು ನಡೆದಿದ್ದವು. ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರ್ಕಾರ, ಕೇಂದ್ರ ಸರ್ಕಾರದ ಸೂಚನೆಯಂತೆ 2021ರ ನವೆಂಬರ್‌ನಲ್ಲಿ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 35ರಿಂದ ಶೇ 25.92ಕ್ಕೂ, ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 24ರಿಂದ ಶೇ 14.34ಕ್ಕೂ ಇಳಿಸಿತ್ತು. ಆಗ ₹ 7 ಕಡಿಮೆಯಾಗಿ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹ 100.63 ಮತ್ತು ಡೀಸೆಲ್ ದರ ₹ 85.03ಕ್ಕೆ ಇಳಿದಿತ್ತು.

ದರ ವ್ಯತ್ಯಾಸ

ಇಂಧನ	ಸದ್ಯ	ಪರಿಷ್ಕೃತ*
ಪೆಟ್ರೋಲ್	₹99.83	₹102.85
ಡೀಸೆಲ್	₹85.93	₹88.93

*ಜೂ.16ರ ದರ

ತೆರಿಗೆ ಏರಿಕೆ ಎಷ್ಟು (ಶೇಕಡಾವಾರು)

ಇಂಧನ	ಸದ್ಯ	ಪರಿಷ್ಕೃತ
ಪೆಟ್ರೋಲ್	25.92	29.84
ಡೀಸೆಲ್	14.34	18.44

ನೆರೆಯ ರಾಜ್ಯಗಳಲ್ಲಿ ತೈಲ ದರ (ಪ್ರತಿ ಲೀಟರ್‌ಗೆ ₹ಗಳಲ್ಲಿ)

ರಾಜ್ಯ	ಪೆಟ್ರೋಲ್	ಡೀಸೆಲ್
ಆಂಧ್ರಪ್ರದೇಶ	109.48	97.33
ತೆಲಂಗಾಣ	107	95
ತಮಿಳುನಾಡು	102.87	94.44
ಕೇರಳ	105.9	97.42
ಮಹಾರಾಷ್ಟ್ರ	103.84	90.35

ಸರ್ಕಾರ ಯಾವ ಭಾಗ್ಯ ಕೊಡದಿದ್ದರೂ ಪರವಾಗಿಲ್ಲ, ಬೆಲೆ ಏರಿಕೆಯ ದೌರ್ಭಾಗ್ಯವನ್ನು ಮಾತ್ರ ನಮ್ಮ ಮೇಲೆ ಹೇರಬಾರದು. ಬಿಜೆಪಿ ಹೋರಾಟ ನಡೆಸಲಿದೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ವಿದ್ಯುತ್ ದರ, ವಾಹನ ಶುಲ್ಕ ಏರಿಸಿ ಜನರಿಗೆ ನೇರ ಬರೆ ಎಳೆದಿರುವ ಸರ್ಕಾರ, ಬಜೆಟ್‌ನಲ್ಲಿ ಪ್ರಸ್ತಾಪಿಸದೇ ಪೆಟ್ರೋಲ್- ಡೀಸೆಲ್ ದರ ಹೆಚ್ಚಿಸಿರುವುದು ಜನರಿಗೆ ಮಾಡಿದ ದ್ರೋಹ

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

ಬಿಜೆಪಿಗೆ ಮತ ಹಾಕಿದ್ದಕ್ಕೆ ಸೇಡು: ಅಶೋಕ



ಆರ್.ಅಶೋಕ

ಲೋಕಸಭೆ ಚುನಾವಣೆಯಲ್ಲಿ ಕನ್ನಡಿಗರು ಬಿಜೆಪಿಗೆ ಮತ ಹಾಕಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಜನವಿರೋಧಿ ಕಾಂಗ್ರೆಸ್ ಸರ್ಕಾರ ಹೊರಟಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಪೆಟ್ರೋಲ್–ಡೀಸೆಲ್ ಮೇಲಿನ ತೆರಿಗೆ ಹೆಚ್ಚಳ ಕುರಿತು 'ಎಕ್ಸ್' ಮಾಡಿರುವ ಅವರು, ಅವೈಜ್ಞಾನಿಕ ಗ್ಯಾರಂಟಿಗಳಿಂದ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿರುವ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಮೇಲೆ ತೆರಿಗೆ ಭಾರ ಹೊರಿಸಿ ಖಜಾನೆ ತುಂಬಿಸಲು ಮುಂದಾಗಿದೆ. ದರವನ್ನು ಭಾರಿ ಹೆಚ್ಚಿಸಿ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕಿದೆ ಎಂದು ದೂರಿದ್ದಾರೆ.

ದುಬಾರಿ ಮದ್ಯಗಳ ಬೆಲೆ ಇಳಿಕೆ?

ನೆರೆ ರಾಜ್ಯಗಳ ಮದ್ಯದ ಬೆಲೆಗಳಿಗೆ ಅನುಗುಣವಾಗಿ ದೇಶೀಯವಾಗಿ ತಯಾರಿಸಿ ಮದ್ಯ (ಐಎಂಎಲ್) ಮತ್ತು ಬಿಯರ್‌ನ ಸ್ಲ್ಯಾಬ್‌ಗಳನ್ನು ಪರಿಷ್ಕರಿಸಲಾಗುವುದು ಎಂದು ಪ್ರಸಕ್ತ ಸಾಲಿನ (2024–25) ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದರು.

ಅದರಂತೆ, ದುಬಾರಿ ಬೆಲೆಯ ಮದ್ಯಗಳ (ಪ್ರೀಮಿಯಂ) ದರ ಇಳಿಸಲು ಅಬಕಾರಿ ಇಲಾಖೆ ಮುಂದಾಗಿದ್ದು, ಪರಿಷ್ಕೃತ ದರ ಪಟ್ಟಿ 3–4 ದಿನಗಳಲ್ಲಿ ಪ್ರಕಟವಾಗಲಿದೆ.

'ಬಜೆಟ್‌ನಲ್ಲಿ ಘೋಷಿಸಿದಂತೆ ಮದ್ಯದ ಘೋಷಿತ ಸ್ಲ್ಯಾಬ್‌ಗಳನ್ನು 18ರಿಂದ 14ಕ್ಕೆ ಇಳಿಸಲಾಗಿದೆ. ನೆರೆ ರಾಜ್ಯಗಳ ಮದ್ಯದ ಬೆಲೆಗಳಿಗೆ ಅನುಗುಣವಾಗಿ ಪರಿಷ್ಕರಿಸಲಾಗಿದೆ' ಎಂದು ಅಬಕಾರಿ ಇಲಾಖೆಯ ಮೂಲಗಳು ತಿಳಿಸಿವೆ.

ಪರಿಣಾಮಗಳೇನು?

- ಸ್ವಂತ ವಾಹನ ಹೊಂದಿದವರಿಗೆ ಆರ್ಥಿಕ ಹೊರೆ
- ಮಹಾನಗರಗಳಲ್ಲಿ ಕ್ಯಾಬ್ ಪ್ರಯಾಣ ದುಬಾರಿ
- ಸರಕು ಸಾಗಣೆ ವೆಚ್ಚ ಅಧಿಕ
- ಕೃಷಿಗೆ ಪೂರಕವಾದ ಟ್ರ್ಯಾಕ್ಟರ್, ಟಿಲ್ಲರ್, ಪಂಪ್‌ಸೆಟ್‌ಗಳ ಬಳಕೆ ವೆಚ್ಚ ಏರಿಕೆ
- ಸಾಗಣೆ ವೆಚ್ಚ ಹೆಚ್ಚಳದಿಂದ ದಿನಸಿ, ತರಕಾರಿ ಸೇರಿದಂತೆ ನಿತ್ಯ ಬಳಕೆಯ ವಸ್ತುಗಳ ಬೆಲೆ ಹೆಚ್ಚಳ
- ಸಾರ್ವಜನಿಕ ಬಳಕೆಯ ವಾಹನಗಳಾದ ಬಸ್, ಟೆಂಪೊ, ಜೀಪುಗಳ ಪ್ರಯಾಣ ದರ ಹೆಚ್ಚಳ
- ಶಾಲಾ–ಕಾಲೇಜುಗಳ ವಾಹನಗಳಿಗೂ ತಟ್ಟುವ ಬಿಸಿ
- ಡೀಸೆಲ್ ಆಧಾರಿತ ಮೀನುಗಾರಿಕೆ ದೋಣಿ, ಬೋಟ್‌ಗಳಿಗೆ ಹೊರೆ



ಬಕ್ರೀದ್ ಆಚರಣೆ ಅಂಗವಾಗಿ ಕಲಬುರಗಿಯ ನೆಹರೂ ಗಂಜ್‌ನ ಕಾಟನ್ ಮಾರುಕಟ್ಟೆಯಲ್ಲಿ ಶನಿವಾರ ಮಾರಾಟಕ್ಕೆ ತಂದಿದ್ದ ತನ್ನ ಕುರಿಹಿಂಡಿನೊಂದಿಗೆ ಕುರಿಗಾರನೊಬ್ಬ ಕಂಡಿದ್ದು ಹೀಗೆ – ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಮೈಕ್ರಾನ್‌ಗೆ ಕೇಂದ್ರದ ನೆರವು ಮಾತು ಬದಲಿಸಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಉದ್ಯಮದಲ್ಲಿ ಹೂಡಿಕೆ ಮಾಡುತ್ತಿರುವ ಕಂಪನಿಗೆ ₹16,710 ಕೋಟಿ (ಎರಡು ಬಿಲಿಯನ್ ಡಾಲರ್) ಸಹಾಯಧನ ನೀಡಿರುವುದಕ್ಕೆ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿದ್ದ ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ, ಒಂದೇ ದಿನದಲ್ಲಿ ತಮ್ಮ ಹೇಳಿಕೆ ಬದಲಿಸಿದ್ದಾರೆ.

ಜೆಡಿಎಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ್ದ ಅವರು, 'ಅಮೆರಿಕ ಮೂಲದ ಮೈಕ್ರಾನ್ ಟೆಕ್ನಾಲಜಿ ಗುಜರಾತ್‌ನಲ್ಲಿ ₹22,976 ಕೋಟಿ (2.75 ಬಿಲಿಯನ್ ಡಾಲರ್) ಹೂಡಿಕೆ ಮಾಡುತ್ತಿದೆ. ಅದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುತ್ತಿರುವ ಸಹಾಯಧನ ಶೇ 70ರಷ್ಟಿದೆ. ಕಂಪನಿ 5 ಸಾವಿರ ಉದ್ಯೋಗ ನೀಡುವ ಭರವಸೆ ನೀಡಿದೆ. ದೊರೆಯಲಿರುವ ಉದ್ಯೋಗ, ನೀಡುವ ಸಹಾಯಧನ ಲೆಕ್ಕ ಹಾಕಿದರೆ ಪ್ರತಿ ಉದ್ಯೋಗಕ್ಕೆ ₹3.2 ಕೋಟಿ ವೆಚ್ಚವಾಗುತ್ತದೆ. ಒಂದು ಉದ್ಯೋಗಕ್ಕೆ ಅಷ್ಟು ಹಣ ನೀಡುವುದು ಎಷ್ಟು ಸರಿ ಎಂದು ಸಚಿವನಾದ ನಂತರ ನಡೆದ ಮೊದಲ ಸಭೆಯಲ್ಲೇ ಅಧಿಕಾರಿಗಳನ್ನು ಪ್ರಶ್ನೆ ಮಾಡಿದ್ದೆ' ಎಂದಿದ್ದರು.

'ಈ ಸಭೆಯಲ್ಲಿ ನಾನು ಇದನ್ನು ಹೇಳಬಾರದು ಎಂದುಕೊಂಡಿದ್ದೆ. ಆದರೂ ಪ್ರಸ್ತಾಪಿಸುತ್ತಿದ್ದೇನೆ. ಬೆಂಗಳೂರಿನ ಪೀಣ್ಯದಲ್ಲಿಯೂ ಹಲವು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿವೆ. ಆ ಕಂಪನಿಗಳಿಗೆ ಎಷ್ಟು ಸಹಾಯಧನ ನೀಡಲಾಗಿದೆ' ಎನ್ನುವ ಮೂಲಕ ಕೇಂದ್ರದ ಸಹಾಯಧನದ ನೀತಿಯನ್ನು ಪ್ರಶ್ನಿಸಿದ್ದರು.

ತಮ್ಮ ಹೇಳಿಕೆ ಕುರಿತು ಶನಿವಾರ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ ಅವರು, 'ಮಾಧ್ಯಮಗಳು ನಾನು ಶುಕ್ರವಾರ ಹೇಳಿದ್ದ ಮಾತುಗಳನ್ನು ಸರಿಯಾಗಿ ಗ್ರಹಿಸಿಲ್ಲ. ಸೆಮಿಕಂಡಕ್ಟರ್ ವಲಯ ಕಾರ್ಯತಂತ್ರದ ಉದ್ಯಮ. ಎಲೆಕ್ಟ್ರಾನಿಕ್ಸ್ ಮತ್ತು ಆಟೊಮೊಬೈಲ್ ಉತ್ಪಾದನೆಗೆ ಮೂಲ ಅಗತ್ಯವಿರುವ ವಲಯ. ಈ ಎರಡೂ ಕ್ಷೇತ್ರಗಳು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತವೆ.

ಈ ಕ್ಷೇತ್ರಗಳ ಬೆಳವಣಿಗೆಗೆ ಪ್ರಧಾನಿ ಮೋದಿ ಅವರು ತೆಗೆದುಕೊಂಡ ಉಪಕ್ರಮಗಳನ್ನು ಶ್ಲಾಘಿಸುವೆ. ನನ್ನ ಸಚಿವಾಲಯದ ಮೂಲಕ ಅವುಗಳ ಅಗತ್ಯ ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಭಾರತ 2030ರೊಳಗೆ ಆರ್ಥಿಕವಾಗಿ ವಿಶ್ವದ ಮೂರನೇ ಸ್ಥಾನಕ್ಕೆ ಬರಬೇಕು. 2040ರೊಳಗೆ ವಿಶ್ವದ ಪ್ರಬಲ ಆರ್ಥಿಕ ಶಕ್ತಿ ದೇಶವಾಗಿ ಹೊಮ್ಮಬೇಕು. ಅದಕ್ಕಾಗಿ ಶ್ರಮಿಸುತ್ತೇವೆ' ಎಂದಿದ್ದಾರೆ.

'ಮೋದಿ ನೀತಿ ಗುಜರಾತ್‌ಗೆ ಸೀಮಿತ'

ಗುಜರಾತ್‌ನಲ್ಲಿ ಮೈಕ್ರಾನ್ ಟೆಕ್ನಾಲಜಿ ಕಂಪನಿ ಸೃಷ್ಟಿಸಲಿರುವ ಪ್ರತಿ ಉದ್ಯೋಗಕ್ಕೆ ದೇಶದ ಬೊಕ್ಕಸದಿಂದ ₹3.20 ಕೋಟಿ ಪ್ರೋತ್ಸಾಹ ಧನ ನೀಡುವುದನ್ನು ಪ್ರಶ್ನಿಸಿರುವ ಎಚ್.ಡಿ. ಕುಮಾರಸ್ವಾಮಿ ನಡೆಯನ್ನು ಸ್ವಾಗತಿಸಿರುವ ಕರ್ನಾಟಕದ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಕೇಂದ್ರದ ಈ ನೀತಿ ಪ್ರಧಾನಿ ಮೋದಿ ಅವರ ತವರು ರಾಜ್ಯಕ್ಕೆ ಸೀಮಿತವಾಗಿದೆ ಎಂದು ಕುಟುಕಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಅವರು, ಕೇಂದ್ರ ಸರ್ಕಾರ ಇದೇ ನೀತಿ ಮುಂದುವರಿಸುವುದಾದರೆ, ದೇಶದ ಎಲ್ಲ ರಾಜ್ಯಗಳಿಗೂ ಸಮಾನ ಸೂತ್ರ ಮತ್ತು ಅವಕಾಶ ದೊರಕಿಸಬೇಕು. ಸರ್ಕಾರದ ಬೊಕ್ಕಸದಿಂದ ಭಾರಿ ಪ್ರಮಾಣದ ಪ್ರೋತ್ಸಾಹ ಧನ ನೀಡುತ್ತಿದ್ದರೆ ಅಂತಹ ಘಟಕಗಳನ್ನು ಸಾರ್ವಜನಿಕ ವಲಯದ ಉದ್ಯಮವೆಂದೇ ಪರಿಗಣಿಸಬಹುದು ಎಂದಿದ್ದಾರೆ.

'ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್ ನೀಡಿದ್ದ ಆರೋಪಿಗಳು' ● ನಟನ ಮನೆಯಿಂದ ಹಲವು ವಸ್ತು ಜಪ್ತಿ

ದರ್ಶನ್, ಪವಿತ್ರಾಗೌಡ ಮತ್ತೆ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ





ಆರೋಪಿ ದರ್ಶನ್ ಮತ್ತು ಪವಿತ್ರಾಗೌಡ ಅವರನ್ನು ಶನಿವಾರ ಸಂಜೆ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪದ ಮೇಲೆ ಬಂಧಿಸಲಾಗಿರುವ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ ಇತರೆ ಆರೋಪಿಗಳನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಶನಿವಾರ ಮತ್ತೆ ಐದು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ದರ್ಶನ್ ಸೇರಿ ಎಲ್ಲ ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, 24ನೇ ಹೆಚ್ಚುವರಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಉಸ್ತುವಾರಿ ಆಗಿರುವ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶ್ವನಾಥ್ ಚನ್ನಬಸಪ್ಪ ಗೌಡರ್ ಅವರ ಮುಂದೆ ಹಾಜರು ಪಡಿಸಿದರು.

ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಲು ನೇಮಕವಾಗಿರುವ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ಹಾಗೂ ದರ್ಶನ ಪರ ವಕೀಲರ ವಾದ ಆಲಿಸಿದ ನ್ಯಾಯಾಲಯ ಮತ್ತೆ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತು. ಹೀಗಾಗಿ, ಜೂನ್ 20ರವರೆಗೆ ದರ್ಶನ್ ಮತ್ತು ಸಹಚರರನ್ನು ವಿಚಾರಣೆಗೆ ಗುರಿಪಡಿಸಲು ಪೊಲೀಸರಿಗೆ ಅವಕಾಶ ಸಿಕ್ಕಿದಂತಾಗಿದೆ.

ಕೊಲೆ ಪ್ರಕರಣದಲ್ಲಿ ಜೂನ್ 11ರಂದು 13 ಮಂದಿಯನ್ನು ಬಂಧಿಸಿ, ವೈದ್ಯಕೀಯ ಪರೀಕ್ಷೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ನ್ಯಾಯಾಲಯ ಆರು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತ್ತು.

ಪೊಲೀಸ್ ಕಸ್ಟಡಿ ಅವಧಿ ಭಾನುವಾರದ ವರೆಗೆ ಇತ್ತು. ಪ್ರಾಥಮಿಕ ಹಂತದ ತನಿಖೆಯಲ್ಲಿ ತಾಂತ್ರಿಕ ಸಾಕ್ಷ್ಯ, ಸಿಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಂಗ್ರಹಿಸಿ ಸ್ಥಳ ಮಹಜರು ನಡೆಸಿದ್ದ ಪೊಲೀಸರು ಆರೋಪಿಗಳನ್ನು ಒಂದು ದಿನ ಮೊದಲೇ (ಶನಿವಾರ) ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್: 'ರೇಣುಕಸ್ವಾಮಿ ಅವರ ಶವದ ಗುರುತು ಸಿಗದಂತೆ ಮಾಡಲು ಪ್ರಕರಣದ ಪ್ರಮುಖ ಆರೋಪಿ ₹30 ಲಕ್ಷ ಆಮಿಷ ಒಡ್ಡಿದ್ದರು. ಈ ಹಣವನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಆರೋಪಿಗಳಿಂದ 10 ಮೊಬೈಲ್ ಜಪ್ತಿ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಸಿ.ಡಿಯನ್ನು ನ್ಯಾಯಾಲಯ ಪರಿಶೀಲಿಸಬಹುದು. 5ನೇ ಆರೋಪಿ (ಮಂಡ್ಯದ ಜಿಲ್ಲೆಯ ಚಾಮಲಾಪುರದ ನಂದೀಶ) ಮತ್ತು 13ನೇ ಆರೋಪಿ (ಬೆಂಗಳೂರು ಆರ್.ಆರ್.ನಗರದ ದೀಪಕ್) ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್ ನೀಡಿದ್ದಾರೆ. ಇದಕ್ಕೆ ಬಳಕೆ ಮಾಡಿದ ವಸ್ತುವನ್ನು ವಶಪಡಿಸಿಕೊಳ್ಳಬೇಕಿದೆ' ಎಂದು ವಿಶೇಷ ಪ್ರಾಸಿಕ್ಯೂಟರ್ ಪಿ. ಪ್ರಸನ್ನಕುಮಾರ್ ಅವರು ನ್ಯಾಯಾಲಯದ ಗಮನಕ್ಕೆ ತಂದರು.

'ಬಂಧಿತ ಆರೋಪಿಗಳಿಂದ ವಶಕ್ಕೆ ಪಡೆದಿರುವ ಮೊಬೈಲ್‌ಗಳಲ್ಲಿನ ದತ್ತಾಂಶ ಸಂಗ್ರಹಿಸಬೇಕು. ಕೆಲವು ಕಡೆ ಸ್ಥಳ ಮಹಜರು ನಡೆಸಲಾಗಿದೆ. ಚಿತ್ರದುರ್ಗದಲ್ಲಿ ಶುಕ್ರವಾರ ಇಬ್ಬರನ್ನು ಬಂಧಿಸಲಾಗಿದೆ. ಅವರ ವಿಚಾರಣೆ ನಡೆಸಬೇಕಿದೆ. ಇನ್ನೂ ಹೆಚ್ಚಿನ ತನಿಖೆ ನಡೆಸುವ ಅಗತ್ಯ ಇರುವುದರಿಂದ 9 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಬೇಕು' ಎಂದು ಅವರು ಕೋರಿದರು.

ದರ್ಶನ್ ಪರವಾಗಿ ವಕೀಲ ಅನಿಲ್ ಬಾಬು ವಕಾಲತ್ತು ಹಾಕಿದ್ದು, ಪೊಲೀಸ್ ಕಸ್ಟಡಿಗೆ ನೀಡುವುದಕ್ಕೆ ಆಕ್ಷೇಪಿಸಿದರು. ನ್ಯಾಯಾಲಯದ ಅನುಮತಿ ಪಡೆಯದೇ ಪವಿತ್ರಾಗೌಡ ಅವರ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಸಾಮಾಜಿಕ ಮಾಧ್ಯಮದಲ್ಲಿ ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಆರೋಪದ ಮೇಲೆ ರೇಣುಕಸ್ವಾಮಿ ಅವರನ್ನು ಅಪಹರಿಸಿ ಪಟ್ಟಣಗೆರೆಯ ಶೆಡ್‌ಗೆ ಕರೆದೊಯ್ದು ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಅಲ್ಲದೇ ಮೃತದೇಹವನ್ನು ಕಾಲುವೆಗೆ ಎಸೆದಿದ್ದರು ಎಂಬ ಆರೋಪದ ಅಡಿ ಇದುವರೆಗೂ 16 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 302 (ಕೊಲೆ), 201 (ಸಾಕ್ಷ್ಯ ನಾಶ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಶ್ರುತಿಗೆ ಯುವ, ಬಿಳಿಗೆರೆಗೆ ಬಾಲ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಶ್ರುತಿ ಬಿ.ಆರ್.



ಕೃಷ್ಣಮೂರ್ತಿ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿ ಕೊಡಮಾಡುವ 2024ನೇ ಸಾಲಿನ 'ಯುವ ಪುರಸ್ಕಾರ' ಶ್ರುತಿ ಬಿ.ಆರ್. ಅವರ ಕವನ ಸಂಕಲನ 'ಜೀರೋ ಬ್ಯಾಲೆನ್ಸ್'ಗೆ ಹಾಗೂ 'ಬಾಲ ಸಾಹಿತ್ಯ ಪುರಸ್ಕಾರ' ಕೃಷ್ಣಮೂರ್ತಿ ಬಿಳಿಗೆರೆ ಅವರ 'ಭೂಮಂತ್ರಯ್ಯನ ಕತೆಗಳು' ಕೃತಿಗೆ ಲಭಿಸಿದೆ.

ಪ್ರಶಸ್ತಿ ಪುರಸ್ಕೃತರು ತಲಾ ₹50 ಸಾವಿರ ನಗದು ಹಾಗೂ ಫಲಕಗಳನ್ನು ಪಡೆಯಲಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.

ಶ್ರುತಿ ಅವರು ಮೂಲತಃ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ತಹಶೀಲ್ದಾರ್ ಆಗಿರುವ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಿಂದ ಪ್ರಥಮ ರ‍್ಯಾಂಕ್ ಹಾಗೂ ಐದು ಚಿನ್ನಗಳೊಂದಿಗೆ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ, ಪಿಎಚ್.ಡಿ ಪಡೆದಿದ್ದಾರೆ.

ಕೃಷ್ಣಮೂರ್ತಿ ಬಿಳಿಗೆರೆ ಅವರು ಹುಳಿಯಾರಿನ ಬಿಎಂಎಸ್ ಸರ್ಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಾವಯವ ಕೃಷಿ ಹಾಗೂ ಮಳೆನೀರು ಸಂಗ್ರಹ ಚಳವಳಿಗಳಲ್ಲಿ ಸಕ್ರಿಯರಾಗಿದ್ದಾರೆ. 'ಸಾವಿರ ಕಣ್ಣಿನ ನವಿಲು', 'ಕಿಂಚಿತ್ತು ಪ್ರೀತಿಯ ಬದುಕು', 'ದಾಸಯ್ಯ ಇದು ಕನಸೇನಯ್ಯ', 'ಧರೆ ಮೇಲೆ ಉರಿಪಾದ ಇವು' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

ಯುವ ಪುರಸ್ಕಾರಕ್ಕೆ ಕನ್ನಡದ ಲೇಖಕರಾದ ಪ್ರೊ.ಬಸವರಾಜ ಪಿ.ಡೋಣೂರ, ಡಾ.ಆರತಿ ಎಚ್.ಎನ್. ಹಾಗೂ ಪ್ರೊ.ಎಸ್.ಜಿ.ಸಿದ್ದರಾಮಯ್ಯ ತೀರ್ಪುಗಾರರಾಗಿದ್ದರು. ಬಾಲ ಸಾಹಿತ್ಯ ಪುರಸ್ಕಾರಕ್ಕೆ ಹಿರಿಯ ಸಾಹಿತಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ, ಡಾ.ಅಪ್ಪಗೆರೆ ಸೋಮಶೇಖರ್ ಹಾಗೂ ಶಂಕರ್ ಸಿಹಿಮೊಗೆ ತೀರ್ಪುಗಾರರಾಗಿದ್ದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



'ಭಾರತದ ಮಾತೆ ಇಂದಿರಾ'

ಪ್ರಜಾವಾಣಿ ವಾರ್ತೆ/ ಪಿಟಿಐ



ಇಂದಿರಾ ಗಾಂಧಿ



ಸುರೇಶ್ ಗೋಪಿ

ತಿರುವನಂತಪುರ: ಕೇಂದ್ರ ಸಚಿವ, ಬಿಜೆಪಿ ಮುಖಂಡ ಸುರೇಶ್ ಗೋಪಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರನ್ನು 'ಭಾರತದ ಮಾತೆ' ಮತ್ತು ಕೇರಳದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ದಿವಂಗತ ಕೆ. ಕರುಣಾಕರನ್ ಅವರನ್ನು 'ಧೈರ್ಯಶಾಲಿ ಆಡಳಿತಗಾರ' ಎಂದು ಬಣ್ಣಿಸಿದ್ದಾರೆ.

ಶನಿವಾರ ತ್ರಿಶೂರ್‌ನಲ್ಲಿರುವ ಕೆ. ಕರುಣಾಕರನ್ ಅವರ ಸ್ಮಾರಕಕ್ಕೆ ಭೇಟಿ ನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. 'ಇಂದಿರಾ ಅವರನ್ನು 'ಭಾರತದ ಮಾತೆ'ಯಾಗಿ ಪರಿಗಣಿಸುವಂತೆಯೇ, ಕರುಣಾಕರನ್ ಅವರನ್ನು ಕೇರಳದಲ್ಲಿ 'ಕಾಂಗ್ರೆಸ್‌ನ ತಂದೆ' ಎಂಬುದಾಗಿ ಪರಿಗಣಿಸುತ್ತೇನೆ' ಎಂದರು. ಕರುಣಾಕರನ್ ಮೇಲೆ ಇರುವ ಗೌರವದಿಂದಾಗಿ ಸ್ಮಾರಕಕ್ಕೆ ಭೇಟಿ ನೀಡಿದೆ ಎಂದೂ ತಿಳಿಸಿದರು.

ಕರುಣಾಕರನ್ ಅವರ ಪುತ್ರಿ, ಲೋಕಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್‌ನಿಂದ ಬಿಜೆಪಿ ಸೇರಿದ್ದ ಪದ್ಮಜಾ ವೇಣುಗೋಪಾಲ್ ಮತ್ತು ಕರುಣಾಕರನ್ ಅವರ ಪುತ್ರ ಕೆ.ಮುರಳೀಧರನ್ ಅವರು ಈ ವೇಳೆ ಕೇಂದ್ರ ಸಚಿವರ ಜತೆಗಿದ್ದರು. ತ್ರಿಶೂರ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸುರೇಶ್ ಗೋಪಿ, ಕೆ. ಮುರಳೀಧರನ್ ಅವರನ್ನು ಮಣಿಸಿದ್ದರು.

ಚಿನ್ನದ ಜಪಮಾಲೆ ಉಡುಗೊರೆ: ಗೋಪಿ ಅವರು ತ್ರಿಶೂರ್ ನಗರದ ಅವರ್ ಲೇಡಿ ಆಫ್ ಲೂರ್ಡ್ಸ್ ಚರ್ಚ್‌ಗೆ ಭೇಟಿ ಕೊಟ್ಟು, ಚಿನ್ನದ ಜಪಮಾಲೆ ಉಡುಗೊರೆಯಾಗಿ ನೀಡಿದರು.

ಅವರು ಕೆಲ ತಿಂಗಳ ಹಿಂದೆ ತಮ್ಮ ಮಗಳ ಮದುವೆಯ ಅಂಗವಾಗಿ ಮೇರಿ ಮಾತೆಯ ವಿಗ್ರಹಕ್ಕೆ ಚಿನ್ನದ ಕಿರೀಟ ನೀಡಿದ್ದು ಚರ್ಚೆಗೆ ಎಡೆಮಾಡಿಕೊಟ್ಟಿತ್ತು. ಕಿರೀಟದಲ್ಲಿರುವ ಚಿನ್ನದ ಪ್ರಮಾಣಕ್ಕೆ ಸಂಬಂಧಿಸಿದಂತೆ ರಾಜಕೀಯ ವಿರೋಧಿಗಳು ಅವರನ್ನು ಟೀಕಿಸಿದ್ದರು. ತ್ರಿಶೂರ್‌ನ ಕ್ರಿಶ್ಚಿಯನ್ ಮತ ಬ್ಯಾಂಕ್‌ನ ಬೆಂಬಲವೂ ಚುನಾವಣೆಯಲ್ಲಿ ಗೋಪಿ ಅವರ ಗೆಲುವಿಗೆ ಸಹಾಯ ಮಾಡಿದೆ ಎಂದು ವಿಶ್ಲೇಷಿಸಲಾಗಿದೆ.

ಟಿ20 ವಿಶ್ವಕಪ್: ಭಾರತ– ಕೆನಡಾ ಪಂದ್ಯ ರದ್ದು

ಲಾಡರ್‌ಹಿಲ್, ಫ್ಲಾರಿಡಾ (ಪಿಟಿಐ): ಭಾರತ ಮತ್ತು ಕೆನಡಾ ನಡುವಣ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಎ' ಗುಂಪಿನ ಲೀಗ್ ಪಂದ್ಯ ಶನಿವಾರ ಸುರಿದ ಮಳೆಗೆ ಕೊಚ್ಚಿಹೋಯಿತು.

ಭಾರತ ಮತ್ತು ಅಮೆರಿಕ ತಂಡಗಳು ಈಗಾಗಲೇ ಗುಂಪಿನಿಂದ ಸೂಪರ್ ಎಂಟರ ಹಂತ ಪ್ರವೇಶಿಸಿವೆ. ಮಳೆಯಿಂದ ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಿಕೆ ಮಾಡಲಾಯಿತು. ಭಾರತ 4 ಪಂದ್ಯಗಳಿಂದ 7 ಮತ್ತು ಕೆನಡಾ ತಂಡವು ಇಷ್ಟೇ ಪಂದ್ಯಗಳಿಂದ 3 ಅಂಕ ಗಳಿಸಿ ಲೀಗ್ ವ್ಯವಹಾರ ಮುಗಿಸಿದವು.

11

3843 ಅನಧಿಕೃತ ಬ್ಯಾನರ್ ಫ್ಲೆಕ್ಸ್‌ಗಳ ತೆರವು

ಬೆಂಗಳೂರು: ನಗರದಲ್ಲಿ ಜೂನ್ 1ರಿಂದ 3,843 ಅನಧಿಕೃತ ಫ್ಲೆಕ್ಸ್/ಬ್ಯಾನರ್‌ಗಳನ್ನು ತೆರವು ಮಾಡಲಾಗಿದೆ. ಪೊಲೀಸ್ ಠಾಣೆಗೆ 76 ದೂರುಗಳನ್ನು ಬಿಬಿಎಂಪಿ ನೀಡಿದ್ದು, ಈ ಪೈಕಿ 48 ಎಫ್‌ಐಆರ್ ದಾಖಲಿಸಲಾಗಿದೆ. ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹಾಕಿದ್ದವರಿಗೆ ಒಟ್ಟು ₹75 ಸಾವಿರ ದಂಡ ವಿಧಿಸಲಾಗಿದೆ. ಆರ್.ಆರ್.ನಗರ ವಲಯದಲ್ಲಿ ₹50 ಸಾವಿರ, ಪಶ್ಚಿಮ ವಲಯದಲ್ಲಿ ₹25 ಸಾವಿರ ದಂಡ ವಿಧಿಸಲಾಗಿದೆ. ಮಹದೇವಪುರದಲ್ಲಿ ಅತಿಹೆಚ್ಚು (2399) ಫ್ಲೆಕ್ಸ್ ತೆರವುಗೊಳಿಸಲಾಗಿದೆ. ಪಶ್ಚಿಮ ವಲಯದಲ್ಲಿ 23 ದೂರುಗಳು ದಾಖಲಾಗಿವೆ ಎಂದು ಪ್ರಕಟಣೆ ತಿಳಿಸಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳ ಕುರಿತು ಸಹಾಯವಾಣಿ 1533 ಅಥವಾ ಜಾಹೀರಾತು ವಿಭಾಗದ ವಾಟ್ಸ್ ಆ್ಯಪ್ 9480683939 ಸಂಖ್ಯೆಗೆ ಛಾಯಾಚಿತ್ರ ಅಥವಾ ವಿಡಿಯೊ ಕಳುಹಿಸಬಹುದು ಎಂದು ತಿಳಿಸಲಾಗಿದೆ.

ಭಾನುವಾರದ ಪುರವಣಿ ಓದಿರಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Admission

B.Tech Admission (Autonomous Institution)
EC • CE • ME • EEE • CS (AI) • Bio Chemical • Food Technology • Electronics and Computer Science
Hostel facility inside the campus, No Capitation
SREE BUDDHA COLLEGE OF ENGINEERING
Reaccredited by NBA. Reaccredited by NAAC. Included in 2(f) of UGC
Pattoor P.O, Alappuzha (Dist.), Kerala Pin - 690529
www.sbce.ac.in | E-mail: principal@sbce.ac.in
For Admission: 9446014317, 8590332548

AISECT UNIVERSITIES Spot Admission. UGC AICTU Government Recognised, Approved Courses. Metro College Day/ Evening: 9341273990

WANTED LECTURERS in English, Hindi, History and Librarian for VIDYAVANA PU College, Thirumalashettyhalli, Whitefield, Bengaluru. Contact 9663389388 on WhatsApp

SAMPOORNA GROUP of Institutions, Channapatna Required BE:Prof,ASP,AP For all Subjects. B.Sc.(Hons) Ag:Prof,ASP,AP For all Subjects Lab technicians, Asst's, Wardens, Facilities Manager, Internal Auditor, System admin,Cooks etc. Qualification & Pay as-per norms. Send CV with photo before 21st June to sampurnabrundavan@gmail.com www.sampoornainstitutions.org

TRIVENI MEMORIAL Educational Trust. Bagalgunte, Hesaraghatta Main Road, Bangalore-73. Require Trained Graduate Teachers for English -3, Social Science -2, Hindi -2. CBSE & ICSE. Walk-in Interview on 19/06/24 between 10.30 am to 3.30 pm. Phone: 080: 23721148

WANTED BE/DIPLOMA/ITI in Electrical, Mechanical, Computers, Electronics English M.A, B.A, B.Sc, B.Ed, Clerk Computer Operator Attender to take part time / Full time Diploma Day & Evening classes, High school classes, ITI, Paramedical Classes.Contact personally with resume, original documents.Nadgir Institute Near Modi Hospital Rajajinagar Bangalore – 560010. Ph:23387333, 8867065525, 9731721446.

Swamy Vivekananda Rural Education Society®1963
Chandapura, Anekal Taluk,Bengaluru-560099
www.svres.org Mob: 9606009890
email: hrsvres1963@gmail.com
Invites applications for recruitment to the following posts
Asst Teachers for English Medium School
Social Science: M.A/B.A, B.Ed
Lecturers for Pre University College
M.A B.Ed in English
M.Com, B.Ed
Lecturers for First Grade College
MCA/MSc in Computer Science (NET preferable)
Interested and eligible candidates with relevant experience are requested to send Bio data addressed to the Secretary, SVRES with copies of relevant documents through mail or whatsapp to reach us on or before 20/06/2024. Sd/- Secretary

OM SHANTIDHAMA VEDA PATHASHALA
Affiliated to MSRVVP, Ministry of Education, Govt. of India, Ujjain
Room No: 03, Sy No: 58 & 67, Kanthalahanapalya, Pipeline Road, Kaggalipura, Bangalore - 560 116. Ph: 08861069640
TEACHER REQUIRED
1. SANSKRIT + SOCIAL – 1 post Min. age – 25 yrs along with 1-year exp Qual: BA (Sans) or Shastri (in trad method) and knowledge in any of the following Subjects: History, Geography, Political Science, Science., Psychology, Anthro., Social Studies and Social work.
Candidates with Basic knowledge of Yoga and Comp are required. Preference will be given to M.A (Sans)/Acharya/B. Ed Monthly Hon. – Rs. 30,000/- (Rupees Thirty Thousand with food and accommodation) The terms and conditions for the post will be as per MSRVVP, Ujjain.
Interested candidates please apply with Resume, Copy of self-attested Aadhar card along with relevant documents and application before 1st July, 2024 to: Email - osdsociety@gmail.com.

JOB OPPORTUNITIES

Factory

REQUIRED: DIPLOMA MECHANICAL: QC ITI/ FITTER/ MACHINE OPERATOR Mysore Road, Byatarayanapura, Bangalore- 560026 Contact: 76248-34251/ 26744597/551 Email: tisaenterprises@gmail.com

Teachers/ Professors

WANTED TEACHER B.Sc.,B.Ed (Science, Maths) for St.Peters English High School. Contact: 080-23388262, 9611625663

MATHEMATICS TEACHER for Part-time/Full-time. Contact: ABDUL BARI'S HIGH SCHOOL, Near Coles Park Whatsapp-9353111888

WANTED QUALIFIED Primary/ High School/ Computer Teachers for English/ Social Studies Royal English School Rajajinagar: 9611878492/ 8861406060/ 9945276973

EDUCATION To Place your Classified Ads Contact: 9845114560

Accounts & Finance

FRESH B.COM GRADUATES ABOVE 75% MARKS HAVING COMPUTER AND TALLY KNOWLEDGE TO BE ENGAGED AS ARTICLED ASSISTANTS FOR CA FIRM OR FOR REGULAR EMPLOYMENT. SEND YOUR RESUME TO headoffice@acharya.co MOBILE NO. : 9901612959

WANTED LADY Accountant preferably BCom graduate, knowledge of Excel, Tally, Bank Reconciliation must with 3-4 years experience. Contact: 9845249184

"HIRING GRADUATE Female Accounts/ Billing Assistant- Appliances Showroom in Jayanagar, salary 20k- 25k. Call: 9845088449"

WANTED ACCOUNTS ASST (Male) Tally & GST work Salary: Negotiable Ph:9980140661 Mail: starsilks@gmail.com

Drivers

"WANTED EXPERIENCED- CAR DRIVER in Bangalore City for 9 Hours Duty, Salary: Rs.18,000/-. Contact: 8088174438"

Engg/ Production Technical

WANTED QUALIFIED CIVIL ENGINEER with 5 to 10 Years of Experience in Construction of Multi-Storey Buildings for a reputed Construction Company. Interested candidates can forward resume to: enquiries@farahgroup.in

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

WANTED CANDIDATES PUC/ Graduates (Science only) age 25- 32. Freshers Anekal/ Shanthalanagar given Training. 7892714526.

Marketing & Sales

WANTED Sales Executives
Esquire Surgicals requires for All District Head Quarters in Karnataka.
Email resume to : bangesq@gmail.com

LOOKING FOR Smart and Dynamic Executive To Do Real Estate Business in our Plug & play office.Contact :9845835350.

Wanted

REQUIRED SHOWROOM and Field MALE SALES EXECUTIVE. Age Limit 25-45 Years. For Swastik Ceramics Co. Jayanagar 5th Block. Contact: 9741040290

WANTED RETIRED EX-SERVICEMEN for the post of GUN MAN and DRIVER for reputed company. at Bangalore 7550042522/ 9113668306

INTRA LABS
44 Years Successfully, WHO-GMP Certified Company
Pharma Franchise
BUSINESS Opportunity
in Bangalore, all Karnataka
More Than 800 Pharmaceuticals Products Latest Molecules
We Offer : Wide Range of Products, Best Quality Assurance, Affordable Prices, Assured High Returns, Promotional Support
Mob. : 09353077057/09901333611/09342990032
No.39, 1st Floor, New Timberyard Layout, Byatarayanpura, Mysore Road, Bangalore-560 026.
E-mail : feedbackintralabs@gmail.com,salesintralabs3637@gmail.com

BUSINESS

Business Offers

Business For Sale

WELL ESTABLISHED 22 year old poly clinic with Dental facility for Sale in J.C. Nagar, near T.V. Tower, Bangalore. Contact no- Dr K.S. Mahesh- 9343709777

Finance

LOAN AGAINST Property/ Business/ Projects. Contact :+918754809650

Business to Business

Business

TRAINING OFFERED for LED Bulbs Making Home Industry, Bangalore Low Investment, Fees 8500/- Equipments, Raw Materials Address Provided Contact VIJAY: 9845463535

SALE HYDERABAD (Kondapur) Commercial building 238793 sft, 8 Floors, land 65340 Sft. Vamshadhara Projects:- 9342247637.

PERSONAL

Change of Name

CHANGE OF NAME
I, HARSHA MANOJ BHAGWAT, residing at # A-302, V R R Heritage, Sy.No. 29/1, Near BMA College, Doddanekkundi, Bengaluru-560037, have changed my name to HARSHA SHASHANK KALE vide affidavit dated 15.06.2024 before notary V. Rajashekhara, Bengaluru. Henceforth I shall be know as HARSHA SHASHANK KALE only

I, JAGADEESH KUMAR S. S/o. Shivashankaraiah R/a Rajapura Village Jigani Hobli, Anekal Taluk Bengaluru District.have changed my minor Daughter's Name from INCHARA. J to INCHARA ARADHYA. J (DOB: 10.8.2012) vide`affidavit dated`10.6.2024 sworn before Notary Muniswamy.T. Anekal Town Bangalore District.

MORE Classifieds Ads on Subsequent Pages

ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್

‘ನೌಕರರ ಅಸಮಾಧಾನ ತಣಿಸುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಚಲಾಯಿಸಿದ ಅಂಚೆಮತಗಳು ರಾಜ್ಯ ಸರ್ಕಾರದ ವಿರುದ್ಧ ಸರ್ಕಾರಿ ನೌಕರರು ಅಸಮಾಧಾನ ಗೊಂಡಿರುವುದಕ್ಕೆ ಸಾಕ್ಷಿಯಾಗಿವೆ. ಕಾಂಗ್ರೆಸ್ ಅಭ್ಯರ್ಥಿಗಳಿಗೆ ಈ ಬಾರಿ ಕಡಿಮೆ ಮತಗಳು ಬಂದಿವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ನಗರ, ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



'ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ'ದ "ಪ್ರತಿಭಾ ಪುರಸ್ಕಾರ ಕಾರ್ಯಕ್ರಮ"ದಲ್ಲಿ ಬೆಂಗಳೂರು ನಗರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸರ್ಕಾರಿ ನೌಕರರ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. (ಎಡದಿಂದ ನಿಂತವರು) ಸಂಘದ ಹಿರಿಯ ಉಪಾಧ್ಯಕ್ಷ ಎಂ.ವಿ ರುದ್ರಪ್ಪ, ನಗರ ಜಿಲ್ಲೆಯ ಜಿಲ್ಲಾಧಿಕಾರಿ ಕೆ.ಎ ದಯಾನಂದ, ಡಿಸಿಎಂ ಡಿ.ಕೆ ಶಿವಕುಮಾರ್, ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಎಸ್ ಹೊರಟ್ಟಿ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ, ಖಜಾಂಚಿ ಡಾ.ಸಿದ್ದರಾಮಣ್ಣ ಎಸ್, ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಬಾಲಕೃಷ್ಣ ಎಚ್, ರಾಮನಗರದ ಜಿಲ್ಲಾಧ್ಯಕ್ಷ ಕೆ. ಸತೀಶ್ ಇದ್ದರು —ಪ್ರಜಾವಾಣಿ ಚಿತ್ರ

‘ಏಳನೇ ವೇತನ ಆಯೋಗದ ಶಿಫಾರಸುಗಳ ಜಾರಿಗೆ ಸರ್ಕಾರ ಬದ್ಧವಾಗಿದೆ. ನೌಕರರ ಎಲ್ಲ ಬೇಡಿಕೆಗಳನ್ನು ಹಂತಹಂತವಾಗಿ ಈಡೇರಿಸಲಾಗುವುದು. ಸರ್ಕಾರಿ ನೌಕರರ ಸಮಸ್ಯೆಗಳ ಅರಿವಿದೆ. ಮಂತ್ರಿಗಳು ಸರ್ಕಾರದ ಸೇವಕರೇ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಪ್ರಾಮಾಣಿಕ ಪ್ರಯತ್ನಿಸೋಣ’ ಎಂದರು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿನಿ 625ಕ್ಕೆ 625 ಅಂಕ ಗಳಿಸಿದ್ದಾರೆ. ಹಳ್ಳಿ ಮಕ್ಕಳು ಕೂಡ ಸಮರ್ಥರಿದ್ದಾರೆ. ಉತ್ತಮ ಶಿಕ್ಷಕರು ಇದ್ದಾರೆ. ಪ್ರತಿ ಎರಡು ಅಥವಾ ಮೂರು ಪಂಚಾಯ್ತಿಗೆ ಒಂದರಂತೆ ಸಿಎಸ್‌ಆರ್ ನಿಧಿಯಲ್ಲಿ ಪಬ್ಲಿಕ್ ಶಾಲೆ ನಿರ್ಮಾಣ ಮಾಡಲಾಗುವುದು. ಪ್ರತಿಷ್ಠಿತ ಶಾಲೆಗಳು ಇಂತಹ ಶಾಲೆಗಳ ಜವಾಬ್ದಾರಿ ಪಡೆದು, ಶಿಕ್ಷಕರ ಸೇವೆಯನ್ನೂ ಒದಗಿಸಲಿವೆ. ಖಾಲಿ ಇರುವ 50 ಸಾವಿರ ಶಿಕ್ಷಕರ ಹುದ್ದೆಗಳ ಭರ್ತಿಗೂ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಜಿಲ್ಲಾಧಿಕಾರಿ ಕೆ.ಎ. ದಯಾನಂದ್, ರಾಜ್ಯ ಸರ್ಕಾರಿ ಕೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಉಪಸ್ಥಿತರಿದ್ದರು.

ಸುಧಾ, ಮಯೂರ ಓದಿರಿ

ನಗರದಲ್ಲಿ ಇಂದು

‘ದೊಡ್ಡ ಆಲದಮರ ಉಳಿಸಿ’ ಯೂನಿವರ್ಸಲ್ ಮ್ಯಾರಥಾನ್: ಭಾಗವಹಿಸುವವರು: ಅ.ನ.ಯಲ್ಲಪ್ಪ ರೆಡ್ಡಿ, ಡಾ.ಪ್ರವೀಣ್ ಕುಮಾರ್, ಜಯರಾಮ್, ಆರ್. ಉಪೇಂದ್ರ ಶೆಟ್ಟಿ, ಅತಿಥಿ: ಸಾಲುಮರದ ತಿಮ್ಮಕ್ಕ, ಕಿರಣ್ ಶೆಟ್ಟಿ, ಆಯೋಜನೆ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ಮ್ಯಾರಥಾನ್ ಪ್ರಾರಂಭವಾಗುವ ಸ್ಥಳ: ರಾಮೋಹಳ್ಳಿ ಗೇಟ್, ಮೈಸೂರು ರಸ್ತೆ, ಬೆಳಿಗ್ಗೆ 7

ಗುರುವಂದನ–2024 ಸಂಗೀತ ಕಛೇರಿ: ಉಸ್ತಾದ್ ಅಹಮದ್ ಜಾನ್ ತಿರಕ್ವ, ಲಾಲಜಿ ಗೋಖಲೆ, ಶೇಷಗಿರಿ ಹಾನಗಲ್, ಬಸವರಾಜ್ ಬೆಂಡಿಗೇರಿ, ಜಿ.ಜಿ.ಹೆಗಡೆ, ರವೀಂದ್ರ ಯಾವಗಲ್, ಗುರುಮೂರ್ತಿ ವೈದ್ಯ, ಅತಿಥಿಗಳು: ಶ್ರುತಿ ಕಾಮತ್, ಸುಬ್ರಾಯ ಭಟ್, ಆಯೋಜನೆ: ನಧಾ ಫೌಂಡೇಷನ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 9

‘ಸಮರ್ಪಣಾ’ ಈಶಾವಾಸ್ಯ ಉಪನಿಷತ್ತು, ಬೆರಗಿನ ಬೆಳಕು ಭಾಗ–3 ಮತ್ತು ಭಾಗ–4 ಪುಸ್ತಕಗಳ ಬಿಡುಗಡೆ: ಅತಿಥಿಗಳು: ಶಿವರಾಜ ವಿ. ಪಾಟೀಲ, ಗುರುರಾಜ ಕರಜಗಿ, ವಿಶ್ವೇಶ್ವರ ಭಟ್, ಆಯೋಜನೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸ್ಥಳ: ಬಿಜಿಎಸ್ ಸಭಾಂಗಣ, ಬಿಜಿಎಸ್‌ಸಿಇಟಿ ಕ್ಯಾಂಪಸ್, ಮಹಾಲಕ್ಷ್ಮೀಪುರ, ಸಂಜೆ 4



ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅಂಜಲಿ ಎಸ್., ಅತಿಥಿಗಳು: ರಕ್ಷಾ ಕಾರ್ತಿಕ್, ಎಚ್. ಎನ್. ಆರತಿ, ಪೂರ್ಣಿಮಾ ಗುರುರಾಜ್, ಪದ್ಮಿನಿ ಶ್ರೀಧರ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 4.30

ಕಾಸೀಂ ಕನಸಾವಿ ನೆನಪಿನ ಕಲಾ ಬಾಗಿನ ಕಲಾಶಿಬಿರ: ಉದ್ಘಾಟನೆ: ಚಂದ್ರಕಾಂತ್ ಸರೋದೆ, ಅತಿಥಿಗಳು: ರವೀಂದ್ರ ಆಚಾರ್, ನಿರ್ಮಲ ನಾದನ್, ಪ್ರದೀಪ್ ತಿಪಟೂರು, ರವಿಕುಮಾರ್ ಬಿ.ಎಸ್., ಸರ್ವೇಶ್ ಹೆಣ್ಣೂರು, ಸಂಸ ಸುರೇಶ್, ಮುರಳೀಧರ ರಾಥೋಡ್, ಬೈರ ಎಸ್., ಆಯೋಜನೆ: ಕರ್ನಾಟಕ ರಂಗ ಪರಿಷತ್ತು, ಸ್ಥಳ: ಕೆ.ಆರ್.ಪಿ. ಇಂಟಿಮೆಂಟ್ ಥಿಯೇಟರ್, ಆರ್.ಆರ್. ನಗರ, ಬೆಳಿಗ್ಗೆ 10

‘ಗೋವಿಂದ ಜಾಲಿಹಾಳ್ ದತ್ತಿ’ ಭಕ್ತಿ ಗೀತೆಗಳ ಗಾಯನ ಸ್ಪರ್ಧೆ, ಬಹುಮಾನ ವಿತರಣೆ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಮಿಲಿಂದ್ ಜಿ. ಜಾಲಿಹಾಳ್, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

2023–24ನೇ ಸಾಲಿನ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಬಿ.ಬಿ. ಕಾವೇರಿ, ಕೊಂಡಜ್ಜಿ ಬ.ಷಣ್ಮುಖಪ್ಪ, ಪಿ.ಜಿ.ಆರ್.ಸಿಂಧ್ಯ, ಕೆ. ಗಂಗಪ್ಪಗೌಡ, ಅಧ್ಯಕ್ಷತೆ: ಬಿ.ಆರ್. ಪ್ರಸನ್ನ ಕುಮಾರ್, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಆರ್.ಟಿ. ನಗರ ಪಬ್ಲಿಕ್ ಶಾಲೆ, ನಂ. 14 (ಪಿ), ಕೆ.ಎಚ್. ಎಂ.ಲೇಔಟ್, ದಿನ್ನೂರು ಮುಖ್ಯರಸ್ತೆ, ಆರ್.ಟಿ. ನಗರ, ಬೆಳಿಗ್ಗೆ 11

ಎ.ಎಸ್. ಶ್ರೀಕಾಂತಯ್ಯ ಸ್ಮಾರಕ ದತ್ತಿ, ಪ್ರೊ.ಎಂ.ಪಿ.ಎಲ್. ಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ: ಆರ್.ಎಚ್. ಕುಲಕರ್ಣಿ, ಎಸ್.ಆರ್. ಲೀಲಾ, ಎಸ್. ಮುರಳೀಧರ ಶರ್ಮಾ, ಆಯೋಜನೆ ಮತ್ತು ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಸಿ.ಚಂದ್ರಶೇಖರ್ ಅವರ ‘ಕಾವೇರಿ ವಿವಾದ–ಒಂದು ಐತಿಹಾಸಿಕ ಹಿನ್ನೋಟ’ ಪುಸ್ತಕ ಬಿಡುಗಡೆ: ವಿ.ಗೋಪಾಲಗೌಡ, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಅತಿಥಿ: ದಿನೇಶ್ ಅಮಿನ್ ಮಟ್ಟು, ಉಪಸ್ಥಿತಿ: ಅಭಿರುಚಿ ಗಣೇಶ್, ಸ್ಥಳ: ಗಾಂಧಿ ಭವನ, ಮಹಾದೇವ ದೇಸಾಯಿ ಸಭಾಂಗಣ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 11


ಡಾ.ಎಲ್.ಹನುಮಂತಯ್ಯ–65: ಉದ್ಘಾಟನೆ: ಸಂತೋಷ್ ಲಾಡ್, ಪುಸ್ತಕಗಳ ಬಿಡುಗಡೆ: ಎಚ್.ಎಸ್. ಶಿವಪ್ರಕಾಶ್, ಅತಿಥಿಗಳು: ಎಚ್.ಎನ್. ಆರತಿ, ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಬಿ.ಕೆ.ಚಂದ್ರಶೇಖರ್, ಪ್ರಾಸ್ತಾವಿಕ: ಎಲ್. ಎನ್.ಮುಕುಂದರಾಜ್, ಆಯೋಜನೆ: ಭಾಗವತರು, ಸ್ಥಳ:ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘ವಚನ ಗಾನ ಯಾನ–5’ ಸಮಾರೋಪ ಸಮಾರಂಭ: ಉದ್ಘಾಟನೆ: ಪ್ರಿಯಕೃಷ್ಣ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಪ್ರಶಂಸಾಪತ್ರ ಪ್ರದಾನ: ಮಹೇಶ ಬೆಲ್ಲದ, ಅತಿಥಿಗಳು: ವೇ.ವಿ. ಶ್ರೀನಿವಾಸ ರಾಮಾನುಜ ಭಟ್ಟಾಚಾರ್ಯ, ಶಶಿ ವಿಶ್ವನಾಥ್, ವಿ. ರಾಮಾಂಜಿನಿ, ಆಯೋಜನೆ: ಪ್ರಪುಣ್ಯ ಸಂಗೀತ ಶಾಲೆ, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಮಧ್ಯಾಹ್ನ 12

‘ಚಿದ್ರೂಪದರ್ಶನಂ’ ನೃತ್ಯರೂಪಕ ಪ್ರದರ್ಶನ: ಅತಿಥಿಗಳು: ಎಸ್.ಆರ್. ವಿಜಯಶಂಕರ, ಆರ್. ಚಂದ್ರಶೇಖರ್, ಆಯೋಜನೆ: ನೃತ್ಯ ಸಂಜೀವಿನಿ ಅಕಾಡೆಮಿ, ಸ್ಥಳ: ಯುವಪಥ, ಜಯನಗರ 4ನೇ ಬ್ಲಾಕ್, ಮ. 3.30

ಸಮರ್ಪಣಾ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್ ಬೃಂದಾವನ, ಕಾಡುಗೋಡಿ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಅನಘಾ ಎಸ್. ಬೀಡು, ಅತಿಥಿ: ಮಾನಸ ಪಿ., ಆಯೋಜನೆ: ಮನೋಜ್ಞ ನೃತ್ಯ ಕಲಾ ಅಕಾಡೆಮಿ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30



‘ಸಲಾಕೆ ಸೂತ್ರದ ಬೊಂಬೆಯಾಟ’ ಪ್ರದರ್ಶನ: ಕಥಾ ಪ್ರಸಂಗ: ಪ್ರಹ್ಲಾದ ಚರಿತ್ರ, ನಿರ್ದೇಶನ: ರವೀಂದ್ರ ನರಹರಿ, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, 1ನೇ ಬ್ಲಾಕ್, ರಾಜಾಜಿನಗರ, ಸಂಜೆ 5

‘ಲಾಸ್ಯ ಪುರುಷ’: ಸನ್ಮಾನಿತರು: ಮುರಳಿ ಮೋಹನ್, ಪುಲಕೇಶಿ ಕಸ್ತೂರಿ, ಸುಗ್ಗನಹಳ್ಳಿ ಷಡಕ್ಷರಿ, ಚೇತನ ಗಂಗಟ್ಕರ್, ಅತಿಥಿಗಳು: ಆರ್.ವಿ. ರಾಘವೇಂದ್ರ, ಟಿ.ಎನ್. ಶಿವಕುಮಾರ್, ಕೃಪಾ ಫಡ್ಕೆ, ಆಯೋಜನೆ: ಲಾಸ್ಯ ಅಕಾಡೆಮಿ ಆಫ್ ಡಾನ್ಸ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನಂದಾ ನರೇಂದ್ರಾ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸರಣಿ ಅಪಘಾತ, 7 ಕಾರು ಜಖಂ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ): ತಾಲ್ಲೂಕಿನ ಗೆಜ್ಜಲಗೆರೆ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶನಿವಾರ ಬೆಳಿಗ್ಗೆ 6 ಗಂಟೆ ಸುಮಾರಿಗೆ ಸರಣಿ ಅಪಘಾತ ಸಂಭವಿಸಿದ್ದು, ಏಳು ಕಾರುಗಳು ಜಖಂಗೊಂಡಿವೆ.

ಹೆದ್ದಾರಿಯಲ್ಲಿ ಸರಕು ಸಾಗಣೆ ವಾಹನ ಅಪಘಾತವಾಗಿರುವುದನ್ನು ನೋಡಲು ಕಾರೊಂದು ನಿಲ್ಲಿಸಿದ ವೇಳೆ ಹಿಂಬದಿಯಿಂದ ಬರುತ್ತಿದ್ದ ಕಾರುಗಳು ಒಂದರ ಹಿಂದೆ ಒಂದರಂತೆ ಡಿಕ್ಕಿ ಹೊಡೆದಿವೆ. ಕಾರುಗಳಲ್ಲಿದ್ದ ಆಗ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಪಟ್ಟಣದ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಮಹೇಶ್ ಸ್ಥಳಕ್ಕೆ ಭೇಟಿ ನೀಡಿ, ವಾಹನ ಸಂಚಾರ ಸುಗಮಗೊಳಿಸಿದರು. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA SITE for Sale Anjanapura 8th Block 40x60 West Facing Call : 8660800061

SALE BDA Anjanapura 5th G Block 30x40 south Facing 95 lakh also 40x60 west facing 9th Block. 9620041313, 9945373839

Arkavathi Layout

BDA-SITE FOR Sale Arkavathi Layout 15th_Block 40x60. Jakkur Srirampura 5500sqft For Sale Call:7676900174 6363496142

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

SALE: 30*40 North Facing BDA Site Near Patallamma TempleAdjacent to 80ft Utarahalli Main Rd Banashankari 5th stagePh 9731225386

HOUSE FOR Sale at 25x40 East Facing Hosakerahalli, BSK 3rd Stage, Near Ring Road, G+2 also at 20x30 Site North Facing Anjanapura 2nd Block. 9945427003

SALE BSK 6th Stage 4th H Block 30x40 west Facing 95 lakh Also 40x60 Facing 6th Block 1.90cr Negotiable all owners site 9945373839, 9620041313

50 X 80 BDA Site for Sale at Banashankari 6th Stage 4th B Block, further extension. Contact 9448612751

Basavanagudi

SALE 1248 sft East Facing Site Shankarpuram Main Road Rs.43000/- sft Negotiable Call:9886673794 6364580004

Bannerghatta Road

SALE 7ACRES LAND Clear Title, Sakalavara Village, Can Reach On Asphalt Road, Nearby Banneraghatta Road. 9480316343

Jayanagar

SALE 30X50 Jayanagar 3rd Block East, North Facing Site_With old House Excellent Location Call:9844134068 9066399102

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

Kengeri

30X40 CORNER Varahasandra Layout Hemmigepura Ward Opposite Kadalekai Parishe DC Conversion B Katha 3800/- 7899452398

Kanakapura Road

SITE FOR Sale Kanakapura Road Judicial Layout & Vakil 40x60, 50x80, 30x40 Call: 7892243616

SALE: BMRDA Harohalli Near NH Kanakapura Road 600, 900, 1000, 1150 Sft West Facing SITES. Price 2500 Per Sft Contact: 6366001234

SALE BDA approved Balaji Layout, Kanakapura Road 30x40 East Facing, Near Metro Station. Rate 1.25Cr 9945373839, 9620041313

EAST FACING 40X60 site for sale behind saint gobain KIADB industry area Harohalli Kanakapura main road 6362905595

SALE NARAYANA Nagar 1st Block 40x60 South Facing 500 metre Metro station Kanakapura Road. 9945373839, 9620041313

Kempegowda Layout

"KEMPEGOWDA LAYOUT 4th-Block 'A'.Sector 30x40 50'meater from- Periperal Ring_Road,& 25'Meater Padmashree College`& 6th_Block 'J'.Sector 30x40'North. Direct_Owner. 9845050773"

"PURE-RESIDENTIAL 40X60-SITE sale, KNS_Anirvan, close_to 300'ft Ring-Road, West_facing, BDA'katha 40'ft'Road, behind_BigPark. Contact: 9886809049

KEMPEGOWDA LAYOUT, BDA Site for Sale 20x30, 30x40, 40x60, 50x80, Contact Kumar: 9945119449

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

Manyata Tech Park

90X120, EAST Facing, Prime Residential Property for Sale, Near Shivaraj Kumar House. Contact: 8217243520/ 9900922644

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

Multiple Locations

A-KHATA SITES for Sale in Harulkunta, Kudlu, near HSR Layout. and Converted Sites for Sale in Devasandra Village, K.R.Puram. Contact:9845539612.

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

"30X50 SOUTH-FACING site for sale @_Nelamangala Rashi_developers close_to D-Mart Tumkur highway. 9845268611"

Rajajinagar

***RAJAJINAGAR* 5TH** Block 68th Cross 1500 sqft South Facing Rs.25000/- sqft Slightly Negotiable. Contact: 9686469799

30X50 SITE Sale West Rajajinagar 2nd Stage, Near Vani School 20000/- Negotiable Genuine Buyers: 9448477376

Rajarajeshwari Nagar

RAJARAJESHWARI NAGAR Ideal Homes 50x80, 70x96, 80x120. BEML 40x60, 50x80 and Commercial Building, Banashankari 6th Stage 30x40, 40x60, 50x80. 94484-83699

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

AVAILABLE BDA Sites 40X60, 30X40 Vishweshwaraiah Layout 1st Block, 2nd Block 40ft Road Good Location: 9844603127

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

VISVESWARIAH LAYOUT 5th Block near KLE College & 100 feet Rd BDA West facing 30X40 Site for immediate sale. HN 9900339878/ 9844039878.

SALE VISHVESHWARAIAH 4th Block 30X40 South No. 1319 3rd Block No. 2197 South, 2nd Block 40x60 No.786: 9448045601/ 9535811626

"30X50 WF PRIME RESIDENTIAL SITE SALE RAILWAY LAYOUT [NEAR VIDYANIKETHANA SCHOOL]. GENUINE BUYERS CONTACT- 9845143579"

BDA SALE 20x30 East facing SMV Layout 8th block, clear titles. Contact: 9019962007.

Magadi Road

RESIDENTIAL SITE 6400sft in Andrahalli near Magadi Road BBMP limits next to Nice Road B Khatha. 4000/- per sft, negotiable. Owner Ph. 94833 99000.

Sanjaynagar

RMV BHOOPASANDRA BDA Site 29'x57' East 40' Road besides Central Excise, Off Chawla Road Rs. 3.30 Crore Call 9980555558

House

J P Nagar

SALE 60X110 North East Corner JPNagar 3rd Phase With House Both Side 40feet Road Excellent Location Call:9944134068 9066399102

HOUSE SALE: J.P.Nagar, 6th Phase, BDA site, E/F, 4 bedroom, Seperate card shed. Contact: 9880402575.

5 BHK BBMP A Khata 30x50 Doctor's Colony Main road Konanakunte Bangalore 560062 2 Crs Negotiable Brokers Excuse Contact 9449852743

Kengeri

SALE 30X40 1+2+4BHK duplex house with Lift A-Khata Property in Kengeri. VR Groups Call: 8217653801

Nagarabhavi

"INDIVIDUAL HOUSE BDA 1.20_Lakhs Rental_income 30x40 new_building, Sale:`₹3.70 Crore negotiable, opposite Nammura Thindi, Nagarabhavi. 9945309883"

"SALE: 4BHK Duplex House 3.25_Crore and_3BHK old house 2.30_Crore. Nagarabhavi near Papareddypalya, Deepa_complex. 9845014134"

30X50 E/F 4 BHK Duplex House, 30X40 N/F 5 BHK Duplex Beautiful House sale Call.9591013777

BRAND NEW 4 BHK Triplex fully furnished House, ground floor 1 shop, 2 car parking for Sale @ Rajajinagar HBCS Layout Annapoorneshwarinagar NORTH/EAST Corner, Ready to occupy 9844039482

Ganganagar

40X60 WITH Old House East Facing 40ft Road BDA Katha Semi Commercial 23k Psqft: 9916119936

Vijayanagar

30X40 EF BBMP, G+3, 6`Unit House, Mudalapalya, Getting Rent 65k. 2.10cr. 9901541670/ 9845358701.

PROPERTY CORNER ಕ್ಲಾಸಿಫೈಡ್ಸ್





Flat

R T Nagar

OLD HOUSE SALE G+1, 6_Houses, Receiving Rent 36,000. Size:22x62 West_Facing A.K.Ashram Road (Behind Kabir_Ashram) RT.Nagar, Bangalore 12000`Per.Sft Negotiable. Call: 8970159998 7730218999.

R.T.NAGAR INDEPENDANT Triplex house on 40x60 BDA site Home theatre, Lift Rs. 7,25,00,000/-. 8900224290

Girinagar

HOUSE FOR Sale 30X55, 1650 sft. EF, Ground, First floor. 22,500 per sqft. 9901043000, 9844435161

Flat

Banashankari

"SALE-LUXURY NEW-FLAT, Poorna_Pragna_Layout one_floor one_Flat, 2Car-parking, 2100.Sqft, Rs.1,49,00,000/- "Sri.Ganesh Estate" 9845286505"

Uttarahalli

UTTARHALLI MAIN Road opp to kanthi sweets 2BHKFlat,1027sqft 1st-Floor,45Lakhs negotiable.ABHILASHA CONSULTANT.9480565758

POORNAPRAGNA LAYOUT SALE 3BHK Deluxe_Flats, Ready-to Move, 2250sft. 2_Carpark, Lift`& Generator Back-up, CCTV, Call: 9620249988.

J P Nagar

2 BHK and 3 BHK flats J.P Nagar 5th phase, rate 65 lac nego. 9886425997

Mysore Road

MYSORE ROAD AVAILABLE 3BHK FLAT LEASE1800 SQ.FT RS. 31 LACS WITH CARPARKING: 8105273951/ 9738223432

MORE Classifieds Ads on Subsequent Pages

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Agricultural Land

Mysore Road

SALE CHANNAPATNA Agricultural Land 4.08 Acres Farm House Contact: 9844134068 9066399102

Out-Station

SALE AGRICULTURAL LANDS Bangarupalem, Palamner, Mulbagal Srinivaspur, Kadiri Bagepalli, Gauribidanur 25,00,000 -50,00,000 Lakhs/ acre 9353748029

Commercial Building

Basavanagudi

SALE 25X45 Commercial old Building With Tenent Thyagarajnagar East Facing 50feet road Call:9611844667 8123515830

Commercial Land

Nandini Layout

BDA 40X60 EAST FACING COMMERCIAL SITE AT NANDINI LAYOUT FOR SALE 9844039482

Commerical

Anjanapura

EXCELLENT COMMERCIAL 40X60, Anjanapura 5th G`Block, 80feet Road North Roadhit 15,000/-`Owner Meeting- 9845144365

General

10.5 GROUNDS at Guindy Industrial Area on 40'Road Eligible for Manufacturing Limits and IT. 9840509079

Kengeri

BDA COMMERCIAL Property for Sale 20,000/- Sqft. Adjacent Kengeri Metro Station for Hotel, Theater. 9945119449

Nagarabhavi

"RAILWAY LAYOUT (Bhavaninagar) 2nd-Stage Vidyaniketan School Road, 60 feet Road 40x60 East Commercial Site. 9448432633"

Sarjapur Road

COMMERCIAL 20000 Sft Suitable For Complex Near Wipro Kodathi RS 10500/-sft Buyers Contact: 8884501767

Vidyaranyapura

SITE BBMP A Katha 40x30, 20X30 SEMI COMMERCIAL SF 9200/- THINDLU LAKE SHOW GARDEN: 8296895858

Kempegowda Layout

SEMI-COMMERCIAL SITE SALE, NADAPRABHU KEMPEGOWDA LAYOUT 8th Block 'D' SECTOR 165X100, W/F, ₹.4500/-. Contact: 9686469799

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9952936298

Residential/ Commercial

Devanahalli

SALE 1100SQFT Residential Plot BSF Society Devanahalli. 30 Lakh only. 9752121223.

General

50 CENTS at Panjara Hills New Maruthi Area Along 2A Road: 098405 09079

Villas/Bunglows

Nagarabhavi

5BHK INDEPENDENT house, 2 Floor, 3000 Sq.ft., South facing, near Chandra Layout. Close to hospital, bank, school, market. Possession by (07) (2024). Genuine Buyers only. Contact: +91 9341989867. Brokers Excuse. Asking for 4 Crores

REAL ESTATE BUYING

General

General

REQUIRED LAND BBMP LIMITS/ BMRDA/ BIAAPA/ BMICAPA LAND With Converted yellow Zone. No agent/ Only owners. Mob: 9035010595 / 9035055919

Industrial & Factory

General

NEED INDUSTRIAL land or convertible land of around 2 to 3 acres in 10 km radius of TVS Motor company hosur. Intrested sellers may call on below number. 9886020888

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th_Stage, Balaj`Layout, Agent_Excuse Contact: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

"WANTED NAGARBHAVI, Nagarbhavi RHCS, D-Group Layout, Vishveshwaraiah Layout Any measurements feel free transperant Call: 7259675150"

Rajarajeshwari Nagar

WANTED SITE 30x50,30x45 with House in BEML 3rd and 4th Stage. Serious Sellers Contact: 8762018445.

Sadashiva Nagar

WANTED :1800 TO 2400 SFT PLOT IN SADHASHIVANAGAR. SITE OWNERS CALL BUYER 6361455241

RENTAL PROPERTIES

Accommodation Available

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

RENT: INDUSTRIAL shed @ KIADB Harohalli Phase-2, Built 2000 in 22000 sqft, 8HP, Phone: 9972299585

INDUSTRIAL SHED/GODOWN for rent in Harohalli Industrial Area 3rd phase, 11,000 Sft, Contact : 9108982314

Commercial

5 ACRES Commercial Land Available for Rent in Bidadi on Bangalore Mysore Road Interested: 9972181837

COMMERCIAL SHOP Rent 510 Sqft Close to Shreegandha Kaval Bustop, Near Nagarbhavi BDA Complex: 9343911234

1ST FLOOR Commercial office Dr.Rajkumar Road 3000sqft Fully Furnished with all Good Facilities Ph:9353242472, 9845052222

Villas/Bunglows

FOR RENT VILLA Premium Gated Community VILLA 4BHK, 4000sft, 10minutes from International Airport. Contact: 9845765617.

BUILDERS ESSENTIAL

Water Proofing

LEAKAGE LEAKAGE Home, Office, Factory, Apartment, Terrace, Wallcrack, Bathroom, Sump tank, etc. can be waterproofed with new technology. 30years of experience. Contact 7411418319

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

‘ಸಂಸ್ಕೃತಿಯ ರಕ್ಷಕರು ತಾಯಂದಿರು’

ಸಂಸದ ಬಸವರಾಜ ಬೊಮ್ಮಾಯಿ ಅಭಿಮತ • ‘ನಾರಿ ಸಮ್ಮಾನ್’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು, ದೇಶದ ಆರ್ಥಿಕತೆ ಮತ್ತು ಸಂಸ್ಕೃತಿ ಉಳಿಸುತ್ತಿದ್ದಾರೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮೀಡಿಯಾ ವಿಷನ್ ಹಾಗೂ ಬಿ.ಎಂ. ವಿರೂಪಾಕ್ಷಯ್ಯ ಕಲಾ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ನಾರಿ ಸಮ್ಮಾನ್’ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

‘ನಮ್ಮ ಸಂಸ್ಕೃತಿಯ ರಕ್ಷಕರು ತಾಯಂದಿರು. ಅವರು ಲೆಕ್ಕದಲ್ಲಿ ಮುಂದಿರುತ್ತಾರೆ. ತಾಯಂದಿರು ನಮಗೆ ಉಳಿತಾಯದ ಸಂಸ್ಕೃತಿ ಕಲಿಸಿದ್ದಾರೆ. ಇದರಿಂದ ನಮ್ಮ ಆರ್ಥಿಕತೆ ಮತ್ತು ಸಂಸ್ಕೃತಿ ಉಳಿದಿದೆ. ಸಾಸಿವೆ ಡಬ್ಬಿಯಲ್ಲಿ ಹಣ ಕೂಡಿಡುವ ಮೂಲಕ ನಮ್ಮ ಆರ್ಥಿಕತೆಯನ್ನು ಉಳಿಸುತ್ತಿದ್ದಾರೆ. ನಮ್ಮ ಜನಸಂಖ್ಯೆಯ ಶೇ 50ರಷ್ಟು ಮಹಿಳೆಯರಿದ್ದಾರೆ. ಅವರು ತಮ್ಮನ್ನು ದೇಶ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಳ್ಳದಿದ್ದರೆ ದೇಶಕ್ಕೆ ದೊಡ್ಡ ನಷ್ಟವಾಗಲಿದೆ’ ಎಂದು ಹೇಳಿದರು.

‘ಸೃಷ್ಟಿಯಲ್ಲಿ ತಾಯಿಯ ಸ್ಥಾನ ಅತ್ಯಂತ ಶ್ರೇಷ್ಠವಾದುದ್ದಾಗಿದೆ. ಜನ್ಮ ಪೂರ್ವ ಸಂಬಂಧ ತಾಯಿಗೆ ಮಾತ್ರ ಇದೆ. ತಂದೆ, ಅಣ್ಣ, ತಮ್ಮ ಎಲ್ಲ ಸಂಬಂಧಗಳು ಆ ಮೇಲೆ ಬರುತ್ತವೆ. ಪ್ರತಿಯೊಬ್ಬ ವ್ಯಕ್ತಿ ಈ ಭೂಮಂಡಲದ ಎಲ್ಲ ವ್ಯವಸ್ಥೆಗೆ ಹೊಂದಿಕೊಳ್ಳಲು ತಯಾರಿ ನಡೆಸುವುದೇ ತಾಯಿಯ ಗರ್ಭದಲ್ಲಿ’ ಎಂದರು.



ಸಮಾರಂಭದಲ್ಲಿಉಮಾಬಾಯಿ ಖರೆ ಅವರಿಗೆ ‘ನಾರಿ ಸಮ್ಮಾನ್’ ಪ್ರಶಸ್ತಿಯನ್ನು ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು. ಬಸವ ಪರಿಷತ್ ಪ್ರಧಾನ ಕಾರ್ಯದರ್ಶಿ ಮಹಾಂತೇಶ್ ಹಿರೇಮಠ, ಅಧ್ಯಕ್ಷೆ ಎಂ.ಪಿ. ಉಮಾದೇವಿ, ಬಿಎಂವಿ ಕಲಾ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ಅರುಣ ಹಾಗೂ ವೀಣಾ ಮಹಾಂತೇಶ್ ಪಾಲ್ಗೊಂಡಿದ್ದರು.

ಸಾಧಕಿಯರಿಗೆ ಗೌರವ

ನಾಟಿ ವೈದ್ಯೆ ಉಮಾಬಾಯಿ ಖರೆ, ಸಮಾಜ ಸೇವಕಿ ಜ್ಯೋತಿ ಟೋಸೂರ, ಉದ್ಯಮಿ ಪಲ್ಲವಿ ರವಿ, ಸಹ ಪ್ರಾಧ್ಯಾಪಕಿ ರತ್ನಮ್ಮ ಆರ್., ವೈದ್ಯೆ ಮಮತಾ ಎಸ್. ಎಚ್., ನಿರೂಪಕಿ ನವಿತಾ ಜೈನ್, ಬಸವ ತತ್ವ ಪ್ರಚಾರಕಿ ಸುಜಾತಾ ಬಯ್ಯಾಪುರ, ಸಮಾಜ ಸೇವಕಿ ಸುಮಿತ್ರಾ ರೇಣುಕಾಚಾರ್ಯ, ರಕ್ತ ದಾನಿ ಮಧುರ ಅಶೋಕ್ ಕುಮಾರ್, ಶಿಕ್ಷಣ ತಜ್ಞೆ ಸಂದರ್ಶಿನಿ ನರೇಂದ್ರ ಕುಮಾರ್, ಕೃಷಿ ವಿಜ್ಞಾನಿ ಸುಮಾ ಬಿರಾದರ ಹಾಗೂ ಸ್ತ್ರೀರೋಗ ತಜ್ಞೆ ಡಾ. ಮಂಜುಳಾ ಎ. ಪಾಟೀಲ ಅವರಿಗೆ ‘ನಾರಿ ಸಮ್ಮಾನ್’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಾಲ್ಮೀಕಿ ನಿಗಮದ ಹಗರಣ 28ಕ್ಕೆ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿರುದ್ಧ ಜೂನ್ 28ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು, ಜಿಲ್ಲಾಧಿಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಗರದಲ್ಲಿ ಶನಿವಾರ ನಡೆದ ಎಸ್‌ಟಿ ಮೋರ್ಚಾ ಪ್ರಮುಖರ ಸಭೆಯ ನಂತರ ಅವರು ಮಾತನಾಡಿದರು. ಹಗರಣದ ವಿಚಾರದಲ್ಲಿ ಸರ್ಕಾರ ಪಾರದರ್ಶಕವಾಗಿ ನಡೆದುಕೊಳ್ಳುತ್ತಿಲ್ಲ. ತೇಪೆ ಹಚ್ಚಿ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿದೆ. ಪರಿಶಿಷ್ಟ ಪಂಗಡಕ್ಕೆ ಕಾಂಗ್ರೆಸ್‌ನಿಂದ ಆಗಿರುವ ಅನ್ಯಾಯವನ್ನು ಹೋರಾಟದ ಮೂಲಕ ಸರಿಪಡಿಸಬೇಕು. ಸಂಪೂರ್ಣ ವಾಪಸ್ ತರಬೇಕು ಎಂದು ಒತ್ತಾಯಿಸಲಾಗುವುದು. ಜೂನ್ 18ರಂದು ಎಲ್ಲ ಜಿಲ್ಲೆಗಳಲ್ಲೂ ಸಭೆ ನಡೆಸಲಾಗುವುದು ಎಂದರು.

ಮಾಜಿ ಸಚಿವ ಬಿ.ಶ್ರೀರಾಮುಲು, ಶಾಸಕ ಜನಾರ್ದನ ರೆಡ್ಡಿ, ಎಸ್‌ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತು, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ಶಾಸಕ ಪ್ರೀತಮ್ ಗೌಡ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಹೇಮಲತಾ ನಾಯಕ ಇದ್ದರು.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೆಗಡೆ ನಗರದ ಮುಖ್ಯರಸ್ತೆಯಲ್ಲಿ ಶನಿವಾರ ರಾತ್ರಿ 1.30ರ ಸುಮಾರಿಗೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ನಾಜೀಶ್ ಸಮೀಮ್ ಸೈಯದ್ (23) ಮೃತಪಟ್ಟಿದ್ದಾರೆ

ಶುಕ್ರವಾರ ರಾತ್ರಿ ಕಾರ್ತೀಕ್ ಹಾಗೂ ನಾಜೀಶ್ ಸಮೀಮ್ ಸೈಯದ್ ಅವರು ಹೋಟೆಲ್‌ನಲ್ಲಿ ಊಟ ಮಾಡಿ ಮನೆಗೆ ತೆರಳುತ್ತಿದ್ದರು. ಹೆಗಡೆನಗರ ಮುಖ್ಯರಸ್ತೆಯ ಆರ್.ಆರ್. ಸಿಗ್ನೇಚರ್ ಅಪಾರ್ಟ್‌ಮೆಂಟ್ ಎದುರು ಬ್ಯಾರಿಕೇಡ್ ಹಾಗೂ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬೈಕ್ ಚಾಲನೆ ಮಾಡುತ್ತಿದ್ದ ನಾಜೀಶ್ ಸಮೀಮ್ ಸೈಯದ್ ಸ್ಥಳದಲ್ಲೇ ಮೃತಪಟ್ಟರು. ಕಾರ್ತೀಕ್‌ಗೆ ಗಂಭೀರ ಸ್ವರೂಪದ ಗಾಯಗಳಾಗಿವೆ’ ಎಂದು ಪೊಲೀಸರು ಹೇಳಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ: ಪ್ರಸನ್ನ ಕುಮಾರ್ ಎಸ್‌ಪಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಲು ವಿಶೇಷ



ಪ್ರಾಸಿಕ್ಯೂಟರ್ ಆಗಿ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಈ ಕುರಿತಂತೆ ರಾಜ್ಯ ಒಳಾಡಳಿತ ಇಲಾಖೆ ಶನಿವಾರ ಅಧಿಸೂಚನೆ ಹೊರಡಿಸಿದೆ.

ಹೈಕೋರ್ಟ್ ವಕೀಲ ಸಿ.ಸಚಿನ್ ಅವರನ್ನು ಸಹಾಯಕ ಪ್ರಾಸಿಕ್ಯೂಟರ್ ಆಗಿ ಸರ್ಕಾರ ನೇಮಕ ಮಾಡಿದೆ.

ಪತ್ರಕರ್ತನ ಮೇಲೆ ಹಲ್ಲೆ: ನಟ ದರ್ಶನ್ ಪ್ರಕರಣದ ವರದಿ ಮಾಡಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆವರಣಕ್ಕೆ ತೆರಳಿದ್ದ ಪತ್ರಕರ್ತನ ಮೇಲೆ ನಾಲ್ವರು ಆರೋಪಿಗಳು ಹಲ್ಲೆ ನಡೆಸಿದ್ದಾರೆ.

‘ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್’ ಪತ್ರಿಕೆ ವರದಿಗಾರ ರಕ್ಷಿತ್‌ಗೌಡ ಮೇಲೆ ಹಲ್ಲೆ ನಡೆದಿದ್ದು, ಅವರು ನೀಡಿದ ದೂರು ಆಧರಿಸಿ ಪೊಲೀಸರು ಎನ್‌ಸಿಆರ್ ದಾಖಲಿಸಿದ್ದಾರೆ.

‘ಕೊಲೆ ಪ್ರಕರಣದಲ್ಲಿ ದರ್ಶನ್ ಸೇರಿ 16 ಮಂದಿಯನ್ನು ಪೊಲೀಸರು ಬಂಧಿಸಿದ್ದು ಶನಿವಾರ ಸಂಜೆ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸುವ ಮಾಹಿತಿ ತಿಳಿದು ವರದಿಗೆ ತೆರಳಿದ್ದೆ. ಕೋರ್ಟ್ ಆವರಣದಲ್ಲಿರುವ ನೀರಿನ ಫಿಲ್ಟರ್ ಬಳಿ ನಿಂತಿದ್ದೆ. ಆಗ ಸ್ಥಳಕ್ಕೆ ಬಂದ ನಾಲ್ವರು ಮೊಬೈಲ್ ಇಟ್ಟುಕೊಂಡು ಏಕೆ ನಿಂತಿದ್ದೀಯಾ? ನಿನಗೇನು ಕೆಲಸ ಎಂದು ಪ್ರಶ್ನಿಸಿದ್ದರು. ನಾನು ವರದಿಗಾರ ಎಂದು ಹೇಳಿದೆ. ಆಗ ನನ್ನ ಮೇಲೆ ಹಲ್ಲೆ ನಡೆಸಿದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಾಮೂಹಿಕ ಪ್ರಾರ್ಥನೆ: ಸಂಚಾರ ತಾತ್ಕಾಲಿಕ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಬಿ.ಬಿ ಜಂಕ್ಷನ್ ಬಳಿಯ ಮಸೀದಿ ಮತ್ತು ಚಾಮರಾಜಪೇಟೆ ಬಿಬಿಎಂಪಿ ಆಟದ ಮೈದಾನದಲ್ಲಿ ಜೂನ್ 17ರಂದು ಬಕ್ರೀದ್ ಹಬ್ಬದ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಅಂದು ಮೈಸೂರು ರಸ್ತೆಯಲ್ಲಿ ವಾಹನ ಸಂಚಾರವನ್ನು ತಾತ್ಕಾಲಿಕ ನಿರ್ಬಂಧಿಸಲಾಗಿದೆ.

ಬೆಳಿಗ್ಗೆ 6ರಿಂದ ಪ್ರಾರ್ಥನೆ ಮುಕ್ತಾಯವಾಗುವವರೆಗೆ ಬಿಜಿಎಸ್ ಮೇಲ್ಸೇತುವೆಯಿಂದ ಪುರಭವನದವರೆಗೆ ಎಲ್ಲ ಮಾದರಿಯ ವಾಹನ ಸಂಚಾರ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ಪರ್ಯಾಯ ಮಾರ್ಗಗಳು: ಮೈಸೂರು ರಸ್ತೆಯ ಕಡೆಯಿಂದ ಪುರಭವನ ಕಡೆಗೆ ತೆರಳುವ ವಾಹನಗಳು ಬ್ಯಾಟರಾಯನಪುರ ಸಂಚಾರ ಠಾಣಾ ವ್ಯಾಪ್ತಿಯ ಕಿಮ್ಕೊ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ವಿಜಯನಗರದ ಮೂಲಕ ಸಾಗಬಹುದು.

ಪುರಭವನ ಕಡೆಯಿಂದ ಮೈಸೂರು ಕಡೆಗೆ ತೆರಳುವ ವಾಹನಗಳು ಬಿಜಿಎಸ್ ಮೇಲ್ಸೇತುವೆಯ ಕೆಳಗಿನ ರಸ್ತೆಯನ್ನು ಬಳಸಿಕೊಂಡು ವೆಟರ್ನರಿ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಗೂಡ್ಸ್ ಶೆಡ್ ರಸ್ತೆಯ ಮೂಲಕ ಅಥವಾ ಸಿರ್ಸಿ ಜಂಕ್ಷನ್‌ನಲ್ಲಿ ಬಲಕ್ಕೆ ತಿರುವು ಪಡೆದು ಜೆಜೆ ನಗರ-ಟ್ಯಾಂಕ್‌ಬಂಡ್ ರಸ್ತೆ- ಬಿನ್ನಿಮಿಲ್ ಜಂಕ್ಷನ್- ಹುಣಸೇಮರದ ಮೂಲಕ ಸಾಗಬಹುದು.

ಬಸವನಗುಡಿ ಹಾಗೂ ಚಾಮರಾಜಪೇಟೆ ಕಡೆಯಿಂದ ಮೆಜೆಸ್ಟಿಕ್ ಕಡೆಗೆ ಹೋಗುವ ವಾಹನಗಳು, ಚಾಮರಾಜಪೇಟೆ 1ನೇ ಮುಖ್ಯರಸ್ತೆ, 5ನೇ ಅಡ್ಡ ರಸ್ತೆ ಮೂಲಕ ಮೈಸೂರು ರಸ್ತೆಯ ಸಿರ್ಸಿ ವೃತ್ತ, ಬಿನ್ನಿಮಿಲ್ ರಸ್ತೆ ಅಥವಾ ಗೂಡ್ಸ್ ಶೆಡ್ ರಸ್ತೆಯ ಮೂಲಕ ಸಾಗಬಹುದು.

ಆತ್ಮಹತ್ಯೆಗೆ ಯತ್ನಿಸಿದ್ದ ಯುವಕ ಸಾವು

ಜೊಯಿಡಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ರಾಮನಗರ ಪೊಲೀಸ್ ಠಾಣೆ ಎದುರು ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಭಾಸ್ಕರ ಬೋಂಡೇಲ್ಕರ (28) ಬೆಳಗಾವಿಯ ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾನೆ. ‘ಮಾವನ ವಿರುದ್ಧದ ಪ್ರಕರಣದ ಕುರಿತು ವಿಚಾರಿಸಲು ಬಂದಿದ್ದ ಭಾಸ್ಕರ ಗಲಾಟೆ ಮಾಡಿ, ಆತ್ಮಹತ್ಯೆಗೆ ಯತ್ನಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿ 11ರವರೆಗೂ ಎಚ್‌ಡಿಕೆ ಸಭೆ

ಮಂಡ್ಯ: ಕೇಂದ್ರ ಸಚಿವರಾದ ನಂತರ ಮೊದಲ ಬಾರಿಗೆ ಜಿಲ್ಲೆಗೆ ಶನಿವಾರ ಭೇಟಿ ನೀಡಿದ ಎಚ್.ಡಿ.ಕುಮಾರಸ್ವಾಮಿ ಅವರು ರಾತ್ರಿ 11 ಗಂಟೆವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಸಂಸದರ ಕಚೇರಿ ಉದ್ಘಾಟಿಸಲು ಸಂಜೆ 4.30ಕ್ಕೆ ಬರಬೇಕಾಗಿತ್ತು. ರಾತ್ರಿ 9ಕ್ಕೆ ಬಂದರು. ರಾತ್ರಿ 10ರಿಂದ ರಾತ್ರಿ 11ರವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು. ಜಿಲ್ಲಾಧಿಕಾರಿ ಕುಮಾರ, ಇತರ ಅಧಿಕಾರಿಗಳಿದ್ದರು.

ವಾಹನ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಸ್ವಂತ ವಾಹನ ಹೊಂದುವ ಆಸೆಯಿಂದ ರಸ್ತೆ ಬದಿ ನಿಲ್ಲಿಸಿದ್ದ ಟೆಂಪೊ ಟ್ರಾವಲರ್ (ಟಿಟಿ) ಕಳವು ಮಾಡಿದ್ದ, ಬ್ಯಾಡರಹಳ್ಳಿಯ ನಿವಾಸಿ ಗಜೇಂದ್ರ (35) ಎಂಬಾತನನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ₹2.5 ಲಕ್ಷ ಮೌಲ್ಯದ ವಾಹನ ಜಪ್ತಿ ಮಾಡಿಕೊಂಡಿದ್ದಾರೆ.

ಸೋಲದೇವನಹಳ್ಳಿ ವ್ಯಾಪ್ತಿಯ ಆಚಾರ್ಯ ಕಾಲೇಜು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಟಿ.ಟಿ ವಾಹನ ಕಳುವಾಗಿದ್ದು, ಈ ಬಗ್ಗೆ ಸೋಲನದೇವನಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿತ್ತು.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, ‘ಡಿ’ ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/03/2024-25 ದಿನಾಂಕ: 16.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ‘ವ್ಯವಸಾಯ’ ವಲಯದಿಂದ ‘ವಾಣಿಜ್ಯ’ ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಎಂ. ವೀರಭದ್ರಪ್ಪ ಬಿನ್ ಲೇಟ್॥ ಮಲ್ಲಪ್ಪ	ದೊಡ್ಡಬಳ್ಳಾಪುರ	ಕಸಬಾ	ಕೊಡಿಗೇಹಳ್ಳಿ	55/4	01–00	ವ್ಯವಸಾಯ	ವಾಣಿಜ್ಯ
2.	ಶ್ರೀಮತಿ ವಿ. ಸಾಕಮ್ಮ ಕೋಂ ಎಂ. ವೀರಭದ್ರಪ್ಪ	ದೊಡ್ಡಬಳ್ಳಾಪುರ	ಕಸಬಾ	ಕೊಡಿಗೇಹಳ್ಳಿ	55/5	00–20	ವ್ಯವಸಾಯ	ವಾಣಿಜ್ಯ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನು ರಸ್ತೆಗೆ ಹೊಂದಿಕೊಂಡಿರುವುದರಿಂದ ಯೋಜನಾ ಬದ್ಧವಾಗಿ ಅವಶ್ಯವಿರುವ ಮೂಲಭೂತ ವಾಣಿಜ್ಯ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದಾಗಿ ಹಾಗೂ ಸದರಿ ವಾಣಿಜ್ಯ ಚಟುವಟಿಕೆಯಿಂದ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶ ಹೊಂದಿರುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, **ಮೇಲ್ಕಂಡ ಪ್ರದೇಶವನ್ನು ‘ವ್ಯವಸಾಯ’ ವಲಯದಿಂದ ‘ವಾಣಿಜ್ಯ’ ವಲಯಕ್ಕೆ** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ) ಕರ್ನಾಟಕ ಸರ್ಕಾರ

ಸಂಖ್ಯೆ: ಕಕೆಸಂಅಪ್ರಾ/ಬೆಂ/ಆಡಳಿತ/54/2023–24 ದಿನಾಂಕ: 15.06.2024

ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕೇಂದ್ರ ಕಚೇರಿಯಲ್ಲಿರುವ ವಾಹನಗಳಾದ **Ford Ikon (Scrap -1 ಸಂಖ್ಯೆ)** ಮತ್ತು **Innova (2-ಸಂಖ್ಯೆ)** ಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮೂಲಕ **ದಿನಾಂಕ: 02.07.2024 ಅಪರಾಹ್ನ 3:00 ಗಂಟೆಗೆ** ಈ ಕಚೇರಿ ಆವರಣದಲ್ಲಿ ನಿಯಮಾನುಸಾರ ಹರಾಜು ಮಾಡಲಾಗುವುದು. ಇಚ್ಛೆ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕೇಂದ್ರ ಕಚೇರಿಗೆ ಸಂಪರ್ಕಿಸಲು ಕೋರಿದೆ (ವಿಳಾಸ: ಬೀಜ ಭವನ, ನೆಲ ಮಹಡಿ, ಹೆಬ್ಬಾಳ, ಬಳ್ಳಾರಿ ರಸ್ತೆ, ಬೆಂಗಳೂರು – 560024. ದೂರವಾಣಿ ಸಂಖ್ಯೆ: 080–23513711).

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕ.ಕೆ.ಸಂ.ಅ.ಪ್ರಾ, ಬೆಂಗಳೂರು

ಡಿಐಪಿಆರ್/363/2024–25

CAUTION NOTICE

Our client **Sri Rangaswamy,** S/o Late Ankappa aged about 80 years, residing at L-47, 2nd ‘B’ Main, 15th Cross, 6th Sector, H.S.R Layout, Bengaluru-560128 hereby informs the General Public and authorities concerned of the fact that he has **cancelled his authority** given to **Bharatiya City Developers Pvt. Ltd.,** vide **general power of attorney dated 14-09-2018 registered as Document No. 198/1819** vis-a-vis land measuring an extent of 08 Acres 00 Guntas in Survey Number 53 (Old Survey Number 24) of Kogilu Village, Yelahanka Hobli, Bengaluru North Taluk. Our client's erstwhile attorney is thereby restrained from performing any of the acts envisaged under the said document, which if performed, would be termed unauthorized and as such, illegal.

Ajith Anand Shetty & C.S. Ravi
S A Partners, Advocates,
No.71, 66th Cross, Rajajinagar, 5th Block, Bengaluru-560010
Place : Bengaluru Email : lawyers@sapartners.info Date : 15-06-2024

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇ–ಜಿಎಸ್‌ಯು–ಇಎಲ್‌ಇ–2024–25–ಓಟ–9
ದಿನಾಂಕ : 10–06–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಯಾರ್ಡ್ –	ರೂ. 2,18,33,816.48

ಬೆಂಗಳೂರು ಯಾರ್ಡ್‌ನಲ್ಲಿ ಮೈಸೂರು ಎಂಡ್ ಕಡೆಗೆ ರಸ್ತೆ 10ರ (ಪ್ಲಾಟ್‌ಫಾರಂ ಸಂ.7) ಸಿಎಸ್‌ಆರ್ ನ ಉದ್ದೇಶಿತ ಹೆಚ್ಚಿಸುವಿಕೆಯಿಂದಾಗಿ ಏಕಕಾಲದಲ್ಲಿ ಸ್ವೀಕೃತಿ ಮತ್ತು ರವಾನೆ ಸೌಕರ್ಯಗಳೊಂದಿಗೆ ಓಹೆಚ್‌ಇ ಮಾರ್ಪಾಡು ಕಾಮಗಾರಿ – ಬಾಕಿ ಉಳಿದ ಕೆಲಸಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **05–07–2024 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಗತಿ ಶಕ್ತಿ ಘಟಕ
ಪಿಯುಬಿ/159/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಬೆಂಗಳೂರು

South Western Railway - SWR SWRRLY SWRRLY

IN THE COURT OF THE III ADDITIONAL SENIOR CIVIL JUDGE BENGALURU RURAL DISTRICT AT BENGALURU

O.S. No. 503/2016

BETWEEN: Sri. Munihanumaiah ...Plaintiff
AND : Sri Ramaiah & others ...Defendants

To, **The Defendant No. 1 to 3**
1) Sri. Ramaiah, S/o. Late Munishamaiah, Aged about 55 years, **2) Smt. Padmavathi,** W/o. Ramaiah, Aged about 40 years, **3) Smt. Asharani,** D/o Ramaiah, Aged about 20 years,
All are residing at Addevishwanathapura Village, Hesaraghatta Hobli, Bengaluru North Taluk.

SUMMONS

Whereas the plaintiff has filed the above suit for the relief of Declaration and Permanent injunction in respect of the land bearing Sy.No. 142 measuring 1 acre 5 guntas and in Sy.No. 182/2 measuring 12 guntas, situated at Addevishwanathapura Village, Hesaraghatta Hobli, Bengaluru North Additional Taluk.

Take notice that, you are hereby called upon to appear before this Court **on 27.7.2024 at 11 O'clock** in the morning either in person or through a duly constituted pleader and submit your defence if any. Failure to appear on the said date and time, the matter will be heard in your absence and decided ex-parte.

Given under my hand and seal of this Hon'be Court, this the 13th June 2024.

By order of the Court, Chief Ministerial Officer, Senior Civil Judge Court, Bengaluru Rural Dist., Bengaluru.

Advocate for Plaintiffs : **L. Suresh,** Advocate
No.201, Addevishwanathapura, Arakere Post, Near Rajanukunte, Yelahanka Taluk, Bengaluru - 562 163.

PUBLIC NOTICE

That our Client intends to enter into Joint Development Agreement with respect to the immovable 'Schedule Property' mentioned below with the Owner i.e., Mr. M.R.SREEVATHSA, Son of Late Mr.M.Ramachar & Mrs.M.Padmamma, Residing at Krishna at No. 54 and 55, 1st Main Road, Gavipuram Extension, Kempegowdanagar, Bangalore-560019.

Any persons, financial institutions having any sort of claim / rights / interest / charge on the below said property or any objections for the said development of the property may file their objections in writing along with supporting documents, addressed to the undersigned within 07 days from the date of publication of this notice, failing which, it shall be construed that there are no claims of any sort over the below said property and our client shall be advised to proceed with the proposed development. Any claims thereafter shall not be entertained.

SCHEDULE PROPERTY

ITEM No.1: ALL THE PIECE AND PARCEL OF the converted Land bearing **Survey No.27/1,** New Sy No.27/3, measuring to an extent of 2-00 Acres, duly converted to non-agricultural residential purpose as per Conversion Order No.115661, dated 16.12.2019, issued by The Deputy Commissioner, Bangalore Rural District, situated at Aradeshanahalli Village, Kundana Hobli, Devanahalli Taluk, Bangalore Rural District, and bounded on the:
East by : Property in Sy No.38/1 belongs to M.R.Sreevathsa;
West by : Property belongs to Puttahanumanthappa;
North by : Property belongs to M.Govindaraju;
South by : Thoti Inamthi.

ITEM No.2: ALL THE PIECE AND PARCEL OF converted Land bearing **Survey No.38/1,** measuring to an extent of 00-30 Guntas, duly converted to non-agricultural residential purpose as per Conversion Order No.115662, dated 16.12.2019, issued by The Deputy Commissioner, Bangalore Rural District, situated at Aradeshanahalli Village, Kundana Hobli, Devanahalli Taluk, Bangalore Rural District, and bounded on the:
East by : Jalige Border & Government Road;
West by : Property in Sy No.27/3 belongs to M.R.Sreevathsa & Sy No.27/1 belongs to M.Govindaraju;
North by : Government Road;
South by : Property belongs to Chikkahanumappa.

LAW PARK ASSOCIATES JUSTICE ON YOUR SIDE

Sd/-
LAW PARK ASSOCIATES, Advocate
6th Sector, HSR Layout, Bangalore-560 102.
helpdesk@lawpark.in

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/26/2023-24 ದಿನಾಂಕ: 15.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ಕೈಗಾರಿಕೆ”** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಹನುಮಂತಯ್ಯ ಬಿನ್ ಸಿ.ವಿ.ಮುನಿಯಪ್ಪ, ನಂ. 997, 29ನೇ ಮುಖ್ಯರಸ್ತೆ, ಪೂರ್ಣಪ್ರಜ್ಞಾನಗರ, ಬೆಂಗಳೂರು–560061.	ದೊಡ್ಡಬಳ್ಳಾಪುರ	ದೊಡ್ಡಬೆಳವಂಗಲ	ಮುತ್ತುಗದಹಳ್ಳಿ	27/5	1–25½	ವ್ಯವಸಾಯ	ಕೈಗಾರಿಕೆ
		ದೊಡ್ಡಬಳ್ಳಾಪುರ	ದೊಡ್ಡಬೆಳವಂಗಲ	ಹುಲಿಕುಂಟೆ	135/6	0–08¾	ವ್ಯವಸಾಯ	ಕೈಗಾರಿಕೆ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ಕೈಗಾರಿಕೆ ಬೆಳವಣಿಗೆಗಳು ಬರುತ್ತಿದ್ದು, ಹಾಗೂ ಸಾರ್ವಜನಿಕ ಉದ್ಯೋಗವಕಾಶ ಸೃಷ್ಟಿಯಾಗುತ್ತಿರುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ಕೈಗಾರಿಕೆ ವಲಯ’** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಎವಿ/402/2024–25

ಅಧಿಕಾರಿಗಳದ್ದೇ ಕಾರುಬಾರು • ವಿಭಜನೆ ತಂತ್ರ • 'ಬ್ರ್ಯಾಂಡ್' ಮೇಲೆ ಪರಿಣಾಮ: ಪಾಲಿಕೆ ಮಾಜಿ ನಾಯಕರು

ನಾಗರಿಕರ ಸಮಸ್ಯೆಗಳಿಗೆ ಸ್ಪಂದನೆ ಇಲ್ಲ

• ಆರ್. ಮಂಜುನಾಥ್



ಬೆಂಗಳೂರು: ನಗರದಲ್ಲಿ ಮಳೆ, ಬಿರುಗಾಳಿಯಿಂದ ಸಾಕಷ್ಟು ಮರಗಳು ಉರುಳಿವೆ. ರಸ್ತೆ– ಚರಂಡಿಗಳಲ್ಲಿ ನೀರು ನಿಂತಿದೆ, ಗುಂಡಿಗಳಾಗಿವೆ. ಮನೆಗಳಿಗೆ ನೀರು ನುಗ್ಗುತ್ತಿದೆ. ರಸ್ತೆ ಬದಿಯಲ್ಲಿ ಮರಗಳ ರೆಂಬೆ–ಕೊಂಬೆಗಳು ಹಾಗೆಯೇ ಉಳಿದಿವೆ. ಹಲವೆಡೆ ಓಡಾಡಲೂ ಜನರಿಗೆ ಸಮಸ್ಯೆಯಾಗುತ್ತಿದೆ. ಈ ಸಂಕಷ್ಟಗಳನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಶಾಸಕರು ಪರಿಹರಿಸುತ್ತಾರೆಯೇ? ಎಲ್ಲರ ಮನೆ ಬಳಿಗೆ ಇವರು ಹೋಗಲು ಸಾಧ್ಯವೇ? ಜನರು–ಅಧಿಕಾರಿಗಳ ನಡುವಿನ ಕೊಂಡಿಯಂತಿದ್ದ ಕಾರ್ಪೊರೇಟರ್‌ಗಳು ಇಲ್ಲದ್ದರಿಂದ ಅಧಿಕಾರಿಗಳು ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಇಲ್ಲ...

ಬಿಬಿಎಂಪಿಯಲ್ಲಿ ಆಡಳಿತ ಪಕ್ಷದ ನಾಯಕ, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದವರ ಮಾತುಗಳಿವು.

'ಒಂದು ಮನೆಯ ಕಸ ತೆಗೆಯದಿದ್ದರೆ, ನೀರು ನುಗ್ಗಿದರೆ, ರಸ್ತೆಯಲ್ಲಿ ಗುಂಡಿ ಬಿದ್ದಿದ್ದರೆ ಮೊದಲು ಜನರು ಸಂಪರ್ಕಿಸುತ್ತಿದ್ದುದು ಕಾರ್ಪೊರೇಟರ್‌ಗಳನ್ನ. ಇದೀಗ ಅವರಿಲ್ಲ, ಹೀಗಾಗಿ ಮಾಜಿಯಾಗಿದ್ದರೂ ನಮ್ಮನ್ನು ಕೇಳುತ್ತಾರೆ. ಅಧಿಕಾರ ಇಲ್ಲದಿದ್ದರೆ ಅಧಿಕಾರಿಗಳು ನಮ್ಮ ಮಾತು ಕೇಳುವುದಿಲ್ಲ. ಆದರೂ ಒತ್ತಾಯಿಸಿ, ಆಗ್ರಹಿಸಿ ಕೆಲಸ ಮಾಡಿಸುತ್ತೇವೆ. ವಾರ್ಡ್‌ಗಳು ಬದಲಾಗಿರುವುದರಿಂದ, ನಾಲ್ಕು ವರ್ಷದಲ್ಲಿ ಅಧಿಕಾರಿಗಳು ಬದಲಾಗಿರುವುದರಿಂದ ಬಹಳಷ್ಟು ಜನ ನಮ್ಮ ಮಾತು ಕೇಳುವುದಿಲ್ಲ. ಕೌನ್ಸಿಲ್ ಇದ್ದು, ಸಭೆ ನಡೆಯುತ್ತಿದ್ದರೆ ಅಧಿಕಾರಿಗಳು ನಿಯಂತ್ರಣದಲ್ಲಿ ಇರುತ್ತಿದ್ದರು' ಎಂದು ಪಾಲಿಕೆಯ ಮಾಜಿ ನಾಯಕರು ಹೇಳುತ್ತಾರೆ.

'198ರಿಂದ 243 ವಾರ್ಡ್ ಆಯಿತು. ನಂತರ ಅದನ್ನು 225ಕ್ಕೆ ಇಳಿಸಲಾಯಿತು. ಮೀಸಲಾತಿಯನ್ನು ನಿಗದಿಪಡಿಸದಿರುವುದು ಚುನಾವಣೆಗೆ ತಡೆಯಾಗಿದೆ. ಎಲ್ಲ ಪಕ್ಷದ ಶಾಸಕರಿಗೂ ಬಿಬಿಎಂಪಿ ಚುನಾವಣೆ ಬೇಕಿಲ್ಲ. ವಿಧಾನಸಭೆ, ಲೋಕಸಭೆ ಚುನಾವಣೆ ಎಂದೆಲ್ಲ ಹೇಳಿ ನಮ್ಮ ಮೂಗಿಗೆ ತುಪ್ಪ ಸವರಿ, ಕೆಲಸ ಮಾಡಿಸಿಕೊಂಡರು. ಆದರೆ, ಬಿಬಿಎಂಪಿಗೆ ಚುನಾವಣೆ ಮಾಡಿ ಎಂದರೆ ಒಬ್ಬರು ಇನ್ನೊಬ್ಬರ ಮೇಲೆ ಹೇಳುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೋಲಿನ ಭಯ: 'ನಗರದಲ್ಲಿ ಲೋಕಸಭೆ ಚುನಾವಣೆಯನ್ನು ಸೋತಿರುವ ಕಾಂಗ್ರೆಸ್‌ಗೆ ಬಿಬಿಎಂಪಿ ಚುನಾವಣೆಯಲ್ಲಿ ಸೋಲುವ ಭಯ ಉಂಟಾಗಿದೆ. ಆದ್ದರಿಂದಲೇ ವಿಭಜನೆಯ ಮಾತನಾಡಿ, ಚುನಾವಣೆ ಮುಂದೂಡಲು ಪ್ರಯತ್ನಿಸುತ್ತಿದೆ' ಎಂಬು ಬಿಜೆಪಿಯ ನಾಯಕರು ದೂರಿದರು.

'ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಅಧಿಕಾರಕ್ಕೆ ಬಂದಿದ್ದೇವೆ. ಲೋಕಸಭೆ ಚುನಾವಣೆಗೂ ಪಾಲಿಕೆ ಚುನಾವಣೆಗೂ ವ್ಯತ್ಯಾಸವಿದೆ. ಅದಕ್ಕೆಲ್ಲ ನಾವು ಹೆದರುತ್ತಿಲ್ಲ. ಉತ್ತಮ ಆಡಳಿತ ನೀಡುವುದಷ್ಟೇ ನಮ್ಮ ಗುರಿ' ಎಂದು ಕಾಂಗ್ರೆಸ್ ನಾಯಕರು ಹೇಳಿದರು.

ಗ್ರಾಮ ಪಂಚಾಯಿತಿಗಳಾಗುವ ಆತಂಕ: 'ಬಿಬಿಎಂಪಿಯನ್ನು ವಿಭಜಿಸಿ 400 ವಾರ್ಡ್ ಮಾಡಿದರೆ ಇದು ಪುರಸಭೆ, ಗ್ರಾಮ ಪಂಚಾಯಿತಿಯಂತಾಗುತ್ತದೆ. ಹೆಚ್ಚಿನ ಆದಾಯವಿರುವ ಪಾಲಿಕೆ ಅಭಿವೃದ್ಧಿಯಾದರೆ, ಮತ್ತೊಂದು ಕುಸಿಯುತ್ತದೆ. ಮೇಲು–ಕೀಳು ಎಂಬ ಭಾವನೆ ಉದ್ಭವಿಸುತ್ತದೆ. ದೆಹಲಿಯಲ್ಲಿ ಪಾಲಿಕೆ ವಿಭಜನೆ ವಿಫಲವಾಗಿದ್ದು ಇದಕ್ಕೊಂದು ಉದಾಹರಣೆ. ಇನ್ನು, ನಾಲ್ಕೈದು ಪಾಲಿಕೆಯಾದರೆ ಭಾಷಾವಾರು ಸಂಘರ್ಷವಾಗುವ ಆತಂಕವೂ ಇದೆ. ಒಟ್ಟಾರೆ ನಗರದ 'ಬ್ರ್ಯಾಂಡ್' ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ' ಎಂದು ಪಾಲಿಕೆಯ ಮಾಜಿ ನಾಯಕರು ಅಭಿಪ್ರಾಯಪಟ್ಟರು.

ಬಿಬಿಎಂಪಿಯ ಮಾಜಿ ನಾಯಕರು ಏನೆನ್ನುತ್ತಾರೆ?


'ಅಭಿವೃದ್ಧಿ ಬಗ್ಗೆ ಚಿಂತನೆ ಇಲ್ಲ'



74ರ ತಿದ್ದುಪಡಿ ಪ್ರಕಾರ ಏನೂ ನಡೆಯುತ್ತಿಲ್ಲ. ಪ್ರಜಾಪ್ರಭುತ್ವವನ್ನು ಉಳಿಸಿ, ಜನಪ್ರತಿನಿಧಿಗಳಿಗೆ ಅಧಿಕಾರ ನೀಡಲು ಯಾರಿಗೂ ಇಷ್ಟವಿಲ್ಲ. ಬೆಂಗಳೂರು ಅಭಿವೃದ್ಧಿ ಬಗ್ಗೆ ಯಾರಿಗೂ ಚಿಂತನೆ ಇಲ್ಲ. ಚುನಾವಣೆ ಮುಂದೂಡಬೇಕು ಎಂದೇ ಐದು ಪಾಲಿಕೆ ಮಾಡುತ್ತೇವೆ, ವಿಭಜನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದೆಲ್ಲ ಒಂದು ತಂತ್ರ.

ಪದ್ಮನಾಭರೆಡ್ಡಿ

'ಶಾಸಕರಿಗೆ ಚುನಾವಣೆ ಇಷ್ಟ ಇಲ್ಲ'



ನಗರದಲ್ಲಿರುವ ಐದಾರು ಶಾಸಕರನ್ನು ಹೊರತುಪಡಿಸಿದರೆ ಇನ್ನಾರಿಗೂ ಬಿಬಿಎಂಪಿಗೆ ಚುನಾವಣೆ ನಡೆಸಲು ಇಷ್ಟ ಇಲ್ಲ. ಎಲ್ಲ ಅಧಿಕಾರವನ್ನೂ, ಪ್ಯಾಕೇಜ್‌ಗಳನ್ನೂ ತಾವೊಬ್ಬರೇ ನಿರ್ವಹಿಸಬೇಕು ಎಂದು ಸಂವಿಧಾನದತ್ತವಾದ ಅಧಿಕಾರವನ್ನು ಸ್ಥಳೀಯ ಸಂಸ್ಥೆಯಿಂದ ಕಿತ್ತುಕೊಂಡಿದ್ದಾರೆ. ಅದನ್ನೇ ಮುಂದುವರಿಸುವ ಹುನ್ನಾರವೂ ಇದೆ. ಚುನಾವಣೆ ಮೊದಲು, ನಂತರ ಎಲ್ಲ.

ಎನ್. ನಾಗರಾಜು


'ಕೆಂಪೇಗೌಡರ ನಾಡನ್ನು ಒಡೆಯುತ್ತಿದ್ದಾರೆ'



ಬೆಂಗಳೂರು ನಿರ್ಮಾತೃ ಕೆಂಪೇಗೌಡರು ನಗರವನ್ನು ಸುಸಜ್ಜಿತವಾಗಿ ಕಟ್ಟಿದ್ದರು. ಅಂತಹ ನಾಡನ್ನು ಕಾಂಗ್ರೆಸ್‌ನವರು ಹೋಳು ಮಾಡುತ್ತಿದ್ದಾರೆ, ಒಡೆದು ಆಳಲು ಪ್ರಯತ್ನಿಸುತ್ತಿದ್ದಾರೆ. ಇದು ಸಮುದಾಯಕ್ಕೇ ಮಾಡುತ್ತಿರುವ ಮೋಸ. ಅಲ್ಲದೆ, ಕಾರ್ಪೊರೇಟರ್‌ಗಳಿಲ್ಲದೆ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಜನರು–ಅಧಿಕಾರಿಗಳ ನಡುವೆ ಕೊಂಡಿಯಾಗಿರುವ ಜನಪ್ರತಿನಿಧಿಗಳು ಎಂದಿಗೂ ಇರಬೇಕು.

ಎ.ಎಚ್. ಬಸವರಾಜು

'ಆರು ತಿಂಗಳಿಗಿಂತ ಹೆಚ್ಚು ಖಾಲಿ ಇರಬಾರದು'



ರಾಜೀವ್‌ಗಾಂಧಿ ಅವರು ಸಂವಿಧಾನಕ್ಕೆ ತಿದ್ದುಪಡಿ ತಂದು, ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಿದರು. ಯಾವುದೇ ಸ್ಥಳೀಯ ಸಂಸ್ಥೆಗೆ ಆರು ತಿಂಗಳಿಗಿಂತ ಹೆಚ್ಚು ಅವಧಿಗೆ ಆಡಳಿತಾಧಿಕಾರಿ ಇರಬಾರದು ಎಂದು ನಿಯಮ ಮಾಡಿದ್ದರು. ಆದರೆ, ವರ್ಷಗಟ್ಟಲೆ ಆಡಳಿತಾಧಿಕಾರಿ ಇದ್ದಾರೆ. ಕಾರ್ಪೊರೇಟರ್‌ಗಳು ಇಲ್ಲದಿರುವುದರಿಂದ ಹಲವು ಸಮಸ್ಯೆಗಳನ್ನು ಅಧಿಕಾರಿಗಳು ಪರಿಹರಿಸುತ್ತಿಲ್ಲ.

– ಎಂ. ಉದಯಶಂಕರ್

'ಅಧಿಕಾರಿಗಳು ಕೈಗೆ ಸಿಗುತ್ತಿಲ್ಲ'



ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲೇಬೇಕು. ಯಾರ ರೀತಿಯಲ್ಲಾದರೂ ವಿಭಾಗ ಮಾಡಲಿ, ಆದರೆ ಚುನಾವಣೆಯನ್ನು ಮೊದಲು ಮಾಡಬೇಕು. ಸರ್ಕಾರದಿಂದ ಚುನಾವಣೆ ನಡೆಸುವ ಭರವಸೆ ದೊರೆತಿದೆ. ಕಾರ್ಪೊರೇಟರ್‌ಗಳು ಇಲ್ಲದಿರುವುದರಿಂದ ಸ್ಥಳೀಯ ಸಮಸ್ಯೆಗಳು ನಿವಾರಣೆಯಾಗುತ್ತಿಲ್ಲ. ಅಧಿಕಾರಿಗಳು ಜನರ ಕೈಗೆ ಸಿಗುತ್ತಿಲ್ಲ. ಕೆಲಸವನ್ನೂ ಮಾಡುತ್ತಿಲ್ಲ.

– ಎಂ. ಶಿವರಾಜ್

'ರಾಜೀವ್‌ಗಾಂಧಿ ಆಶಯಕ್ಕಿಲ್ಲ ಬೆಲೆ'



74ನೇ ತಿದ್ದುಪಡಿ ಪ್ರಕಾರ ಚುನಾವಣೆ ನಡೆಯಬೇಕು, ಸ್ಥಳೀಯ ಸಂಸ್ಥೆಗಳೇ ಅಧಿಕಾರ ನಡೆಸಬೇಕು, ಯಾರೂ ಮೂಗು ತೂರಿಸುವಂತಿಲ್ಲ. ಆದರೆ, ರಾಜೀವ್‌ಗಾಂಧಿಯವರ ಆಶಯವನ್ನು ಪಾಲಿಸದೆ, ಕಾಂಗ್ರೆಸ್‌ನವರು ತಮ್ಮ ಪಕ್ಷದ ನಾಯಕನಿಗೇ ಅಪಮಾನ ಮಾಡುತ್ತಿದ್ದಾರೆ. ಅಲ್ಲದೆ, ನಗರ ನಿರ್ಮಾತೃ ಕೆಂಪೇಗೌಡರ ಪಾಲಿಕೆಯನ್ನು ವಿಭಜಿಸಿ, ಅವರಿಗೆ ಅವಮಾನ ಮಾಡಲು ಹೊರಟಿದ್ದಾರೆ.

ಎನ್.ಆರ್. ರಮೇಶ್

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

'ಸಚಿವ ಸ್ಥಾನ ಮುಳ್ಳಿನ ಹಾಸಿಗೆ ಇದ್ದಂತೆ'

ಕನಕಪುರ: 'ರಾಜ್ಯದ ತಮಿಳುನಾಡು ಗಡಿ ಪ್ರದೇಶದ ಕಾಡಂಚಿನ ಕುಗ್ರಾಮದಲ್ಲಿ ಜನಿಸಿದ ನನಗೆ ಪ್ರಧಾನಿ ಮೋದಿ ಸಂಪುಟದಲ್ಲಿ ಅವಕಾಶ ಸಿಕ್ಕಿದೆ. ಇದರ ಸದ್ಬಳಕೆ ಮಾಡಿಕೊಳ್ಳುವುದಾಗಿ' ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಇಲ್ಲಿನ ದೇಗುಲಮಠದಲ್ಲಿ ಶನಿವಾರ ಏರ್ಪಡಿಸಿದ್ದ ಅಭಿನಂಧನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಚಿವ ಸ್ಥಾನ ನನಗೆ ಮುಳ್ಳಿನ ಹಾಸಿಗೆಯಂತೆ. ಅದನ್ನು ಮೋದಿ ಅವರ ಆಶಯದಂತೆ ನಿರ್ವಹಿಸುವುದಾಗಿ' ಹೇಳಿದರು.

10ವರ್ಷದಲ್ಲಿ 40 ಸಾವಿರ ಕಿ.ಲೋ ಮೀಟರ್ ರೈಲ್ವೆ ಮಾರ್ಗ ಡಬಲ್ ಲೈನ್ ಮತ್ತು ವಿದ್ಯುತ್ ಮಾರ್ಗ ಮಾಡಲಾಗಿದೆ ಎಂದರು. 'ಇಂಗ್ಲಿಷ್ ಮತ್ತು ಹಿಂದಿ ಕಲಿತು ಅತ್ಯುತ್ತಮವಾಗಿ ಕೆಲಸ ಮಾಡುತ್ತೇನೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



ಎಚ್‌ಆರ್‌ಬಿಆರ್ ಲೇಔಟ್‌ನ 3ನೇ ಬ್ಲಾಕ್ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಜೋಯಾಲುಕ್ಕಾಸ್ ಮಳಿಗೆಯನ್ನು ಮಾಜಿ ಸಂಸದ ಕೆ.ಸಿ. ರಾಮಮೂರ್ತಿ ಉದ್ಘಾಟಿಸಿದರು. ಚಲನಚಿತ್ರ ನಟಿ ನೇಹಾ ಸಕ್ಸೇನಾ ಹಾಗೂ ಸಂಸ್ಥೆಯ ಮುಖ್ಯಸ್ಥರು ಹಾಜರಿದ್ದರು

ಅದಿರು ಕಂಪನಿಗೆ ಅನುಮತಿ ಅಪಾರ್ಥ ಬೇಡ– ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದೇವದಾರಿ ಅರಣ್ಯ ಪ್ರದೇಶದಲ್ಲಿ ಕಬ್ಬಿಣದ ಅದಿರು ತೆಗೆಯಲು ಕುದುರೆಮುಖ ಕಬ್ಬಿಣ ಅದಿರು ಕಂಪನಿಗೆ (ಕೆಐಒಸಿಎಲ್) ಅನುಮತಿ ನೀಡಿದರೆ, ಒಂದೇ ವರ್ಷದಲ್ಲಿ 99 ಸಾವಿರ ಮರಗಳ ಹನನ ಆಗುವುದಿಲ್ಲ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಪಾದಿಸಿದರು.

'50 ವರ್ಷ ನಿರಂತರ ಗಣಿಗಾರಿಕೆ ನಡೆದರೆ ಮಾತ್ರ ಅಷ್ಟು ಮರಗಳ ಹನನವಾಗುತ್ತದೆ. ಪರ್ಯಾಯವಾಗಿ ಮರ ಬೆಳೆಸಲು ಆ ಕಂಪನಿ ಸರ್ಕಾರಕ್ಕೆ ₹123 ಕೋಟಿ ಕೊಟ್ಟಿದೆ' ಎಂದು ಶನಿವಾರ ಇಲ್ಲಿ ಹೇಳಿದರು.

ಮಂಡ್ಯದಲ್ಲಿ ನೂತನ ಸಂಸದರ ಕಚೇರಿ ಉದ್ಘಾಟಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಅದಿರು ತೆಗೆಯಲು ಸಹಿ ಹಾಕಿದ್ದಕ್ಕೆ ರಾಜ್ಯದಲ್ಲಿ ಚರ್ಚೆ ಆಗಿದೆ. ಈ ವಿಷಯದಲ್ಲಿ ಯಾರೂ ನನ್ನ ಬಗ್ಗೆ ಅಪಾರ್ಥ ಮಾಡಿಕೊಳ್ಳಬೇಡಿ' ಎಂದು



ಕಾವೇರಿ ನೀರು ಹಂಚಿಕೆ, ಮೇಕೆದಾಟು ಯೋಜನೆ ಬಗ್ಗೆ ಕಾನೂನಾತ್ಮಕವಾಗಿ ಪರಿಹಾರ ಕಂಡುಕೊಳ್ಳುವ ಬಗ್ಗೆ ತಂದೆ ದೇವೇಗೌಡರ ಬಳಿ ಚರ್ಚಿಸಿದ್ದೇನೆ. ರಾಜ್ಯದ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತೇನೆ

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸಮಜಾಯಿಷಿ ನೀಡಿದರು.

'ಕುದುರೆಮುಖ ಭಾಗದಲ್ಲಿ ಗಣಿಗಾರಿಕೆ ನಿಂತ ನಂತರ ಪರ್ಯಾಯವಾಗಿ ಬೇರೊಂದು ಜಾಗದಲ್ಲಿ ಗಣಿಗಾರಿಕೆ ನಡೆಸಲು ಚರ್ಚೆ ಆರಂಭವಾಯಿತು. 2016ರಲ್ಲಿ ಕುದುರೆಮುಖ ಯುನಿಟ್‌ಗೆ ರಾಜ್ಯ ಸರ್ಕಾರ 440 ಹೆಕ್ಟೇರ್ ಗಣಿ ಚಟುವಟಿಕೆ ನಡೆಸಲು ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರ ಮತ್ತು ಕೇಂದ್ರ ಪರಿಸರ ಇಲಾಖೆ ಕೂಡಾ ಅನುಮತಿ ನೀಡಿದೆ' ಎಂದರು.

'ಕುದುರೆಮುಖ ಯುನಿಟ್ ಸಂಸ್ಥೆ ಈಗಾಗಲೇ ₹500 ಕೋಟಿ ಕಟ್ಟಿದೆ. ಒಂದು ವರ್ಷ ಅದಿರು ಚಟುವಟಿಕೆಗೆ ಅನುಮತಿ ನೀಡಲಾಗಿದೆ. ಎಷ್ಟು ಅದಿರು ಸಿಗುತ್ತದೆ ಎಂಬುದನ್ನು ನೋಡಿಕೊಂಡು ಮುಂದಿನ ತೀರ್ಮಾನ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು.

'ಒಂದೇ ವರ್ಷದಲ್ಲಿ ಎಲ್ಲ ಮರ ಕಡಿಯುವುದಿಲ್ಲ. ಕುದುರೆಮುಖ ಸಂಸ್ಥೆ ಉಳಿಸಿ ಅಂತ ಮನವಿ ಕೊಡಲಾಗಿದೆ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ' ಎಂದರು.

'ನನಗೆ ಕೃಷಿ ಖಾತೆ ಸಿಗುತ್ತದೆ ಎಂಬುದು ಜಿಲ್ಲೆಯ ಜನರ ಅಪೇಕ್ಷೆಯಾಗಿತ್ತು. ಆದರೆ, ಪ್ರಧಾನಿ ಮೋದಿ ಅವರು ಬೃಹತ್ ಕೈಗಾರಿಕೆ ಮತ್ತು ಉಕ್ಕು ಎಂಬ ಎರಡು ದೊಡ್ಡ ಇಲಾಖೆಗಳನ್ನು ಕೊಟ್ಟಿದ್ದಾರೆ. ಕೃಷಿ ಸಚಿವನಾಗದಿದ್ದರೂ ಸಂಬಂಧಿಸಿದ ಸಚಿವರ ಜೊತೆ ಮಾತನಾಡಿ ಪರಿಹಾರ ಕಲ್ಪಿಸುವ ಕೆಲಸ ಮಾಡುತ್ತೇನೆ. ರಾಜ್ಯ, ಮಂಡ್ಯ ಜಿಲ್ಲೆಗೆ ಕೈಗಾರಿಕೆಗಳನ್ನು ತಂದು ಉದ್ಯೋಗ ಸೃಷ್ಟಿಸುವ ಕೆಲಸ ಮಾಡುತ್ತೇನೆ' ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಬಿಬಿಎಂಪಿ ಚುನಾವಣೆಯಲ್ಲಿ ಚೇತರಿಕೆ– ಡಿಕೆಶಿ ವಿಶ್ವಾಸ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಹಿನ್ನಡೆಯಾದರೂ, ಮುಂದೆ ಎದುರಾಗುವ ಬಿಬಿಎಂಪಿ ಚುನಾವಣೆ ಗೆದ್ದು ಆಡಳಿತ ಚುಕ್ಕಾಣಿ ಹಿಡಿಯಬೇಕೆಂಬ ಗುರಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದ ನಗರ ಬ್ಲಾಕ್ ನಾಯಕರಿಗೆ ನೀಡಿದ್ದಾರೆ.

ಬಿಬಿಎಂಪಿ ಚುನಾವಣೆ ಸಿದ್ಧತೆ ಬಗ್ಗೆ ಕುರಿತಂತೆ ಶನಿವಾರ ಸಭೆ ನಡೆಸಿದ ಅವರು, ಸುದ್ದಿಗಾರರ ಜೊತೆ ಮಾತನಾಡಿ, 'ಖಾಲಿ ಇರುವ ಪದಾಧಿಕಾರಿಗಳ ಹುದ್ದೆ ಭರ್ತಿ ಮಾಡಲು, ನಿಷ್ಕ್ರಿಯರಾಗಿರುವ ಪದಾಧಿಕಾರಿಗಳ ಜಾಗಕ್ಕೆ ಬೇರೆಯವರನ್ನು ನೇಮಿಸುವಂತೆ ಸೂಚನೆ ನೀಡಿದ್ದು ಒಂದು ತಿಂಗಳ ಕಾಲಾವಕಾಶ ನೀಡಿದ್ದೇನೆ' ಎಂದರು.

'ಪಾಲಿಕೆಯ ಚುನಾವಣೆ ಶೀಘ್ರದಲ್ಲಿಯೇ ನಡೆಯಲಿದೆ. ಅಷ್ಟರ ವೇಳೆಗೆ ಪಕ್ಷವನ್ನು ಸಜ್ಜುಗೊಳಿಸಬೇಕಿದೆ. ಬೆಂಗಳೂರು ನಗರ ವ್ಯಾಪ್ತಿಯ ಲೋಕಸಭಾ ಕ್ಷೇತ್ರಗಳನ್ನು ನಾವು ಸೋತಿರಬಹುದು. ಆದರೆ, ಪಾಲಿಕೆ ಚುನಾವಣೆಯಲ್ಲಿ ನಾವು ಚೇತರಿಸಿಕೊಳ್ಳುವ ವಿಶ್ವಾಸವಿದೆ' ಎಂದರು.

'ಯಡಿಯೂರಪ್ಪ ಪ್ರಕರಣದಲ್ಲಿ ದ್ವೇಷ ರಾಜಕಾರಣ ನಡೆಯುತ್ತಿದೆ' ಎಂಬ ಬಿಜೆಪಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಇದು ಕಾನೂನು ಪ್ರಕ್ರಿಯೆ. ಬಿಜೆಪಿ ನಾಯಕರು ನಮ್ಮ ಹೆಸರು ಯಾಕೆ ತೆಗೆದುಕೊಳ್ಳುತ್ತಿದ್ದಾರೆ ಎಂದು ತಿಳಿದಿಲ್ಲ. ಇದರಲ್ಲಿ ನಮ್ಮ ಹಸ್ತಕ್ಷೇಪವಿಲ್ಲ ಎಂದು ಅವರಿಗೂ ಗೊತ್ತಿದೆ. ಆದರೂ, ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಕಾನೂನು ಪ್ರಕ್ರಿಯೆ ನಡೆಯುತ್ತಿದ್ದು, ಈ ವಿಚಾರವಾಗಿ ಮಾತನಾಡುವುದು ಸರಿಯಲ್ಲ' ಎಂದರು.

'ಗೋ ರಕ್ಷಣೆಯಿಂದ ದೇಶ ಸಮೃದ್ಧಿ'



ಬೆಂಗಳೂರು: 'ತಂದೆ ತಾಯಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ. ಆದರೆ, ಜೀವನಪೂರ್ತಿ ಪಂಚಾಮೃತ ನೀಡುವ ಗೋಮಾತೆಯ ಋಣವನ್ನು ತೀರಿಸಬಹುದು' ಎಂದು ಗೋ–ಸೇವಕ ಮಹೇಂದ್ರ ಮುನ್ನೋತ್ ತಿಳಿಸಿದರು.

'ವೃಕ್ಷಾರೋಹಣ' ಹೆಸರಿನಲ್ಲಿ ಕನಕಪುರ ರಸ್ತೆಯ ದಿಣ್ಣೆಪಾಳ್ಯದದ ಅಮೃತಧಾರಾ ಗೋಶಾಲೆಯಲ್ಲಿ ಹಮ್ಮಿಕೊಂಡಿದ್ದ ಗೋಪೂಜೆಯಲ್ಲಿ 20ಕ್ಕೂ ಹೆಚ್ಚು ಗೋಶಾಲೆಗಳ ಮುಖ್ಯಸ್ಥರಿಗೆ ಚೆಕ್ ರೂಪದಲ್ಲಿ ದೇಣಿಗೆ ನೀಡಿದರು. ತಂದೆಯ ಪುಣ್ಯತಿಥಿಯ ಪ್ರಯುಕ್ತ ಅವರು ಈ ಸೇವೆ ಮಾಡುತ್ತಿದ್ದು, ಅವರು ನೀಡಿದ ದೇಣಿಗೆಯು ₹ 51 ಲಕ್ಷ ತಲುಪಿದೆ.

ಈ ವೇಳೆ ಮಾತನಾಡಿದ ಮಹೇಂದ್ರ ಮುನ್ನೋತ್, 'ಗೋವು ನಮ್ಮ ಸನಾತನ ಪರಂಪರೆಯ ದೈವೀಮೂರ್ತಿ ಮಾತ್ರವಾಗಿರದೆ, ಒಂದು ರೀತಿಯ ಪಾಪನಾಶಿನಿಯಾಗಿದೆ. ಅನ್ನದಾತನ ಜೀವಬಂಧುವಾಗಿದೆ. ಅಂತಹ ಗೋವು ಉಳಿಸಿದರೆ ದೇಶ ಸಂವೃದ್ಧಿ, ಸಂಪದ್ಭರಿತವಾಗುತ್ತದೆ. ಇದನ್ನು ಪ್ರತಿ ಭಾರತೀಯನೂ ಅರ್ಥೈಸಿಕೊಳ್ಳಬೇಕು' ಎಂದರು.



ಹೊಸ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಶುಕ್ರವಾರ ಎಚ್‌ಬಿಆರ್ ಸ್ಟೇಷನ್‌ನಲ್ಲಿ ಚಾಲನೆ ನೀಡಿದರು.

ಎಚ್‌ಬಿಆರ್‌ಗೆ ಹೊಸ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಜ್ಞನಗರ, ಎಚ್‌ಬಿಆರ್ ಲೇಔಟ್, ಬಾಣಸವಾಡಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಿಗೆ ಗುಣಮಟ್ಟದ ವಿದ್ಯುತ್ ಒದಗಿಸುವ ಹೊಸ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಶುಕ್ರವಾರ ಎಚ್‌ಬಿಆರ್ ಸ್ಟೇಷನ್‌ನಲ್ಲಿ ಚಾಲನೆ ನೀಡಿದರು.

ಎಚ್‌ಬಿಆರ್ ಜಿಐಎಸ್ ವಿದ್ಯುತ್ ಕೇಂದ್ರದಿಂದ ಪಾಟರಿ ರಸ್ತೆ ವಿದ್ಯುತ್ ಉಪ ಕೇಂದ್ರಕ್ಕೆ ಸುಮಾರು 5.18 ಕಿ.ಮೀ. ಉದ್ದದ ಏಕಮಾರ್ಗ 1000 ಚದರ ಮಿ.ಮೀ. ಭೂಗತ ಕೇಬಲ್‌ಅನ್ನು ಕೆಪಿಟಿಸಿಎಲ್ ಅಳವಡಿಸಿದೆ ಎಂದು ಇಂಧನ ಸಚಿವರು ತಿಳಿಸಿದರು.

ಈಗಿರುವ ಪಾಟರಿ ರಸ್ತೆ ವಿದ್ಯುತ್ ಉಪಕೇಂದ್ರಕ್ಕೆ ಐಟಿಐ ವಿದ್ಯುತ್ ಉಪಕೇಂದ್ರದಿಂದ ದ್ವಿಮಾರ್ಗ ಪ್ರಸರಣ ಮಾರ್ಗ ಸಂಪರ್ಕದಲ್ಲಿದ್ದು, ಈ ಉಪಕೇಂದ್ರದಿಂದ ಸರ್ವಜ್ಞನಗರ, ಎಚ್‌ಬಿಆರ್ ಲೇಔಟ್, ನಾಗವಾರ, ಬಾಣಸವಾಡಿ, ಕಮ್ಮನಹಳ್ಳಿ, ಕಾಡಗೊಂಡನಹಳ್ಳಿ, ಲಿಂಗರಾಜಪುರ, ಅರೇಬಿಕ್ ಕಾಲೇಜು, ಟ್ಯಾನರಿ ರಸ್ತೆ, ಡೇವಿಸ್ ರಸ್ತೆ, ಪುಲಕೇಶಿನಗರ ಮತ್ತು ದಂಡು ರೈಲ್ವೆ ನಿಲ್ದಾಣ ಮತ್ತು ಸುತ್ತಮುತ್ತಲಿನ ಇತರ ಪ್ರದೇಶಗಳಿಗೆ ಕೈಗಾರಿಕೆ, ವಾಣಿಜ್ಯ, ಗೃಹಬಳಕೆಯ ಉದ್ದೇಶಗಳಿಗಾಗಿ ವಿದ್ಯುತ್ ಒದಗಿಸಲಾಗುತ್ತಿದೆ ಎಂದರು.

ಪಾಟರಿ ವಿದ್ಯುತ್ ಉಪಕೇಂದ್ರಕ್ಕೆ ಮುಖ್ಯ ಹಾಗೂ ಪರ್ಯಾಯ ಪ್ರಸರಣಾ ಮಾರ್ಗದ ವ್ಯವಸ್ಥೆಗಳಾಗಿರುವುದರಿಂದ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಒದಗಿಸಲು ನೆರವಾಗಲಿದೆ. ₹39.05 ಕೋಟಿ ವೆಚ್ಚದ ಈ ಯೋಜನೆಯಿಂದ 17.603 ಮಿಲಿಯನ್ ಯೂನಿಟ್ ವಾರ್ಷಿಕ ಇಂಧನ ಉಳಿತಾಯವಾಗುತ್ತದೆ ಎಂದು ತಿಳಿಸಿದರು.

ಸಾಹಿತಿ ಹಂ.ಪ. ನಾಗರಾಜಯ್ಯ ಅಭಿಮತ • ತಾರಾನಾಥ್‌ಗೆ 'ಚಿದಾನಂದ ಪ್ರಶಸ್ತಿ' ಪ್ರದಾನ

'ಪರಿಶ್ರಮದ ಕಲಿಕೆಯಿಂದ ಬದುಕು ಹಸನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಠಿಣ ಪರಿಶ್ರಮ, ಗುರಿ ಇದ್ದಾಗ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ' ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ತಿಳಿಸಿದರು.

ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎನ್.ಎಸ್. ತಾರಾನಾಥ್ ಅವರಿಗೆ 2024ನೇ ಸಾಲಿನ 'ಚಿದಾನಂದ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಮತ್ತು ಸರ್ಕಾರಿ ಕಲಾ ಕಾಲೇಜು ಜಂಟಿಯಾಗಿ ಕಾರ್ಯಕ್ರಮವನ್ನು ಏರ್ಪಡಿಸಿದ್ದವು.

'ಪದವಿ, ಸ್ನಾತಕೋತ್ತರ ಪದವಿ ಅವಧಿಯಲ್ಲಿ ಕಷ್ಟಪಟ್ಟು ಓದಿದರೆ ಮುಂದಿನ 40 ವರ್ಷ ಬದುಕು ಕಟ್ಟಿಕೊಳ್ಳಬಹುದು. ಈ ಅವಧಿಯಲ್ಲಿ ಮನಸ್ಸು ಬೇರೆಡೆಗೆ ಹರಿದಾಡಿದಲ್ಲಿ ಜೀವನ ಪೂರ್ತಿ ಕಷ್ಟಪಡಬೇಕಾಗುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಪರಿಶ್ರಮ, ತಾಳ್ಮೆ ಅತೀ ಮುಖ್ಯ. ಓದು ಹಾಗೂ ಕಲಿಕೆಗೆ ಮುಕ್ತಾಯ ಎನ್ನುವುದಿಲ್ಲ. ಈಗ ಪ್ರಾರಂಭವೆಂದು ಹೆಜ್ಜೆ ಇಡಬೇಕು. ವ್ಯಾಕರಣ, ಛಂದಸ್ಸು, ಶಾಸನಶಾಸ್ತ್ರ ಹಾಗೂ ತೌಲನಿಕ ಅಧ್ಯಯನ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ತಾರಾನಾಥ್, ಓದುಗರಿಗೆ ಬೇಕಾದ ಸಿದ್ಧತೆಯ ಪಾಠಗಳನ್ನು ಮಾಡಿದರು. ಹೊಸ ತಲೆಮಾರಿಗೆ ಬೇಕಾದ ವಾತಾವರಣ ನಿರ್ಮಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದವರಲ್ಲಿ ಇವರೂ ಒಬ್ಬರು' ಎಂದರು.

ಅಭಿನಂದನಾ ಭಾಷಣ ಮಾಡಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಎಚ್.ಶಶಿಕಲಾ, 'ಕನ್ನಡ ಭಾಷೆಯು ಬೇರೆ ಭಾಷೆಗಳಿಂದ ಪುಷ್ಟಿ ಪಡೆದಿದೆ. ಕನ್ನಡ ಭಾಷೆ ಬದಲಾಗುತ್ತಿದೆ. ಭಾಷೆ ಬದಲಾವಣೆಯ ಅಗತ್ಯವನ್ನು ಗುರುತಿಸಬೇಕು. ಸಂಶೋಧನೆಗಳು ವಾಸ್ತವದ ನೆಲೆಗಟ್ಟಿನಿಂದ ಕೂಡಿರಬೇಕು' ಎಂದರು.

ಎನ್.ಎಸ್.ತಾರಾನಾಥ್ ಅವರು, 'ಸಂಶೋಧಕ ಚಿದಾನಂದ ಮೂರ್ತಿ ಅವರು ವಿದ್ಯಾರ್ಥಿಗಳ ಕಲಿಕೆಗೆ ಉತ್ತೇಜನ ನೀಡುತ್ತಿದ್ದರು. ಕನ್ನಡದ ಜತೆಗೆ ಸಂಸ್ಕೃತ ಹಾಗೂ ಸಂಸ್ಕೃತಿಯ ಶೋಧಕರಾಗಿ ಗುರುತಿಸಿಕೊಂಡರು. ಅವರ ಸಂಶೋಧನೆಗೆ ಅನೇಕ ಆಯಾಮಗಳಿದ್ದವು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಎನ್.ಎಸ್. ತಾರಾನಾಥ್ ಮತ್ತು ಸ್ವರ್ಣಗೌರಿ ತಾರಾನಾಥ್ ದಂಪತಿಗೆ 'ಚಿದಾನಂದ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಹಾಯಕ ಪ್ರಾಧ್ಯಾಪಕ ರುದ್ರೇಶ್ ಅದರಂಗಿ, ವಿಶಾಲಾಕ್ಷಿ, ಎಚ್. ಶಶಿಕಲಾ, ಬಿ.ಸಿ.ನಾಗೇಂದ್ರ ಕುಮಾರ್, ಪಿ.ಟಿ.ಶ್ರೀನಿವಾಸ್ ನಾಯಕ, ಪಿ.ಶಿವಪ್ರಸಾದ್, ಹಂ.ಪ.ನಾಗರಾಜಯ್ಯ, ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಕಾರ್ಯದರ್ಶಿ ಎಸ್.ಎಲ್.ಶ್ರೀನಿವಾಸ ಮೂರ್ತಿ ಮತ್ತು ಸಮಿತಿಯ ಅಧ್ಯಕ್ಷ ಸಿ.ಯು. ಮಂಜುನಾಥ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬಾಪೂಜಿ ವಿದ್ಯಾ ಸಂಸ್ಥೆ (ರಿ.)



94ರ ಅಮೃತ ಪುರುಷರಿಗೆ
ಜನ್ಮದಿನದ ಶುಭಾಶಯಗಳು



ಎಸ್.ಎಸ್. ಮಲ್ಲಿಕಾರ್ಜುನ್
ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ,
ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾ ಸಂಸ್ಥೆ





ಡಾ|| ಪ್ರಭಾ ಮಲ್ಲಿಕಾರ್ಜುನ್
ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಸದಸ್ಯರು, ಬಾಪೂಜಿ ವಿದ್ಯಾ ಸಂಸ್ಥೆ

ತೊಂಬತ್ತೂರು ವರ್ಷಗಳನ್ನು ಪೂರೈಸಿ ಇಂದಿಗೆ ತೊಂಬತ್ತನಾಲ್ಕಕ್ಕೆ ಪಾದಾರ್ಪಣೆ ಮಾಡುತ್ತಿರುವ, ಅಮೃತ ಪುರುಷರು, ಸರ್ವಧರ್ಮ ಸಮನ್ವಯದ ಪ್ರತಿಪಾದಕರು, ಆರನೇ ಬಾರಿಗೆ ವಿಧಾನಸಭೆ ಪ್ರವೇಶಿಸುವುದರ ಮೂಲಕ ಗಿನ್ನಿಸ್ ದಾಖಲೆಗೆ ಅರ್ಹರಾಗಿರುವ ಧೀಮಂತ ಜನನಾಯಕರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ

ಡಾ. ಶಾಮನೂರು ಶಿವಶಂಕರಪ್ಪ

ಅವರಿಗೆ ಜನ್ಮದಿನದ ಶುಭಾಶಯಗಳು.
ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.



ಆರ್. ರಮಾನಂದ್
ಅಧ್ಯಕ್ಷರು



ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು



ಎ.ಎಸ್. ನಿರಂಜನ್
ಖಜಾಂಚಿ



ಡಾ|| ಎ.ಎಸ್. ವೀರಣ್ಣ
ಸದಸ್ಯರು




ಸಂಪನ್ನ ಮುತಾಲಿಕ್
ಸದಸ್ಯರು

S S INSTITUTE OF MEDICAL SCIENCE & RESEARCH CENTRE, DAVANGERE



BAPUJI MBA COLLEGE, DAVANGERE



ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.

ದೇವದಾರಿ ಗಣಿಗಾರಿಕೆ ವಿರೋಧಿಸಿದ್ದ ಅರಣ್ಯ ಇಲಾಖೆ

• ಹರಿಶಂಕರ್ ಆರ್.

ಬಳ್ಳಾರಿ: ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಕೇಂದ್ರ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಸಮ್ಮತಿಸಿದ್ದಾರೆ. ಆದರೆ, ಈ ಗಣಿಗಾರಿಕೆಗೆ ರಾಜ್ಯ ಅರಣ್ಯ ಇಲಾಖೆ ಈ ಹಿಂದೆಯೇ ತೀವ್ರ ವಿರೋಧ ವ್ಯಕ್ತಪಡಿಸಿದೆ.

‘ಸಂಡೂರಿನ ಸ್ವಾಮಿಮಲೈ ಅರಣ್ಯ ಪ್ರದೇಶದ ಒಟ್ಟು 485.77 ಹೆಕ್ಟೇರ್ (470.40 ಹೆಕ್ಟೇರ್–ಗಣಿಗಾರಿಕೆ, ರಸ್ತೆ ನಿರ್ಮಾಣಕ್ಕೆ ಮತ್ತು 15.37 ಹೆಕ್ಟೇರ್–ಇತರೆ ಉದ್ದೇಶಕ್ಕೆ) ಅರಣ್ಯ ಪ್ರದೇಶದಲ್ಲಿ ಕುದುರೆಮುಖ ಐರನ್ ಓರ್ ಕಂಪನಿ (ಕೆಐಒಸಿಎಲ್) ಕೈಗೊಳ್ಳುವ ಗಣಿಗಾರಿಕೆ, ರಸ್ತೆ ನಿರ್ಮಾಣ ಮತ್ತು ಪೂರಕ ಚಟುವಟಿಕೆಗಳಿಂದ ಅರಣ್ಯ, ಜೀವವೈವಿಧ್ಯ, ಪರಿಸರ ಹಾಗೂ ಜನಜೀವನಕ್ಕೆ ಹಾನಿಯಾಗಲಿದೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಮಾಹಿತಿ ಹಕ್ಕು ಕಾಯ್ದೆಯಡಿ ಸರ್ಕಾರ ನೀಡಿದ ದಾಖಲೆಗಳಿಂದ ಇದು ಗೊತ್ತಾಗಿದ್ದು, ಆ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

ಸ್ವಾಮಿಮಲೈ ಅರಣ್ಯದಲ್ಲಿ ಗಣಿಗಾರಿಕೆಗಾಗಿ ಕೆಐಒಸಿಎಲ್‌ಗೆ 470.40 ಹೆಕ್ಟೇರ್ ಪ್ರದೇಶ ಮೀಸಲಿಟ್ಟು 2017ರ ಜನವರಿ 23ರಂದು ರಾಜ್ಯ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿತ್ತು. ಅದರಂತೆ ಕಂಪನಿಯು ಅರಣ್ಯ ಅನುಮತಿ (ಎಫ್‌ಸಿ) ಕೋರಿ 2018ರ ಮಾರ್ಚ್ 16ರಂದು ಇಲಾಖೆಗೆ ಮನವಿ ಸಲ್ಲಿಸಿತ್ತು. ಅದನ್ನು ಅರಣ್ಯ ಇಲಾಖೆಯ ನೋಡಲ್ ಅಧಿಕಾರಿ ಅದೇ ವರ್ಷದ ಆಗಸ್ಟ್ 30ರಂದು ಬಳ್ಳಾರಿ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ (ಡಿಸಿಎಫ್) ರವಾನಿಸಿದ್ದರು. 2019ರ ಜೂನ್ 9 ಮತ್ತು ಸೆಪ್ಟೆಂಬರ್ 25ರಂದು ಡಿಸಿಎಫ್ ಸ್ಥಳ ಪರಿಶೀಲಿಸಿದ್ದರು.

ನಂತರ ಅವರು, ‘ಈ ಯೋಜನೆಯನ್ನು ಒಪ್ಪಬಾರದು. ಅರಣ್ಯ ಸಂರಕ್ಷಣೆ ಕಾಯ್ದೆ 1980ರಡಿ ಅನುಮತಿ ನೀಡಲು ಪರಿಗಣಿಸಲೂ ಬಾರದು’ ಎಂದು ಸ್ಪಷ್ಟವಾಗಿ ಹೇಳಿ ತಮ್ಮ ವರದಿಯಲ್ಲಿ ಹಲವು ಕಾರಣಗಳನ್ನು ನೀಡಿದ್ದರು.

ಡಿಸಿಎಫ್ ವರದಿ ಆಧರಿಸಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) 2019ರ ಡಿಸೆಂಬರ್ 6ರಂದು ಸ್ಥಳ ಪರಿಶೀಲನೆ ನಡೆಸಿ, ‘ಅಸ್ತಿತ್ವದಲ್ಲಿರುವ ಗಣಿಗಳಿಂದ ಈಗಾಗಲೇ ಈ ಪ್ರದೇಶ ತೀವ್ರ ಹಾನಿಗೀಡಾಗಿದೆ. ಇಲ್ಲಿನ ಅರಣ್ಯ, ವನ್ಯಜೀವಿ, ಜಲ ಭದ್ರತೆ ಮತ್ತು ಮಣ್ಣಿನ ಆರೋಗ್ಯದ ಹಿತದೃಷ್ಟಿಯಿಂದ ಈ ಯೋಜನೆಗೆ ಅನುಮತಿ ನೀಡಬಾರದು ಎಂದು ನಾನು ಶಿಫಾರಸು ಮಾಡುತ್ತೇನೆ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ (ಎಪಿಸಿಸಿಎಫ್) ವರದಿ ಸಲ್ಲಿಸಿದ್ದರು.

ಅಂತಿಮವಾಗಿ ಡಿಸಿಎಫ್, ಸಿಸಿಎಫ್, ಕೆಐಒಸಿಎಲ್ ಅಧಿಕಾರಿಗಳು ಮತ್ತು ಇತರರ ಜತೆಗೆ 2020ರ ಜನವರಿ 16ರಂದು ಸ್ಥಳ ಪರಿಶೀಲಿಸಿದ ಎಪಿಸಿಸಿಎಫ್, ‘ಸ್ವಾಮಿಮಲೈ ಅರಣ್ಯ ಪ್ರದೇಶದಲ್ಲಿ ಗಣಿಗೆ ಅನುಮತಿ ನೀಡಬಾರದು’ ಎಂದು ಶಿಫಾರಸು ಮಾಡಿದ್ದರು. ಜತೆಗೆ, ಡಿಸಿಎಫ್ ಮತ್ತು ಸಿಸಿಎಫ್ ನೀಡಿದ್ದ ವರದಿಯನ್ನು ಅವರು ಎತ್ತಿ ಹಿಡಿದಿದ್ದರು.

ರಾಜ್ಯ ಅರಣ್ಯ ಇಲಾಖೆಯ ಪ್ರತಿರೋಧವನ್ನೂ ಮೀರಿ ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯ ಕೆಐಒಸಿಎಲ್‌ನ ‘ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆಗೆ 2021 ಆಗಸ್ಟ್ 13ರಂದು ಪರಿಸರ ಅನುಮತಿ (ಸ್ಟೇಜ್–1) ಮಂಜೂರು ಮಾಡಿತು. ಅಲ್ಲದೆ, 2022ರ ಡಿಸೆಂಬರ್ 16ರಂದು ಅಂತಿಮ ಅನುಮತಿಯನ್ನೂ (ಸ್ಟೇಜ್–2) ನೀಡಿದೆ. 2023ರ ಜ. 13ರಂದು ರಾಜ್ಯ ಸರ್ಕಾರ ಮತ್ತು ಕೆಐಒಸಿಎಲ್ ನಡುವೆ ಗುತ್ತಿಗೆ ಕರಾರು ಕೂಡ ಆಗಿದೆ.

‘ಗಣಿಗಾರಿಕೆಗೆ ಅನುಮತಿ ನೀಡಿದರೆ ಅಪಾರ ಹಾನಿಯಾಗಲಿದೆ ಎಂದು ರಾಜ್ಯ ಅರಣ್ಯ ಇಲಾಖೆಯ ವಿವಿಧ ಹಂತಗಳ ಅಧಿಕಾರಿಗಳು ವರದಿ ನೀಡಿರುವುದಾಗಿ ಸರ್ಕಾರವೇ ಒದಗಿಸಿದ ದಾಖಲೆಗಳು ಹೇಳುತ್ತಿವೆ. ಈ ವರದಿಗಳು ಏನಾದವು? ಕೇಂದ್ರ ಸರ್ಕಾರ ಯಾವ ಆಧಾರದಲ್ಲಿ ಗಣಿಗಾರಿಕೆಗೆ ಎರಡು ಹಂತದ ಅನುಮತಿ ನೀಡಿದೆ’ ಎಂದು ಪರಿಸರ ಹೋರಾಟಗಾರರು ಪ್ರಶ್ನಿಸಿದ್ದಾರೆ.


ಕೆಐಒಸಿಎಲ್ ಗಣಿಗಾರಿಕೆ ನಡೆಸಲಿರುವ ಪ್ರದೇಶದ ಉಪಗ್ರಹ ಚಿತ್ರ

ಗಣಿಗಾರಿಕೆಗೆ ಅನುಮತಿ ನೀಡದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಹೀಗಿದ್ದೂ ಗಣಿಗಾರಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಲು ಹೇಗೆ ಸಾಧ್ಯ?
ಶ್ರೀಶೈಲ, ಆಲದಹಳ್ಳಿ, ಜನಸಂಗ್ರಾಮ ಪರಿಷತ್

ತೀರ್ಮಾನ ಕೈಗೊಳ್ಳುವ ಅಧಿಕಾರ ಅಧಿಕಾರಿಗಳಿಗೆ ಇರುವುದಿಲ್ಲ. ಅದೇನಿದ್ದರೂ ಸರ್ಕಾರಕ್ಕೆ ಸಂಬಂಧಿಸಿದ ವಿಷಯ. ಸರ್ಕಾರದ ಹಂತದಲ್ಲೇ ಪರಿಶೀಲಿಸಬೇಕು.
ಚಂದ್ರಶೇಖರ ನಾಯಕ
ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ

ಆಕ್ಷೇಪ ಏಕೆ?

- ಉದ್ದೇಶಿತ ಗಣಿ ಪ್ರದೇಶ ಸ್ವಾಮಿಮಲೈ ಮೀಸಲು ಅರಣ್ಯದಲ್ಲಿದೆ
- ಗಣಿಗಾರಿಕೆಯಿಂದ 99,330 ಮರಗಳು ನೆಲಸಮವಾಗಲಿವೆ
- ದಟ್ಟ ಕಾಡು ನಾಶವಾದರೆ ಮಣ್ಣಿನ ಸವಕಳಿ, ಭೂಕುಸಿತ ಆಗಲಿದೆ
- ಗಣಿಗಾರಿಕೆ, ಅರಣ್ಯನಾಶದಿಂದ ನೀರಿನ ಭದ್ರತೆ, ಜನಜೀವನಕ್ಕೆ ಅಪಾಯ ಎದುರಾಗಲಿದೆ
- ಅರಣ್ಯ ಪ್ರದೇಶದಲ್ಲಿ ಹೊಸ ಗಣಿ ಗುತ್ತಿಗೆಗೆ ಅನುಮತಿ ನೀಡದಂತೆ 2016ರ ಮಾರ್ಚ್ 28ರಂದು ಅರಣ್ಯ ಇಲಾಖೆಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ
- ಗಣಿಗಾರಿಕೆ ನಡೆಯಲಿರುವ ಜಾಗ ದರೋಜಿ ಕರಡಿ ಧಾಮದಿಂದ 19.22 ಕಿ.ಮೀ ದೂರದಲ್ಲಿದೆ. ದರೋಜಿ ಜೀವವೈವಿಧ್ಯ ವಲಯದಿಂದ 17.52 ಕಿ.ಮೀ, ಗುಡೇಕೋಟೆ ಕರಿಡಿಧಾಮದಿಂದ 14.04 ಕಿ.ಮೀ, ಗುಡೇಕೋಟೆ ಜೀವವೈವಿಧ್ಯ ವಲಯದಿಂದ 10.29 ಕಿ.ಮೀ ದೂರದಲ್ಲಿದೆ
- ಶ್ರೀಗಂಧ, ತೇಗ, ಬಿದಿರು ಮೆಳೆ, ಆಲ, ದಿಂಡಾಲ, ಹೊನ್ನೆ, ರಕ್ತಭೂತಾಳ, ಅಂಟುವಾಳ, ಬಿಲ್ವ, ಕಲ್ಲುಮಾವು, ಅರಳಿ, ಕಾಡುಬನ್ನಿ ಸೇರಿದಂತೆ ವಿವಿಧ ರೀತಿಯ ಸಾವಿರಾರು ಮರಗಳಿಗೆ ಕುತ್ತು ಬರಲಿದೆ
- ಚಿರತೆ, ಕರಡಿ, ನರಿ, ನಾಲ್ಕು ಕೊಂಬುಗಳ ಹುಲ್ಲೆ, ಮೊಲ, ಕಾಡುಹಂದಿ, ಮುಳ್ಳುಹಂದಿ, ಉಡ, ನಕ್ಷತ್ರ ಆಮೆ, ಪ್ಯಾಂಗೊಲಿನ್ (ಇರುವೆ ಭಕ್ಷಕ) ಸೇರಿದಂತೆ ಹಲವು ವನ್ಯಜೀವಿಗಳಿಗೆ ಅಪಾಯವಾಗಲಿದೆ

‘ಹ್ಯಾಂಡ್ಲರ್‌ಗಳ ಹತಾಶ ಪ್ರಯತ್ನ’

ಜಮ್ಮು (ಪಿಟಿಐ): ‘ಇತ್ತೀಚಿಗಿನ ಭಯೋತ್ಪಾದಕ ಕೃತ್ಯಗಳು ಪಾಕಿಸ್ತಾನದ ಹ್ಯಾಂಡ್ಲರ್‌ಗಳು ನಡೆಸುತ್ತಿರುವ ಹತಾಶೆಯ ಪ್ರಯತ್ನಗಳಾಗಿವೆ. ಕಾಶ್ಮೀರದಲ್ಲಿ ಉಗ್ರರ ನೆಲೆ ಮತ್ತು ಅವರ ಚಟುವಟಿಕೆಗಳಿಗೆ ಭಾರಿ ಹಿನ್ನಡೆಯಾಗಿದೆ’ ಎಂದು ಡಿಜಿಪಿ ಆರ್.ಆರ್. ಸ್ವೈನ್ ಶನಿವಾರ ಹೇಳಿದ್ದಾರೆ.

ಮಂಗಳವಾರ ಮತ್ತು ಬುಧವಾರ 15 ಗಂಟೆಗಳ ಕಾಲ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಶಂಕಿತ ಪಾಕಿಸ್ತಾನಿ ಭಯೋತ್ಪಾದಕರು ಮತ್ತು ಸಿಆರ್‌ಪಿಎಫ್ ಯೋಧ ಹತರಾದ ಕಠುವಾ ಜಿಲ್ಲೆಯ ಹಿರಾನಗರ ಸೆಕ್ಟರ್‌ನ ಸೈದಾ ಸುಖಲ್ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಹೇಳಿಕೆ

ಯುದ್ಧ: ತಂತ್ರಜ್ಞಾನ ಅಳವಡಿಕೆ ಅಗತ್ಯ

ಹೈದರಾಬಾದ್ (ಪಿಟಿಐ): ತಂತ್ರಜ್ಞಾನದ ಸಮರ್ಪಕ ಬಳಕೆ ಮತ್ತು ಪರಿಣಾಮಕಾರಿ ಅಳವಡಿಕೆಯು ಆಧುನಿಕ ಕಾಲದ ಯುದ್ಧದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಭಾರತೀಯ ವಾಯುಪಡೆಯ ಮುಖ್ಯಸ್ಥ ವಿ.ಆರ್. ಚೌಧರಿ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ದುಂಡಿಗಲ್‌ನಲ್ಲಿರುವ ವಾಯುಪಡೆ ಅಕಾಡೆಮಿಯಲ್ಲಿ ಶನಿವಾರ ನಡೆದ ‘ಕಂಬೈನ್ಡ್ ಗ್ರಾಜುಯೇಶನ್ ಪರೇಡ್’ (ಸಿಜಿಪಿ) ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಧುನಿಕ ಯುದ್ಧದ ತಂತ್ರಗಾರಿಕೆಯು ನಿರಂತರವಾಗಿ ವಿಕಸನಗೊಳ್ಳುತ್ತಲೇ ಇದೆ. ಇನ್ನು ಮುಂದೆ ಯುದ್ಧಗಳು ಸಂಕೀರ್ಣ ಡೇಟಾ ನೆಟ್‌ವರ್ಕ್‌ಗಳು ಮತ್ತು ಸೈಬರ್ ತಂತ್ರಜ್ಞಾನಗಳಿಂದ ಪ್ರಭಾವಿತವಾಗಿರುತ್ತವೆ ಎಂದರು.

ವೃತ್ತಿಪರತೆ, ಆಕ್ರಮಣಶೀಲತೆ ಮತ್ತು ಸಾಮರ್ಥ್ಯವು ನಾಯಕನಲ್ಲಿರಬೇಕಾದ ಮುಖ್ಯ ಗುಣಗಳಾಗಿವೆ. ಚಿಂತಕರಾಗಿರುವ ನಾಯಕರ ಅಗತ್ಯವೂ ಇದೆ ಎಂದರು.

‘ನಿಮ್ಮ ಜೀವನದಲ್ಲಿ ಈ ಅಸಾಮಾನ್ಯ ಪ್ರಯಾಣವನ್ನು ಪ್ರಾರಂಭಿಸುತ್ತಿರುವಾಗ, ಭಾರತೀಯ ವಾಯುಪಡೆಯ ಪ್ರಮುಖ ಮೌಲ್ಯಗಳಾದ ಗುರಿ ಈಡೇರಿಸುವ ಛಲ, ಸಮಗ್ರತೆ ಮತ್ತು ಉತ್ಕೃಷ್ಟತೆ – ನಿಮಗೆ ದಾರಿದೀಪವಾಗಲಿ’ ಎಂದು ಅವರು ಹೊಸದಾಗಿ ನೇಮಕಗೊಂಡ ಅಧಿಕಾರಿಗಳಿಗೆ ಸಲಹೆ ನೀಡಿದರು.


ದುಂಡಿಗಲ್‌ನಲ್ಲಿರುವ ವಾಯುಪಡೆ ಅಕಾಡೆಮಿಯಲ್ಲಿ ಶನಿವಾರ ನಡೆದ ‘ಕಂಬೈನ್ಡ್ ಗ್ರಾಜುಯೇಶನ್ ಪರೇಡ್’ನಲ್ಲಿ ಕೆಡೆಟ್‌ಗಳ ಸಂಭ್ರಮ —ಪಿಟಿಐ ಚಿತ್ರ

ಗೋಡೆ ಮೇಲೆ ಮಹಿಳೆ ಫೋನ್ ನಂಬರ್: ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಮಹಿಳೆಯರ ಘನತೆ ಹಾಗೂ ವ್ಯಕ್ತಿತ್ವಕ್ಕೆ ಭಂಗ ಉಂಟು ಮಾಡುವ ಪ್ರಕರಣಗಳನ್ನು ವಿಚಾರಣಾ ನ್ಯಾಯಾಲಯಗಳು ಗಂಭೀರವಾಗಿ ಪರಿಗಣಿಸುವ ಮೂಲಕ ಕಠಿಣ ಕಾನೂನು ಕ್ರಮಕ್ಕೆ ಮುಂದಾಗಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

‘ಸರ್ಕಾರಿ ನೌಕರಿ ಮಾಡುವ ಮಹಿಳೆಯೊಬ್ಬರ ಫೋನ್ ನಂಬರ್ ಅನ್ನು ನಗರದ ಮೆಜೆಸ್ಟಿಕ್ ಶೌಚಾಲಯದ ಗೋಡೆಯ ಮೇಲೆ ಬರೆದು ಅದರ ಕೆಳಗೆ, ಈಕೆ ಕಾಲ್ ಗರ್ಲ್’ ಎಂದು ಹೆಸರಿಸಿದ್ದ ಆರೋಪದಡಿಯ ಪ್ರಕರಣ ರದ್ದುಪಡಿಸುವಂತೆ ಆರೋಪಿ ಕೋರಿದ್ದ ಪ್ರಕರಣದಲ್ಲಿ ಈ ಕುರಿತಂತೆ ಆದೇಶಿಸಲಾಗಿದೆ.

‘ನನ್ನ ವಿರುದ್ಧ ನಗರದ 5ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಚಿತ್ರದುರ್ಗದ ಅಲ್ಲಾ ಬಕ್ಷ ಅಲಿಯಾಸ್ ಎ.ಬಿ.ಪಟೇಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಲೈಂಗಿಕ ಹಿಂಸೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರ ಖಾಸಗಿ ಹಕ್ಕಿನ ರಕ್ಷಣೆ ಇಂದಿನ ಅತ್ಯಂತ ಜರೂರಾಗಿದೆ’ ಎಂದು ಹೇಳಿದೆ.

‘ಮಹಿಳೆಯರ ವಿರುದ್ಧ ಬಳಸಲಾಗುವ ಅಶ್ಲೀಲ ಪದಗಳು ಹಾಗೂ ಮಾನಹಾನಿ ಮಾಡುವ ಕೃತ್ಯಗಳು ಸಂತ್ರಸ್ತರಿಗೆ ಆತ್ಮಾಘಾತ ಉಂಟು ಮಾಡುತ್ತವೆ. ಅವರ ವೈಯಕ್ತಿಕ ಬದುಕನ್ನು ಛಿದ್ರಗೊಳಿಸಿ ಭರಿಸಲಾಗದ ಮಾನಸಿಕ ಜರ್ಜರತೆಗೆ ಕಾರಣವಾಗುತ್ತವೆ. ಹೀಗಾಗಿ, ಇಂತಹ ಅಪರಾಧಗಳ ದುಷ್ಟರನ್ನು ಹೆಡೆಮುರಿ ಕಟ್ಟುವ ಅಗತ್ಯವಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಇವತ್ತಿನ ಡಿಜಿಟಲ್ ಯುಗದಲ್ಲಿ ಯಾರೂ ಮತ್ತೊಬ್ಬರಿಗೆ ನೇರವಾಗಿ ದೈಹಿಕ ಗಾಸಿ ಉಂಟು ಮಾಡುವ ಅಗತ್ಯವಿಲ್ಲ. ಬದಲಿಗೆ ಅಶ್ಲೀಲ ಸಾಹಿತ್ಯ, ಕಾಮಾತುರ ಬಯಕೆಗಳ ವಿಕೃತ ಅಭಿವ್ಯಕ್ತಿ, ದೃಶ್ಯಗಳು ಅಥವಾ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟರೆ ಸಾಕು. ಅದರಲ್ಲೂ ಇಂತಹವುಗಳು ಮಹಿಳೆಯರನ್ನು ಗುರಿಯಾಗಿಸಿಕೊಂಡಾಗ ಇನ್ನಿಲ್ಲದ ಹಾನಿ ಉಂಟು ಮಾಡುತ್ತವೆ. ಇಂತಹ ದುಷ್ಕೃತ್ಯ ಎಸಗುವ ಪಾತಕಿಗಳಿಗೆ ಕಡಿವಾಣ ಹಾಕಬೇಕಾದ ತುರ್ತು ಎಂದಿಗಿಂತಲೂ ಇಂದು ಹೆಚ್ಚಿದೆ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ರಾಜ್ಯದ ಗ್ರಾಮೀಣ ಭಾಗವೊಂದರಲ್ಲಿ ದ್ವಿತೀಯ ದರ್ಜೆಯ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯೊಬ್ಬರು ಅಲ್ಲಾ ಬಕ್ಷ ವಿರುದ್ಧ ದೂರು ನೀಡಿದ್ದರು.

ದೂರಿನಲ್ಲಿ ಏನಿತ್ತು?: ‘ಇಲಾಖೆಯಿಂದ ನೀಡಲಾದ ಸಿಮ್ ಕಾರ್ಡ್ ಉಪಯೋಗಿಸುವ ನನ್ನ ಮೊಬೈಲ್ ನಂಬರ್‌ಗೆ ಅಪರಿಚಿತರಿಂದ ದೂರವಾಣಿ ಕರೆಗಳು ಬರುತ್ತಿವೆ. ಫೋನ್ ಮಾಡಿದವರು ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನೀನು ನನಗೆ ಗೊತ್ತು. ನೀನು ಬರದಿದ್ದರೆ ಸಿಕ್ಕಾಗ ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಈ ರೀತಿಯ ಕಾಲ್ ಮಾಡುತ್ತಿರುವವರು ಯಾರು ಎಂದು ಫೋನ್ ಮಾಡಿದವರಿಗೆ ವಿಚಾರಿಸಿದಾಗ ಮೆಜೆಸ್ಟಿಕ್ ಬಸ್ ನಿಲ್ದಾಣದ ಟರ್ಮಿನಲ್-1ರ ಬಳಿಯ ಶೌಚಾಲಯದಲ್ಲಿ ನನ್ನ ಫೋನ್ ನಂಬರ್ ಹಾಗೂ ಅದರ ಪಕ್ಕದಲ್ಲಿ ಕಾಲ್ ಗರ್ಲ್ ಎಂದು ಬರೆದಿರುವುದು ಗೊತ್ತಾಗಿರುತ್ತದೆ. ಆದ್ದರಿಂದ, ಈ ಕುರಿತು ಸೂಕ್ತ ಕ್ರಮ ಕೈಗೊಂಡು ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು’ ಎಂದು 32 ವರ್ಷದ ಮಹಿಳೆ ದೂರಿನಲ್ಲಿ ವಿವರಿಸಿದ್ದರು.

ಈ ದೂರನ್ನು ಆಧರಿಸಿ ಉಪ್ಪಾರಪೇಟೆ ಠಾಣೆಯ ಪೊಲೀಸರು ಭಾರತೀಯ ದಂಡ ಸಂಹಿತೆ-1860ರ ಕಲಂ 501 (ಮಾನಹಾನಿಕವೆಂದು ತಿಳಿದಿರುವ ವಿಷಯವನ್ನು ಮುದ್ರಿಸುವ ಅಥವಾ ಕೆತ್ತನೆಯ ಮೂಲಕ ಪ್ರಕಟಪಡಿಸುವುದು), 504 (ಶಾಂತಿಭಂಗ-ಉದ್ದೇಶ ಪೂರ್ವಕ ಅಪಮಾನ) ಹಾಗೂ 506 (ಅಪರಾಧಿಕ ಭಯೋತ್ಪಾದನೆ) ಅಡಿಯಲ್ಲಿ 2020ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಮೋದಿ ಪಾದ ಮುಟ್ಟಿದ ವಿಷಯ ಉಲ್ಲೇಖ

‘ಬಿಹಾರಕ್ಕೆ ಮುಜುಗರ ತಂದಿತ್ತ ನಿತೀಶ್’

ಭಾಗಲ್ಪುರ (ಪಿಟಿಐ): ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಪಾದ ಮುಟ್ಟಿ ನಮಸ್ಕರಿಸುವ ಮೂಲಕ ಬಿಹಾರಕ್ಕೆ ಮುಜುಗರ ಉಂಟುಮಾಡಿದ್ದಾರೆ ಎಂದು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಟೀಕಿಸಿದ್ದಾರೆ.

ತಮ್ಮ ‘ಜನ್ ಸುರಾಜ್’ ಅಭಿಯಾನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಹಿಂದೆ ನಿತೀಶ್ ಕುಮಾರ್ ಜೊತೆ ಕೆಲಸ ಮಾಡಿದ್ದ ನಾನು ಈಗ ಏಕೆ ಅವರನ್ನು ಟೀಕಿಸುತ್ತಿದ್ದೇನೆ ಎಂದು ಜನರು ಕೇಳುತ್ತಾರೆ. ಆಗ ಅವರ ವ್ಯಕ್ತಿತ್ವ ಬೇರೆಯದೇ ಆಗಿತ್ತು. ಅವರು ಆತ್ಮಸಾಕ್ಷಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ’ ಎಂದು ಹೇಳಿದರು. ಕಿಶೋರ್ ಅವರು 2015ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ನಿತೀಶ್ ಅವರ ಜೆಡಿಯು ಪರ ಕೆಲಸ ಮಾಡಿದ್ದರು.

‘ಒಂದು ರಾಜ್ಯದ ಮುಖ್ಯಮಂತ್ರಿ ಅಲ್ಲಿನ ಜನರ ಹೆಮ್ಮೆ ಎನಿಸಿಕೊಳ್ಳುವರು. ಆದರೆ, ನಿತೀಶ್ ಅವರು ಮೋದಿ ಅವರ ಪಾದಗಳನ್ನು ಮುಟ್ಟಿ, ಬಿಹಾರಕ್ಕೆ ಅವಮಾನ ತಂದರು’ ಎಂದು ಕಳೆದ ವಾರ ನವದೆಹಲಿಯಲ್ಲಿ ನಡೆದ ಎನ್‌ಡಿಎ ಸಭೆಯನ್ನು ಉಲ್ಲೇಖಿಸಿ ಅವರು ಟೀಕಿಸಿದರು.

‘ಮೋದಿ ಅಧಿಕಾರಕ್ಕೆ ಮರಳಲು ನಿತೀಶ್ ಕುಮಾರ್ ವಹಿಸಿದ ಪಾತ್ರದ ಬಗ್ಗೆ ಹೆಚ್ಚಿನ ಮಾತುಗಳು ಕೇಳಿಬರುತ್ತಿವೆ. ಆದರೆ ಬಿಹಾರದ ಮುಖ್ಯಮಂತ್ರಿ, ಕೇಂದ್ರ ಸರ್ಕಾರದಲ್ಲಿ ತಾವು ಹೊಂದಿರುವ ಪ್ರಭಾವವನ್ನು ಯಾವ ರೀತಿ ಬಳಸಿಕೊಳ್ಳುತ್ತಿದ್ದಾರೆ? ರಾಜ್ಯಕ್ಕೆ ಅನುಕೂಲ ಮಾಡಿಕೊಡಲು ಅವರು ತಮ್ಮ ಪ್ರಭಾವವನ್ನು ಬಳಸುತ್ತಿಲ್ಲ. 2025ರ ವಿಧಾನಸಭಾ ಚುನಾವಣೆಯ ಬಳಿಕವೂ ಬಿಜೆಪಿ ಬೆಂಬಲದೊಂದಿಗೆ ಅಧಿಕಾರದಲ್ಲಿ ಉಳಿಯುವುದನ್ನು ಖಚಿತಪಡಿಸಿಕೊಳ್ಳಲು ಅವರು ಪಾದಗಳನ್ನು ಮುಟ್ಟುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.


ನವದೆಹಲಿಯಲ್ಲಿ ಜೂನ್ 7ರಂದು ನಡೆದಿದ್ದ ಎನ್‌ಡಿಎ ಸಭೆಯಲ್ಲಿ ನಿತೀಶ್ ಕುಮಾರ್, ಪ್ರಧಾನಿ ಮೋದಿ ಪಾದ ಮುಟ್ಟಲು ಮುಂದಾಗಿದ್ದ ಕ್ಷಣ —ಪಿಟಿಐ ಚಿತ್ರ

‘ಬಾಲಕನಿಗೆ ನೀಡಿದ ಜಾಮೀನು ಪ್ರಕ್ರಿಯೆಯಲ್ಲಿ ಲೋಪಗಳು’

ಪುಣೆ (ಪಿಟಿಐ): ‘ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನಿಗೆ ಬಾಲನ್ಯಾಯ ಮಂಡಳಿಯು (ಜೆಜೆಬಿ) ಜಾಮೀನು ಮಂಜೂರು ಮಾಡಿದ ಪ್ರಕ್ರಿಯೆಯಲ್ಲಿ ಹಲವು ಲೋಪಗಳಿವೆ ಎಂದು ತನಿಖೆಗೆ ರಚಿಸಲಾಗಿದ್ದ ಸಮಿತಿಯು ಪತ್ತೆ ಮಾಡಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ರಸ್ತೆ ಸುರಕ್ಷತೆಗೆ ಸಂಬಂಧಿಸಿ 300 ಪದಗಳ ಪ್ರಬಂಧ ಬರೆಯಲು ಸೇರಿದಂತೆ ಇನ್ನಿತರ ಕಠಿಣವಲ್ಲದ ನಿಯಮಗಳೊಂದಿಗೆ ಕಾನೂನು ಸಂಘರ್ಷಕ್ಕೆ ಸಿಲುಕಿದ ಬಾಲಕನಿಗೆ ಜೆಜೆಬಿಯು ಜಾಮೀನು ಮಂಜೂರು ಮಾಡಿತ್ತು. ಈ ಕ್ರಮವು ರಾಷ್ಟ್ರಮಟ್ಟದಲ್ಲಿ ಟೀಕೆಗೆ ಗುರಿಯಾಗಿತ್ತು. ಈ ಕುರಿತು ತನಿಖೆಗೆ ರಚಿಸಲಾಗಿದ್ದ ಐವರು ಸದಸ್ಯರ ಸಮಿತಿಯು ತನ್ನ ವರದಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಯುಕ್ತರಿಗೆ ಶುಕ್ರವಾರ ಸಲ್ಲಿಸಿದೆ.

ಈ ವರದಿಯಲ್ಲಿ ‘ಏಕ ಸದಸ್ಯರಿದ್ದ ಜೆಜೆಬಿಯು ಅಪಘಾತ ಸಂಭವಿಸಿದ ದಿನವಾದ ಮೇ 19ರಂದೇ ಬಾಲಕನಿಗೆ ಜಾಮೀನು ನೀಡಿತ್ತು. ಜಾಮೀನಿನ ಆದೇಶಕ್ಕೆ ಮಾರನೇ ದಿನ ಮತ್ತೊಬ್ಬ ಸದಸ್ಯರು ಸಮ್ಮತಿ ಸೂಚಿಸಿದ್ದಾರೆ. ಇದು ತಪ್ಪು. ಈ ಮೂಲಕ ಜೆಜೆಬಿಯ ಸದಸ್ಯರು ನಿಯಮಗಳನ್ನು ಪಾಲಿಸದೆ ಇರುವುದು ಕಂಡುಬಂದಿದೆ’ ಎಂದು ತಿಳಿಸಲಾಗಿದೆ.

ಈ ವರದಿ ಆಧರಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಜೆಜೆಬಿಯ ಇಬ್ಬರು ಸದಸ್ಯರಿಗೆ ನೋಟಿಸ್ ನೀಡಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.



ಮಣಿಪುರ ಸಿ.ಎಂ ನಿವಾಸದ ಬಳಿ ಬೆಂಕಿ ಅನಾಹುತ

ಇಂಫಾಲ್ (ಪಿಟಿಐ): ಮಣಿಪುರದ ಮುಖ್ಯಮಂತ್ರಿ ಎನ್. ಬೀರೇನ್ ಸಿಂಗ್ ಅವರ ಅಧಿಕೃತ ನಿವಾಸದ ಸಮೀಪದ ಕಟ್ಟಡವೊಂದರಲ್ಲಿ ಶನಿವಾರ ಸಂಜೆ ಭಾರಿ ಬೆಂಕಿ ಅನಾಹುತ ಸಂಭವಿಸಿದೆ.

ಅದೃಷ್ಟವಶಾತ್ ಪ್ರಾಣಹಾನಿ ಸಂಭವಿಸಿಲ್ಲ. ಮುಖ್ಯಮಂತ್ರಿ ಅವರ ನಿವಾಸಕ್ಕೆ ಯಾವುದೇ ಹಾನಿ ಉಂಟಾಗಿಲ್ಲ. ಅಗ್ನಿಶಾಮದ ದಳದ ಮೂರು ವಾಹನಗಳನ್ನು ಬಳಸಿ ಸುಮಾರು ಒಂದು ಗಂಟೆಯ ಪ್ರಯತ್ನದ ಬಳಿಕ ಬೆಂಕಿಯನ್ನು ನಂದಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿ ಬಿದ್ದ ಕಟ್ಟಡವು ಐಎಎಸ್ ಅಧಿಕಾರಿ ದಿವಂಗತ ಟಿ.ಕಿಪ್ಗೆನ್ ಅವರ ಕುಟುಂಬಕ್ಕೆ ಸೇರಿದ್ದಾಗಿದೆ. ಕಳೆದ ವರ್ಷ ಮಣಿಪುರದಲ್ಲಿ ಹಿಂಸಾಚಾರ ಆರಂಭವಾದ ಬಳಿಕ ಈ ಕಟ್ಟಡದಲ್ಲಿ ಯಾರೂ ವಾಸವಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 16-6-1999

• ಕಾರ್ಗಿಲ್‌ನಿಂದ ಸೇನಾಪಡೆ ವಾಪಾಸ್ ಪಾಕಿಸ್ತಾನಕ್ಕೆ ಅಮೆರಿಕ ಸೂಚನೆ

ವಾಷಿಂಗ್ಟನ್, ಜೂನ್ 15(ಎಎಫ್‌ಪಿ)– ಇಂದಿನ ಭಾರೀ ಬೆಳವಣಿಗೆಯಲ್ಲಿ ಕಾಶ್ಮೀರದಲ್ಲಿ ಭಾರತದ ನೆಲವಾದ ಕಾರ್ಗಿಲ್‌ನಿಂದ ಸೇನಾಪಡೆಗಳನ್ನು ತತ್‌ಕ್ಷಣವೇ ವಾಪಾಸು ಕರೆಸಿಕೊಳ್ಳುವಂತೆ ಅಮೆರಿಕದ ಅಧ್ಯಕ್ಷ ಬಿಲ್‌ಕ್ಲಿಂಟನ್ ಅವರು ಪಾಕಿಸ್ತಾನದ ಪ್ರಧಾನ ಮಂತ್ರಿ ನವಾಜ್ ಷರೀಫ್ ಅವರಿಗೆ ಸೂಚಿಸಿದ್ದಾರೆ. ಷರೀಫ್ ಅವರ ಜತೆ ಇಂದು ನಡೆಸಿದ 20 ನಿಮಿಷಗಳ ಟೆಲಿಫೋನ್ ಮಾತುಕತೆಯಲ್ಲಿ ಕ್ಲಿಂಟನ್ ಈ ಒತ್ತಾಯ ಮಾಡಿದರು ಎಂದು ಶ್ವೇತಭವನದ ವಕ್ತಾರ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 16-6-1999

• ಅಣುಸ್ಫೋಟ ನಿಷೇಧಕ್ಕೆ ಭಾರತವೂ ಸಿದ್ಧ: ಇಂದಿರಾ ಸ್ಪಷ್ಟನೆ

ನವದೆಹಲಿ, ಜೂ.15 – ಎಲ್ಲ ರಾಷ್ಟ್ರಗಳು ಒಪ್ಪಿದ್ದಲ್ಲಿ ಎಲ್ಲ ಅಣ್ವಸ್ತ್ರ ಪರೀಕ್ಷಾ ಪ್ರಯೋಗಗಳನ್ನು ನಿಷೇಧಿಸುವುದಕ್ಕೆ ಭಾರತವೂ ಇಚ್ಛಿಸುತ್ತದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಈ ಬಗ್ಗೆ ಎಲ್ಲ ರಾಷ್ಟ್ರಗಳಿಗೂ ಸರಿಸಮಾನಾಗಿ ಅನ್ವಯವಾಗುವಂಥ ಒಪ್ಪಂದವೊಂದನ್ನು ತಾವು ಸ್ವಾಗತಿಸುವುದಾಗಿ ಅವರು ನುಡಿದರು.

ದಕ್ಷಿಣ ಏಷ್ಯಾದ ವಿದೇಶಿ ಬಾತ್ಮಿದಾರರ ಸಂಘ ಏರ್ಪಡಿಸಿದ್ದ ಭೋಜನಕೂಟದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಟ್ಟರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜೂನ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದಶಮಿ ಗಂ. 28-44 ನಕ್ಷತ್ರ: ಹಸ್ತ ಗಂ. 11-13 ಯೋಗ: ವರಿಯಾನ್ ಗಂ. 21-02 ಕರಣ: ತೈತಿಲ ಗಂ. 15-42, ಮಿಥುನ ಮಾಸದ ನೇ 02 ದಿನ, ಮಳೆನಕ್ಷತ್ರ: ಮೃಗಶಿರ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-07 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 09 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 7, 1

ಮೇಷ: ನಿಮ್ಮ ಆತ್ಮ ವಿಶ್ವಾಸವನ್ನು ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಗಮನಹರಿಸಿ. ನಿಮ್ಮ ತೀವ್ರ ಪ್ರತಿಸ್ಪರ್ಧಿಯನ್ನು ಭೇಟಿ ಮಾಡುವ ಅವಕಾಶ ಬರಲಿದೆ. ವ್ಯಾಪಾರದಲ್ಲಿ ಮೋಸ ಹೋಗದೆ ಬುದ್ಧಿವಂತಿಕೆ ತೋರಿ.

ವೃಷಭ: ಅಡುಗೆ ಕೆಲಸ ಮಾಡುವವರಿಗೆ ಈ ದಿನ ಹೆಚ್ಚಿನ ಕೆಲಸ, ಬೇಡಿಕೆ ಹಾಗೂ ಲಾಭವಿರುವುದು. ಕುಟುಂಬದ ಸದಸ್ಯರ ಮಾತುಗಳನ್ನು ತಾಳ್ಮೆಯಿಂದ ಕೇಳಿರಿ. ಮಂದಿರದ ಭೇಟಿ ಹಾಗೂ ದೇವರ ದರ್ಶನವನ್ನು ಮಾಡುವಿರಿ.

ಮಿಥುನ: ವಿವಾಹ ವಯಸ್ಕ ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ ಕಂಡು ಬರುವುದು. ನಿಮ್ಮ ಮನೋಭಿಲಾಷೆಯನ್ನು ಸಿದ್ಧಿಸಿಕೊಳ್ಳಲಿಕ್ಕಾಗಿ ಇತರರಿಗೆ ಮಾರಕವಾಗುವ ಮಾರ್ಗವನ್ನು ಆರಿಸಿಕೊಳ್ಳಬೇಡಿ.

ಕರ್ಕಾಟಕ: ಸ್ಟೇಷನರಿ ಹೋಲ್‌ಸೇಲ್ ವ್ಯಾಪಾರಿಗಳು ವ್ಯಾಪಾರ ವಿಸ್ತರಿಸುವ ಬಗ್ಗೆ ಮಾತುಕತೆ ನಡೆಸಿ. ನೀವು ಅಪೇಕ್ಷೆಪಟ್ಟಿದ್ದ ಹೊಸ ಉದ್ಯೋಗವನ್ನು ಸಂಪಾದಿಸುವಲ್ಲಿ ರಾಜಕೀಯ ವ್ಯಕ್ತಿಗಳ ಮೂಲಕ ಯಶಸ್ಸು ಗಳಿಸುವಿರಿ.

ಸಿಂಹ: ನಿಮ್ಮ ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ. ಕುಟುಂಬ ನಿರ್ವಹಣೆಗೆ ಒಡಹುಟ್ಟಿದವರಿಂದ ಕೊಡುಗೆ ಅಪಾರವಾಗಿರಲಿದೆ. ಆರೋಗ್ಯದ ಮೇಲೆ ವಿಶೇಷ ಗಮನವಿಡಿ.

ಕನ್ಯಾ: ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಚಂಚಲ ಮನಸ್ಸು ಅಡ್ಡಿಮಾಡುವುದು. ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಹವ್ಯಾಸಗಳಲ್ಲಿ ತೊಡಗುವುದಕ್ಕೆ ಸಮಯ ಸಿಗುವುದು.

ತುಲಾ: ಮೇಲಾಧಿಕಾರಿಗಳು ಹಾಗೂ ಹಿರಿಯರು ಕೆಲಸಗಳಲ್ಲಿ ನಿಮಗೆ ಸಹಕಾರ ನೀಡುತ್ತಾರೆ. ಮೇಲಧಿಕಾರಿಗಳು ನಿರ್ಧಾರಗಳನ್ನು ಕೈಗೊಳ್ಳಲು ನಿಮ್ಮ ಇಚ್ಛೆಗೆ ಬಿಡುವರು. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.

ವೃಶ್ಚಿಕ: ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ಮಹಾ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು.

ಧನು: ಬಾಲ್ಯದಲ್ಲಿ ಕಲಿತ ಅಥವಾ ತಿಳಿದುಕೊಂಡಿದ್ದ ಕೆಲ ಇತರೆ ವಿಷಯಗಳು ವೃತ್ತಿಪರವಾಗಿ ಇಂದು ನಿಮಗೆ ಉಪಯೋಗಕ್ಕೆ ಬರಲಿದೆ. ಬಂಧುಗಳು ಮತ್ತು ಸ್ನೇಹಿತರಿಂದ ಮಾರ್ಗದರ್ಶನಕ್ಕೇನು ಕೊರತೆ ಇರದು.

ಮಕರ: ದಾಂಪತ್ಯದಲ್ಲಿ ಅನ್ಯೋನ್ಯತೆ ಕಾಪಾಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿರುತ್ತದೆ. ವ್ಯವಹಾರದಲ್ಲಿ ತಪ್ಪುಗಳಾಗದಂತೆ ಜಾಗರೂಕತೆ ವಹಿಸಿರಿ. ತಂದೆ– ತಾಯಿಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ಬದಲಾವಣೆಯಾಗಲಿದೆ.

ಕುಂಭ: ರುಚಿ ಭೋಜನದ ಹೆಸರಿನಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆಹಾರವನ್ನು ಸೇವಿಸದಿರಿ. ಇಂದು ಮಕ್ಕಳಿಂದ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ. ಮಕ್ಕಳ ಆರೋಗ್ಯದ ಕಡೆ ಗಮನ ಹರಿಸಿ.


ಮೀನ: ನೀವು ಗಳಿಸಿದ ಸಂಪಾದನೆಯಲ್ಲಿ ತೃಪ್ತಿ ಹೊಂದುವುದು ಅತ್ಯಂತ ಮುಖ್ಯವಾದ ವಿಚಾರವಾಗಿರುತ್ತದೆ. ಕರಕುಶಲ ವಸ್ತುಗಳ ತಯಾರಕರು ತಮ್ಮ ಉತ್ತಮವಾದ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು.

ಪದಬಂಧ 5713

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಚರವಲ್ಲದೆ ಸ್ಥಿರವಾದುದು (3)
4.ಗಹನ ವಿಚಾರದತ್ತ ಹರಿಸಿದ ಲಕ್ಷ್ಯ (3)
5.ರಾಳವನ್ನಿಟ್ಟಾಗ ನಡುವಿನ ಜಾಗ ಕಂಡೀತು (4)
6.ಎಡದ ವಿರುದ್ಧ ಮಾಡಿರುವ ಒತ್ತಾಯ! (4)
7.ಧಾನ್ಯದ ಹೊಡೆ (2)
9.ಒಂಬತ್ತಾದರೂ ಇದು ಹೊಸದು! (2)
13.ಸೂಕ್ಷ್ಮವಾಗಿ ನೋಡುವವನು (4)
14.ಶ್ರೀಕೃಷ್ಣನ ಸಹೋದರ (4)
15.ದ್ರವ ಒಸರುತ್ತಿರುವ ಜಿಹ್ವೆ (3)
16.ಕಣದಲ್ಲಿ ಕಾಣಿಸುತ್ತಿರುವ ಜ್ಞಾನೇಂದ್ರಿಯ (3)

ಮೇಲಿಂದ ಕೆಳಕ್ಕೆ
1. ವ್ಯಾಯಾಮವನ್ನು ಹೀಗೆ ಹೇಳಿ (5)
2.ಬೇರೆಡೆ ಹೋಗದಂತೆ ತಡೆಯುವಿಕೆ (5)
3.ವೈರಾಗ್ಯವುಳ್ಳವ ರಾಗಿ ಹಿಡಿದಿದ್ದಾನಲ್ಲಾ? (3)
5.ಕಾಣದಂತೆ ಮಾಯವಾಗುವಿಕೆ (4)
8.ಸಂಪೂರ್ಣನಾಶವನ್ನು ಹೀಗೆನ್ನಿ (4)
10.ಮಾಟ ಮಂತ್ರದಿಂದ ವಶಪಡಿಸಿಕೊಳ್ಳುವಿಕೆ (5)
11.ಪ್ರಾಣವಾಯು ಇಲ್ಲಿದೆ (5)
12.ರಾಜನ ದರ್ಬಾರು (3)



5712ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತಂಡಸ 4.ಸಂದಣಿ
6.ಡಮರುಗ 8.ವಿಭಜನೆ
10.ರಜನಿ 13.ಸವತಿ
15.ಹಸುಗೂಸು 19.ಮದಗಜ
21.ವರ್ಣನೆ 22.ಲಿಲಾವು

ಮೇಲಿಂದ ಕೆಳಕ್ಕೆ:
1.ತಂಬಾಕು 2.ಸಡಗರ 3.ನಾರು
5.ದನುಜ 7.ಗವಿ 9.ನೆರಕೆ
11.ನಿಶ್ವಾಸ 12.ಆರೋಹ
14.ತಿಲಾಂಜಲಿ 16.ಸುಪರ್ಣ
17.ಸುಮ 18.ಚಡಾವು 20.ದಕ್ಷ

ಸುಡೊಕು 6098

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6097 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಕೇಜ್ರಿವಾಲ್ ವಿಚಾರಣೆಯ ವಿಡಿಯೊ ತೆಗೆಯಲು ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿಚಾರಣೆ ಸಂದರ್ಭದ ವಿಡಿಯೊ ಒಂದನ್ನು ತಕ್ಷಣವೇ ತೆಗೆದುಹಾಕಬೇಕು ಎಂದು ಸಾಮಾಜಿಕ ಜಾಲತಾಣ ವೇದಿಕೆಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಎಕ್ಸ್ ಮತ್ತು ಯೂಟ್ಯೂಬ್‌ಗೆ ದೆಹಲಿ ಹೈಕೋರ್ಟ್ ಶನಿವಾರ ಆದೇಶಿಸಿದೆ.

ಕೇಜ್ರಿವಾಲ್ ಅವರು ವಿಚಾರಣಾ ನ್ಯಾಯಾಲಯದಲ್ಲಿ ಮೌಖಿಕವಾಗಿ ವಾದ ಮಂಡಿಸಿದ್ದ ವಿಡಿಯೊ ಒಂದನ್ನು ಬೇರೆ ಬೇರೆ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ ಎನ್ನಲಾಗಿದೆ. ವೈಭವ್ ಸಿಂಗ್ ಎನ್ನುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ನೀನಾ ಬನ್ಸಲ್ ಕೃಷ್ಣ ಮತ್ತು ಅಮಿತ್ ಶರ್ಮ ಅವರು ಇದ್ದ ವಿಭಾಗೀಯ ಪೀಠವು, ಕೋರ್ಟ್ ಕಲಾಪವನ್ನು ಚಿತ್ರೀಕರಿಸಿಕೊಂಡಿದ್ದು ನಿಯಮಗಳ ಉಲ್ಲಂಘನೆ, ಆ ವಿಡಿಯೊವನ್ನು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುವಂತೆ ಉಳಿಸಿಕೊಳ್ಳಲಾಗದು ಎಂದು ಹೇಳಿತು.

ಕೇಜ್ರಿವಾಲ್ ಅವರನ್ನು ಬಂಧಿಸಿ ಮಾರ್ಚ್ 28ರಂದು ಕೋರ್ಟ್‌ಗೆ ಹಾಜರುಪಡಿಸಲಾಯಿತು. ಅವರು ನ್ಯಾಯಾಧೀಶರನ್ನು ಉದ್ದೇಶಿಸಿ ತಾವೇ ಮಾತನಾಡಿದರು. ಇದನ್ನು ವಿಡಿಯೊ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿದೆ ಎಂದು ಸಿಂಗ್ ಅವರು ಹೇಳಿದರು.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಕೋರ್ಟ್ ಕಲಾಪಗಳನ್ನು ಅನುಮತಿಯಿಲ್ಲದೆ ಚಿತ್ರೀಕರಿಸುವಂತಿಲ್ಲ. ಸುನೀತಾ ಕೇಜ್ರಿವಾಲ್ ಹಾಗೂ ಇತರರು ಈ ವಿಡಿಯೊವನ್ನು ಮರುಪೋಸ್ಟ್ ಮಾಡಿದ್ದಾರೆ ಎನ್ನಲಾಗಿದೆ ಎಂದು ತಿಳಿಸಿದರು.

ಕುವೈತ್: ಅಕ್ರಮ ಕಟ್ಟಡಗಳಿಗೆ ಅಂಕುಶ

ದುಬೈ/ಕುವೈತ್(ಪಿಟಿಐ): ಮಂಗಾಫ್‌ನ ಏಳು ಅಂತಸ್ತಿನ ಕಟ್ಟಡದಲ್ಲಿ ಸಂಭವಿಸಿದ ಭೀಕರ ಅಗ್ನಿ ದುರಂತದಲ್ಲಿ 46 ಭಾರತೀಯರು ಸೇರಿ 50 ಮಂದಿ ಮೃತಪಟ್ಟ ಹಿನ್ನೆಲೆಯಲ್ಲಿ ಕುವೈತ್‌ನಾದ್ಯಂತ ಅಕ್ರಮ ಕಟ್ಟಡಗಳಿಗೆ ಅಧಿಕಾರಿಗಳು ಕಡಿವಾಣ ಹಾಕಲು ಕಠಿಣ ಕ್ರಮ ಆರಂಭಿಸಿದ್ದಾರೆ ಎಂದು ಮಾಧ್ಯಮ ವರದಿಯೊಂದು ಶನಿವಾರ ತಿಳಿಸಿದೆ.

ಅಗ್ನಿ ಅವಘಢದ ಘಟನೆಯಿಂದ ಎಚ್ಚೆತ್ತುಕೊಂಡಿರುವ ಕುವೈತ್ ಮುನ್ಸಿಪಾಲಿಟಿಯು ಅಕ್ರಮ ಕಟ್ಟಡಗಳ ವಿರುದ್ಧ ಕಠಿಣ ಕ್ರಮವನ್ನು ಪ್ರಾರಂಭಿಸಿದೆ ಎಂದು ಅರಬ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ವೆಚ್ಚ ಕಡಿತಗೊಳಿಸಲು ಅಸುರಕ್ಷಿತ ಜಾಗಗಳಲ್ಲಿ ವಲಸೆ ಕಾರ್ಮಿಕರನ್ನು ಇರಿಸುತ್ತಿರುವುದು, ಕಟ್ಟಡಗಳನ್ನು ಅನಧಿಕೃತವಾಗಿ ಮಾರ್ಪಡಿಸುತ್ತಿರುವುದು ಕುವೈತ್‌ನಲ್ಲಿ ಹಲವು ವರ್ಷಗಳಿಂದ ಪ್ರಮುಖ ಸಮಸ್ಯೆಯಾಗಿ ಮಾರ್ಪಟ್ಟಿದೆ. ಮಂಗಾಫ್ ಅಗ್ನಿ ದುರಂತ ಘಟನೆಯು ಕಟ್ಟಡಗಳ ಅನಧಿಕೃತ ಮಾರ್ಪಾಡುಗಳ ದೀರ್ಘಕಾಲದ ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದ್ದು, ಭವಿಷ್ಯದಲ್ಲಿ ಇಂತಹ ಅನಾಹುತಗಳು ಸಂಭವಿಸದಂತೆ ತಡೆಯಲು ಅಧಿಕಾರಿಗಳು ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿಯನ್ನು ಸೃಷ್ಟಿಸಿದೆ.

ಗಾಯಾಳುಗಳ ಭೇಟಿ: ಗಾಯಗೊಂಡ 25 ಭಾರತೀಯರು ಚಿಕಿತ್ಸೆ ಪಡೆಯುತ್ತಿರುವ ಐದು ಆಸ್ಪತ್ರೆಗಳಿಗೆ ಭಾರತೀಯ ರಾಯಭಾರ ಕಚೇರಿ ಅಧಿಕಾರಿಗಳ ತಂಡ ಭೇಟಿ ನೀಡಿತು.



ವೇಲ್ಸ್‌ನ ರಾಜಕುಮಾರಿ ಕೇಟ್ ಅವರು ಲಂಡನ್ನಿನ ಬಕಿಂಗ್‌ಹ್ಯಾಮ್ ಅರಮನೆ ಬಳಿ ಶನಿವಾರ ಕಾಣಿಸಿಕೊಂಡಿದ್ದು ಹೀಗೆ —ಎಪಿ/ಪಿಟಿಐ ಚಿತ್ರ

ಜನರತ್ತ ಕೈಬೀಸಿದ ರಾಜಕುಮಾರಿ ಕೇಟ್

ಲಂಡನ್ (ರಾಯಿಟರ್ಸ್): ಬ್ರಿಟನ್ನಿನ ವೇಲ್ಸ್‌ನ ರಾಜಕುಮಾರಿ ಕೇಟ್ ಅವರು ಬಕಿಂಗ್‌ಹ್ಯಾಂ ಅರಮನೆಯ ಬಾಲ್ಕನಿಯಿಂದ ಮಿಲಿಟರಿ ಪರೇಡ್ ವೀಕ್ಷಿಸಿ, ನೆರೆದಿದ್ದ ಜನರತ್ತ ಶುಕ್ರವಾರ ಕೈಬೀಸಿದರು. ಅವರು ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದ ನಂತರದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು ಇದೇ ಮೊದಲು.

42 ವರ್ಷ ವಯಸ್ಸಿನ ಕೇಟ್ ಅವರು ಜನವರಿಯಲ್ಲಿ ಉದರದ ಶಸ್ತ್ರಚಿಕಿತ್ಸೆ ಒಳಗಾದ ನಂತರ ಎರಡು ವಾರ ಆಸ್ಪತ್ರೆಯಲ್ಲಿದ್ದರು. ಇದಾದ ಎರಡು ತಿಂಗಳ ನಂತರ ವಿಡಿಯೊ ಸಂದೇಶವನ್ನು ರವಾನಿಸಿದ ಅವರು ತಮಗೆ ಕ್ಯಾನ್ಸರ್ ಇರುವುದಾಗಿ, ಮುನ್ನೆಚ್ಚರಿಕೆಯ ಭಾಗವಾಗಿ ಕಿಮೊಥೆರಪಿಗೆ ಒಳಗಾಗಿರುವುದಾಗಿ ತಿಳಿಸಿದ್ದರು. ಈಗಲೂ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

ದಕ್ಷಿಣ ಆಫ್ರಿಕಾ ಅಧ್ಯಕ್ಷರಾಗಿ ಸಿರಿಲ್ ರಾಮಫೋಸಾ

ಜೊಹಾನಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿ ಸಿರಿಲ್ ರಾಮಫೋಸಾ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ.



ಸಿರಿಲ್ ರಾಮಫೋಸಾ

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎಎನ್‌ಸಿ) ಮತ್ತು 'ಡೆಮಾಕ್ರಟಿಕ್ ಅಲಯನ್ಸ್' (ಡಿಎ) ಪಕ್ಷ ತಮ್ಮ ನಡುವಿನ ಪೈಪೋಟಿಯನ್ನು ಬದಿಗೊತ್ತಿ ಸಮ್ಮಿಶ್ರ ಸರ್ಕಾರ ರಚಿಸುವ ಐತಿಹಾಸಿಕ ಒಪ್ಪಂದ ಮಾಡಿಕೊಂಡ ಬಳಿಕ, ಸಿರಿಲ್ ರಾಮಫೋಸಾ ಎರಡನೇ ಬಾರಿ ಮರು ಆಯ್ಕೆಯಾಗಿದ್ದಾರೆ.

ಕಳೆದ ತಿಂಗಳು ನಡೆದ ಚುನಾವಣೆಯಲ್ಲಿ ರಾಮಫೋಸಾ ಅವರ ಎಎನ್‌ಸಿ ಪಕ್ಷವು 30 ವರ್ಷಗಳಲ್ಲಿ ಮೊದಲ ಬಾರಿಗೆ ಸಂಸತ್ತಿನಲ್ಲಿ ತನ್ನ ಬಹುಮತವನ್ನು ಕಳೆದುಕೊಂಡಿತ್ತಾದರೂ, ಶೇ 40ರಷ್ಟು ಮತಗಳನ್ನು ಪಡೆದಿತ್ತು. ಡೆಮಾಕ್ರಟಿಕ್ ಅಲಯನ್ಸ್ (ಡಿ.ಎ) ಶೇ 22ರಷ್ಟು ಮತಗಳನ್ನು ಪಡೆದು ಎರಡನೇ ಸ್ಥಾನ ಪಡೆಯಿತು. ಹೊಸ ಸರ್ಕಾರವು ಎಎನ್‌ಸಿ, ಡಿ.ಎ ಹಾಗೂ ಸಣ್ಣ ಪಕ್ಷಗಳನ್ನು ಒಳಗೊಂಡಿದೆ.

ಹುಚ್ಚು ಅಭಿಮಾನದಿಂದ ಕೊಲೆ ಪ್ರಕರಣದಲ್ಲಿ ಸಿಲುಕಿಕೊಂಡರು: ಸ್ಥಳೀಯರ ಕೊರಗು

ದರ್ಶನ್ ಭೇಟಿಯ ಆಮಿಷ; ಹಣ ವಸೂಲಿ

● ಎಂ.ಎನ್.ಯೋಗೇಶ್


ನಟ ದರ್ಶನ್‌ಗೆ ಜೊತೆ ರಾಘವೇಂದ್ರ


ಏಳನೇ ಆರೋಪಿ ಅನುಕುಮಾರ್ ಮನೆಯ ಮುಂದೆ ಅವರ ತಂದೆಯ ಮೃತದೇಹ ಇಡಲಾಗಿತ್ತು

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣದ 4ನೇ ಆರೋಪಿ ರಾಘವೇಂದ್ರ, ನಟ ದರ್ಶನ್‌ರನ್ನು ಭೇಟಿ ಮಾಡಿಸುವುದಾಗಿ ನಂಬಿಸಿ ಸ್ಥಳೀಯ ಯುವಕರಿಂದ ಹಣ ಸಂಗ್ರಹ ಮಾಡುತ್ತಿದ್ದ. ಜೂನ್ 8ರಂದು ಕೂಡ ‘ಡಿ ಬಾಸ್’ ಭೇಟಿಯ ಆಮಿಷವೊಡ್ಡಿ ರೇಣುಕಸ್ವಾಮಿ ಅವರನ್ನು ಬೆಂಗಳೂರಿಗೆ ಕರೆದೊಯ್ದಿದ್ದ.

‘ದರ್ಶನ್ ತೂಗುದೀಪ ಸೇನಾ ಜಿಲ್ಲಾ ಘಟಕದ ಅಧ್ಯಕ್ಷನೂ ಆಗಿದ್ದ ರಾಘವೇಂದ್ರ, ದರ್ಶನ್ ಜೊತೆ ತೆಗೆಸಿಕೊಂಡಿದ್ದ ಫೋಟೊಗಳನ್ನು ತೋರಿಸಿ ಯುವಕರನ್ನು ಸೆಳೆಯುತ್ತಿದ್ದ. ದರ್ಶನ್ ಮೇಲಿನ ಹುಚ್ಚು ಅಭಿಮಾನದಿಂದಾಗಿಯೇ ರೇಣುಕಸ್ವಾಮಿ ಮೃತಪಟ್ಟಿದ್ದಾನೆ. ಇನ್ನಿತರರು ಕೊಲೆ ಆರೋಪ ಹೊತ್ತಿದ್ದಾರೆ’ ಎಂದು ಸ್ಥಳೀಯ ಯುವಕರು ನೋವು ವ್ಯಕ್ತಪಡಿಸುತ್ತಾರೆ.

‘ರಾಘವೇಂದ್ರನಿಗೆ ಒಂದಿಷ್ಟು ಹಣ ಕೊಡಬೇಕು. ಬಾಡಿಗೆ ಕಾರು, ಊಟ, ತಿಂಡಿ, ಮದ್ಯದ ವ್ಯವಸ್ಥೆ ಮಾಡಿದರೆ ಆತ ದರ್ಶನ್ ಭೇಟಿಗಾಗಿ ಬೆಂಗಳೂರಿಗೆ ಯುವಕರನ್ನು ಕರೆದೊಯ್ಯುತ್ತಿದ್ದ. ವಾರಗಟ್ಟಲೇ ಕಾಯಿಸಿ ದರ್ಶನ್ ಸಿಕ್ಕರೆ ಭೇಟಿ ಮಾಡಿಸುತ್ತಿದ್ದ. ಇಲ್ಲದಿದ್ದರೆ ಮುಂದಿನ ಬಾರಿ ಭೇಟಿ ಮಾಡಿಸುವುದಾಗಿ ಹೇಳಿ ವಾಪಸ್ ಕರೆದುಕೊಂಡು ಬರುತ್ತಿದ್ದ. ಹಲವು ಯುವಕರು ಅವನಿಂದ ಹಣ ಕಳೆದುಕೊಂಡಿದ್ದಾರೆ’ ಎಂದು ನಗರದ ಸಿಹಿನೀರು ಹೊಂಡ ಬಡಾವಣೆಯ ಯುವಕರು ದೂರಿದ್ದಾರೆ.

‘ದರ್ಶನ್ ತೂಗುದೀಪ ಸೇನಾ ವತಿಯಿಂದ ರಾಘವೇಂದ್ರ, ದರ್ಶನ್ ಅವರ ಜನ್ಮದಿನಾಚರಣೆ, ಗಣೇಶ ಹಬ್ಬ, ಸ್ಥಳೀಯ ಜಾತ್ರೆ ಸೇರಿದಂತೆ ಇತರೆ ಸಮಾರಂಭಗಳನ್ನು ಆಯೋಜಿಸುತ್ತಿದ್ದ. ಆಗ ಸ್ಥಳೀಯ ಜನಪ್ರತಿನಿಧಿಗಳು, ಆಟೊ ಚಾಲಕರು ಹಾಗೂ ಯುವಕರಿಂದ ಹಣ ಸಂಗ್ರಹ ಮಾಡುತ್ತಿದ್ದ’ ಎಂದು ಸ್ಥಳೀಯರು ಆರೋಪಿಸುತ್ತಾರೆ.

ಬಡ ಹುಡುಗರ ಜೀವನ ಹಾಳು: ‘ದರ್ಶನ್ ಮೇಲಿನ ಅತಿಯಾದ ಅಭಿಮಾನದಿಂದಾಗಿ ಬಡ ಕುಟುಂಬದ ಹುಡುಗರು ಕೊಲೆ ಪ್ರಕರಣವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಕುಟುಂಬ ಸದಸ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ. ಇದರಿಂದಾಗಿಯೇ ಅನುಕುಮಾರ್ ತಂದೆ ಚಂದ್ರಣ್ಣನ ಪ್ರಾಣವೂ ಹೋಗಿದೆ’ ಎಂಬ ನೋವು ಹಲವರಲ್ಲಿದೆ.

‘ಕೊಲೆ ಆರೋಪ ಹೊತ್ತಿರುವ ಅನುಕುಮಾರ್ ಆಟೊ ಚಾಲಕನಾಗಿದ್ದ. ಕಷ್ಟಪಟ್ಟು ದುಡಿಯುತ್ತಿದ್ದ. ಜೋಪಡಿಯಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಆತನ ದುಡಿಮೆಯೇ ಆಧಾರವಾಗಿತ್ತು. ದರ್ಶನ್ ಮೇಲೆ ಅತಿಯಾದ ಅಭಿಮಾನ ಹೊಂದಿದ್ದ ಆತ ಇಡೀ ಆಟೊದಲ್ಲಿ ದರ್ಶನ್ ಚಿತ್ರಗಳನ್ನೇ ಹಾಕಿಕೊಂಡಿದ್ದ. ಈ ಹುಚ್ಚು ಅಭಿಮಾನವೇ ಆತನಿಗೆ ಮುಳುವಾಯಿತು. ಈಗ ತಂದೆಯೂ ತೀರಿಕೊಂಡಿದ್ದು ಇಡೀ ಕುಟುಂಬಕ್ಕೆ ಆಘಾತ ಎದುರಾಗಿದೆ’ ಎಂದು ಅನುಕುಮಾರ್ ಗೆಳೆಯರೊಬ್ಬರು ಹೇಳಿದರು.

‘ದರ್ಶನ್ ದೊಡ್ಡ ವ್ಯಕ್ತಿ. ತನ್ನ ಬಳಿ ಇದ್ದ ಐಷಾರಾಮಿ ಕಾರು ಕಳುಹಿಸಿ ರೇಣುಕಸ್ವಾಮಿಯನ್ನು ಕರೆಸಿಕೊಳ್ಳಬೇಕಿತ್ತು. ನನ್ನ ಗಂಡ ಬಡಪಾಯಿ ಕಾರು ಚಾಲಕ. ಆತನ ಕಾರಿನಲ್ಲಿ ರೇಣುಕಸ್ವಾಮಿಯನ್ನು ಕರೆಸಿಕೊಂಡು ಕೊಲೆ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ನಮಗೆ ಚಿಕ್ಕ ಮಕ್ಕಳಿದ್ದಾರೆ. ಅವರನ್ನು ಸಾಕುವುದು ಹೇಗೆ’ ಎಂದು 8ನೇ ಆರೋಪಿ ರವಿ ಪತ್ನಿ ಕವಿತಾ ಪ್ರಶ್ನಿಸಿದರು.

ಅಣ್ಣ– ಅಕ್ಕನ ನಡುವೆ ಯಾರು ಬರಬಾರದು: ‘ರೇಣುಕಸ್ವಾಮಿ, ಸಾಮಾಜಿಕ ಜಾಲತಾಣಗಳಲ್ಲಿ ಸದಾ ಕಾಲ ದರ್ಶನ್ ವಿಚಾರಗಳನ್ನೇ ವೀಕ್ಷಿಸುತ್ತಿದ್ದ. ದರ್ಶನ್ ಅಣ್ಣ– ವಿಜಯಲಕ್ಷ್ಮಿ ಅಕ್ಕನ ನಡುವೆ ಬೇರೆ ಯಾರೂ ಬರಬಾರದು ಎಂದು ಹಲವರಿಗೆ ಹೇಳಿದ್ದ. ಅದನ್ನು ನಾವು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಪವಿತ್ರಾಗೌಡ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿರುವ ವಿಷಯ ನಮಗೆ ಗೊತ್ತಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ರೇಣುಕಸ್ವಾಮಿ ಗೆಳೆಯರೊಬ್ಬರು ತಿಳಿಸಿದರು.


ಮಧ್ಯರಾತ್ರಿ ನಡೆಯಿತು ಅಂತ್ಯಕ್ರಿಯೆ

7ನೇ ಆರೋಪಿ ಅನುಕುಮಾರ್ ಬಂಧನದ ನಂತರ ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದ ಆರೋಪಿಯ ತಂದೆ ಚಂದ್ರಣ್ಣ ಅವರ ಅಂತ್ಯಕ್ರಿಯೆ ಶನಿವಾರ ಮಧ್ಯಾರಾತ್ರಿ ನೆರವೇರಿತು.

‘ಅನುಕುಮಾರ್ ಬರುವವರೆಗೂ ಅಂತ್ಯಕ್ರಿಯೆ ಮಾಡುವುದಿಲ್ಲ, ನಾವು ಹಣ ಎತ್ತುವುದಿಲ್ಲ’ ಎಂದು ಚಂದ್ರಣ್ಣ ಕುಟುಂಬ ಸದಸ್ಯರು ಪಟ್ಟು ಹಿಡಿದಿದ್ದರು. ಸ್ಥಳೀಯ ದಾನಿಯೊಬ್ಬರು ನೀಡಿದ್ದ ಶೀಥಲೀಕರಣ ಪೆಟ್ಟಿಗೆಯಲ್ಲಿ ಮೃತದೇಹವನ್ನು ಸಂರಕ್ಷಿಸಿ ಇಡಲಾಗಿತ್ತು.

ಸ್ಥಳೀಯ ಪೊಲೀಸರ ಮನವಿ ಮೇರೆಗೆ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುಕುಮಾರ್‌ಗೆ ಅವಕಾಶ ಮಾಡಿಕೊಡುವಂತೆ ಕೋರಿ ಬೆಂಗಳೂರಿನ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗಿತ್ತು. ನ್ಯಾಯಾಲಯ ಅನುಮತಿ ನೀಡಿದ ಹಿನ್ನೆಲೆಯಲ್ಲಿ ರಾತ್ರಿಯೇ ಆರೋಪಿಯನ್ನು ಚಿತ್ರದುರ್ಗಕ್ಕೆ ಕರೆತರಲಾಯಿತು. ಹೊಳಲ್ಕೆರೆ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕೈಗಾ: ದರ್ಶನ್ ಒಳಿತಿಗೆ ಸಹೋದರಿ ಪ್ರಾರ್ಥನೆ, ಪೂಜೆ


ಮಂಜುನಾಥ್

ಕಾರವಾರ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ನಿರ್ದೋಷಿಯಾಗಿ ಹೊರಬರಲಿ ಎಂದು ಅವರ ಹಿರಿಯ ಸಹೋದರಿ ದಿವ್ಯಾ ಮತ್ತು ಕೈಗಾದಲ್ಲಿ ಎಂಜಿನಿಯರ್ ಆಗಿರುವ ಇವರ ಪತಿ ಮಂಜುನಾಥ ಅವರು ತಾಲ್ಲೂಕಿನ ಮಲ್ಲಾಪುರದ ಕೈಗಾ ಟೌನ್‌ಶಿಪ್‌ನಲ್ಲಿನ ರಾಮಲಿಂಗೇಶ್ವರ, ಶನೀಶ್ವರ ದೇವಾಲಯದಲ್ಲಿ ಶನಿವಾರ ಪೂಜೆ ಸಲ್ಲಿಸಿದರು. ದರ್ಶನ್ ಹೆಸರಿನಲ್ಲಿ ಅರ್ಚನೆ ಮಾಡಿಸಿದ ಅವರು, ನವಗ್ರಹ ಪೂಜೆ, ಶನಿಶಾಂತಿ ಪೂಜೆಯೂ ನೆರವೇರಿಸಿದರು.

‘ದರ್ಶನ್ ವ್ಯಕ್ತಿಗತವಾಗಿ ಒಳ್ಳೆಯವರು. ಅವರನ್ನು ಕೆಲವರು ಪ್ರಚೋದಿಸಿ ತಪ್ಪು ದಾರಿಗೆ ಎಳೆದಿರಬಹುದು. ಅವರ ಏಳ್ಗೆ ಸಹಿಸದವರಿಂದ ಇಂತಹ ಕೃತ್ಯ ನಡೆದಿರುವ ಸಾಧ್ಯತೆ ಇದೆ. ಅವರ ಒಳಿತಿಗೆ ಪ್ರಾರ್ಥಿಸಿ, ಪೂಜೆ ಸಲ್ಲಿಸಲಾಗಿದೆ’ ಎಂದು ಮಂಜುನಾಥ ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿ 2 ನಿಮಿಷ

ತಪ್ಪಿತಸ್ಥರಿಗೆ ಶಿಕ್ಷೆ ನಿಶ್ಚಿತ: ಸಚಿವ ಎಂ. ಬಿ. ಪಾಟೀಲ

ವಿಜಯಪುರ: ‘ಚನ್ನಪಟ್ಟಣ ವಿಧಾನಸಭೆ ಉಪಚುನಾವಣೆಯಲ್ಲಿ ಸ್ಪರ್ಧಿಸಬೇಕಿದ್ದ ಕಾಂಗ್ರೆಸ್ ಅಚ್ಚರಿ ಅಭ್ಯರ್ಥಿ ಜೈಲು ಪಾಲು ಎಂದು ಸಿ.ಪಿ.ಯೋಗೇಶ್ವರ ಹೇಳಿಕೆ ನೀಡಿದ್ದು ಸರಿಯಲ್ಲ. ಹಾಸನದಲ್ಲಿ ಪ್ರಜ್ವಲ್ ಸಂಸದ ಆಗಿರಲಿಲ್ಲವೇ? ಅದನ್ನೆ ನಾವು ಉಲ್ಟಾ ಕೇಳಿದರೇ ಹೇಗೆ’ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಪ್ರಶ್ನಿಸಿದರು.

‘ನಟ ದರ್ಶನ್ ಕಾಂಗ್ರೆಸ್ ಅಭ್ಯರ್ಥಿ ಆಗುವ ಬಗ್ಗೆ ಮಾಹಿತಿ ನನಗೆ ಗೊತ್ತಿಲ್ಲ. ಅಭ್ಯರ್ಥಿ ಮಾಡುವ ಉದ್ದೇಶವಿದ್ದರೂ ಅವರ ಮೇಲೆ ಆಗ ದೂರುಗಳು ಇರಲಿಲ್ಲ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಯಾರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರು ಯಾರೇ ಇದ್ದರೂ ಶಿಕ್ಷೆ ನಿಶ್ಚಿತ. ಕಾನೂನು ತನ್ನ ಕೆಲಸ ಮಾಡಲಿದೆ ಎಂದು ಸ್ವತಃ ಮುಖ್ಯಮಂತ್ರಿ ಹಾಗೂ ಗೃಹ ಸಚಿವರೇ ಸ್ಪಷ್ಟಪಡಿಸಿದ್ದಾರೆ’ ಎಂದರು.



ರೇಣುಕಸ್ವಾಮಿ ಕುಟುಂಬಕ್ಕೆ ಚಿತ್ರೋದ್ಯಮ ₹ 5 ಲಕ್ಷ ನೆರವು

ಚಿತ್ರದುರ್ಗ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ಪದಾಧಿಕಾರಿಗಳು ಶನಿವಾರ ನಗರದ ವಿಆರ್‌ಎಸ್ ಬಡಾವಣೆಯಲ್ಲಿರುವ ರೇಣುಕಸ್ವಾಮಿ ಮನೆಗೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಜೊತೆಗೆ ₹ 5 ಲಕ್ಷ ನೆರವು ನೀಡಿದರು.

ಕೆಎಫ್‌ಸಿಸಿ ಅಧ್ಯಕ್ಷ ಎನ್.ಎಂ.ಸುರೇಶ್, ಮಾಜಿ ಅಧ್ಯಕ್ಷರಾದ ಸಾ.ರಾ. ಗೋವಿಂದು ಹಾಗೂ ಚಿನ್ನೇಗೌಡ ಅವರು ರೇಣುಕಸ್ವಾಮಿ ಪತ್ನಿಗೆ ₹ 2.5 ಲಕ್ಷ, ತಂದೆ–ತಾಯಿಗೆ ₹ 2.5 ಲಕ್ಷದ ಚೆಕ್ ಹಸ್ತಾಂತರಿಸಿದರು.

‘ಸಾಂಕೇತಿಕವಾಗಿ ನಾವು ₹ 5 ಲಕ್ಷ ನೆರವು ನೀಡಿದ್ದೇವೆ. ಮುಂದೆ ಕೂಡ ಕುಟುಂಬ ಸದಸ್ಯರಿಗೆ ಸಹಾಯ ಮಾಡುತ್ತೇವೆ. ಮನೆಗೆ ಆಧಾರವಾಗಿದ್ದ ರೇಣುಕಸ್ವಾಮಿ ಕೊಲೆಯಾಗಿರುವುದು ದುಃಖದ ಸಂಗತಿ. ಕನ್ನಡ ಚಿತ್ರರಂಗದ ವತಿಯಿಂದ ನಾವು ಕುಟುಂಬದವರ ಕ್ಷಮೆ ಕೋರುತ್ತೇವೆ. ಯಾರೇ ಮಾಡಿದ್ದರೂ ತಪ್ಪು ತಪ್ಪೇ. ಪೊಲೀಸರು ಕಾನೂನಿನ ಅನುಸಾರ ತನಿಖೆ ಮಾಡುತ್ತಿದ್ದು ಸತ್ಯ ಹೊರಬರುವ ವಿಶ್ವಾಸವಿದೆ’ ಎಂದು ಸುರೇಶ್ ಹೇಳಿದರು.

‘ದರ್ಶನ್ ಅಭಿಮಾನಿಗಳು ಪ್ರಚೋದನೆಗೆ ಒಳಗಾಗಬಾರದು. ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್, ಶಂಕರ್‌ನಾಗ್ ಅವರಿಗೂ ಹೆಚ್ಚಿನ ಸಂಖ್ಯೆಯ ಅಭಿಮಾನಿಗಳಿದ್ದರು. ಅವರಾರೂ ಪ್ರಚೋದನೆಗೆ ಒಳಗಾಗಿರಲಿಲ್ಲ. ಜನರು ಶಾಂತಿಯಿಂದ ಇರಬೇಕು. ಎಲ್ಲಾ ವಿಷಯಗಳಿಗೂ ಚಿತ್ರರಂಗ, ವಾಣಿಜ್ಯ ಮಂಡಳಿಯನ್ನು ದೂಷಿಸಬೇಡಿ’ ಎಂದರು.

ದರ್ಶನ್ ಮನೆಯಲ್ಲಿ ಹಲವು ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ಐಡಿಯಲ್ ಹೋಮ್ ಟೌನ್‌ಶಿಪ್‌ನಲ್ಲಿ ಇರುವ ದರ್ಶನ್ ಅವರ ಮನೆಯಲ್ಲಿ ಶುಕ್ರವಾರ ಮಧ್ಯರಾತ್ರಿ ಮಹಜರು ನಡೆಸಲಾಯಿತು. ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಿಂದ ದರ್ಶನ್ ಅವರನ್ನು ಭದ್ರತೆಯಲ್ಲಿ ಕರೆದೊಯ್ದ ಪೊಲೀಸರು ಮಹಜರು ನಡೆಸಿದರು.

‘ಕೃತ್ಯ ನಡೆದ ಬಳಿಕ ದರ್ಶನ್ ಅವರು ಪಟ್ಟಣಗೆರೆ ಶೆಡ್‌ನಿಂದ ನೇರವಾಗಿ ತಮ್ಮ ಮನೆಗೆ ಬಂದಿದ್ದರು. ಬಂದ ಬಳಿಕ ಸ್ನಾನ ಮಾಡಿದ್ದರು. ರೇಣುಕಸ್ವಾಮಿ ಅವರ ಮೇಲೆ ದರ್ಶನ್ ಹಲ್ಲೆ ನಡೆಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಕೆಲವು ಸಾಕ್ಷ್ಯಗಳನ್ನು ಕಲೆ ಹಾಕಲಾಗಿದೆ. ದರ್ಶನ್ ಕೃತ್ಯ ನಡೆದ ದಿನ ಧರಿಸಿದ್ದ ಬಟ್ಟೆಗಳು ಸೇರಿದಂತೆ ಕೆಲವು ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಸಿ.ಸಿ. ಟಿ.ವಿಯಲ್ಲಿ ಸೆರೆಯಾಗಿರುವ ದೃಶ್ಯಾವಳಿಗೂ, ಅಂದು ದರ್ಶನ್ ಧರಿಸಿದ್ದ ಬಟ್ಟೆಗೂ ಹೋಲಿಕೆ ಮಾಡಲಾಗುವುದು’ ಎಂದು ಪೊಲೀಸರು ಹೇಳಿದರು.

‘ಇದು ಗಂಭೀರ ಪ್ರಕರಣ ಆಗಿರುವುದರಿಂದ ನಮಗೆ ಸಿಗುವ ಸಣ್ಣಪುಟ್ಟ ಸಾಕ್ಷ್ಯವನ್ನೂ ಕಲೆ ಹಾಕುತ್ತಿದ್ದೇವೆ. ದರ್ಶನ್ ಅವರ ಅಭಿಮಾನಿಗಳು, ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರೆ ಮಹಜರು ನಡೆಸಲು ತೊಂದರೆ ಆಗಬಹುದು ಎಂಬ ಕಾರಣಕ್ಕೆ ತಡರಾತ್ರಿ ಅವರ ಮನೆಗೆ ಕರೆದೊಯ್ದು ದರ್ಶನ್ ಸಮ್ಮುಖದಲ್ಲೇ ಮಹಜರು ನಡೆಸಲಾಗಿದೆ. ಅರ್ಧ ತಾಸು ಪರಿಶೀಲನೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

ಮತ್ತೊಬ್ಬ ಆರೋಪಿ ವಿಚಾರಣೆ: ‘ಶುಕ್ರವಾರ ರಾತ್ರಿ ಮತ್ತೊಬ್ಬ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಇವರು ಆರೋಪಿಗಳ ಮೊಬೈಲ್‌ನ ದತ್ತಾಂಶ ಅಳಿಸಲು ಹಾಕಲು ನೆರವು ನೀಡಿದ್ದರು ಎಂಬ ಅನುಮಾನವಿದೆ’ ಎಂದು ಮೂಲಗಳು ಹೇಳಿವೆ.

ಹಲವು ಪ್ರಮುಖ ಸಾಕ್ಷ್ಯಗಳು ಲಭ್ಯ

ಅಪಹರಣ, ಕೊಲೆ ಪ್ರಕರಣದಲ್ಲಿ ಆರೋಪಿಗಳು ಒಂದೊಂದು ಪಾತ್ರ ವಹಿಸಿರುವುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪಟ್ಟಣಗೆರೆಯ ಶೆಡ್‌ನಲ್ಲಿ ಬಿದ್ದಿದ್ದ ರೇಣುಕಸ್ವಾಮಿ ತಲೆಕೂದಲು, ರಕ್ತದ ಮಾದರಿ ಸಂಗ್ರಹಿಸಲಾಗಿದೆ. ಆರೋಪಿಗಳ ಮೊಬೈಲ್ ಲೊಕೇಶನ್ ಪರಿಶೀಲಿಸಲಾಗಿದೆ. ಜೂನ್ 8ರಂದು ರಾತ್ರಿ ಎಲ್ಲರೂ ಒಂದೇ ಟವರ್ ವ್ಯಾಪ್ತಿಯಲ್ಲಿ ಇರುವುದು ಪತ್ತೆಯಾಗಿದೆ. ಪವನ್ ಹಾಗೂ ಪವಿತ್ರಾಗೌಡ ಹೇಳಿದಂತೆ ಚಿತ್ರದುರ್ಗದಿಂದ ರೇಣುಕಸ್ವಾಮಿ ಅವರನ್ನು ಕರೆತರಲಾಗಿತ್ತು ಎಂದು ಆರೋಪಿ ರಾಘವೇಂದ್ರ ಹೇಳಿಕೆ ನೀಡಿದ್ದಾರೆ. ಇದು ಮಹತ್ವದಾಗಿದೆ’ ಎಂದು ಅವರು ವಿವರಿಸಿದರು.

ಪ್ರಜ್ವಲ್ ರೇವಣ್ಣಗೆ ಮತ್ತೆ ವೈದ್ಯಕೀಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಎಸ್‌ಐಟಿ ಕಸ್ಟಡಿಯಲ್ಲಿ ಇರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಬೌರಿಂಗ್ ಆಸ್ಪತ್ರೆಯಲ್ಲಿ ಶನಿವಾರ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು.

ಮೊದಲು ದಾಖಲಾಗಿದ್ದ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗೆ ವೈದ್ಯಕೀಯ ಪರೀಕ್ಷೆ ನಡೆಸಲಾಗಿತ್ತು. 2ನೇ ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್‌ಗೆ ಶನಿವಾರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ನಾಲ್ಕು ಮಂದಿಯನ್ನು ಒಳಗೊಂಡ ವೈದ್ಯರು ಪ್ರಜ್ವಲ್‌ಗೆ ವೈದ್ಯಕೀಯ ಪರೀಕ್ಷೆ ನಡೆಸಿದ್ದಾರೆ. ಈ ವೇಳೆ ಎಫ್‌ಎಸ್‌ಎಲ್ ಅಧಿಕಾರಿಗಳ ತಂಡವೂ ಇತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಪರೀಕ್ಷೆಗಳನ್ನು ವೈದ್ಯರ ತಂಡ ನಡೆಸಿದೆ. ಅವರು ನಮಗೆ ವರದಿ ನೀಡಲಿದ್ದಾರೆ’ ಎಂದು ತನಿಖಾಧಿಕಾರಿಗಳು ತಿಳಿಸಿದರು.

‘ನ್ಯಾಯಾಂಗ ಬಂಧನದಲ್ಲಿ ಪ್ರಜ್ವಲ್ ಅವರನ್ನು ಬಾಡಿ ವಾರಂಟ್ ಮೇಲೆ ಮತ್ತೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಎಸ್‌ಐಟಿಗೆ ಕಚೇರಿಯಲ್ಲೇ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಧ್ವನಿ ಮಾದರಿ ಸಂಗ್ರಹಿಸಿ ಸಾಕ್ಷ್ಯ ಕಲೆ: ‘ಈಗಾಗಲೇ ಆರೋಪಿಯ ಧ್ವನಿ ಮಾದರಿ ಸಂಗ್ರಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ತಾಂತ್ರಿಕ ಸಾಕ್ಷ್ಯಗಳನ್ನು ಕಲೆ ಹಾಕಲಾಗುತ್ತಿದೆ. ವಿಡಿಯೊದಲ್ಲಿ ಕಾಣಿಸಿದ ಪುರುಷನ ಅಂಗಾಂಗಳೊಂದಿಗೆ ಪ್ರಜ್ವಲ್ ಅಂಗಗಳನ್ನು ಹೋಲಿಕೆ ಮಾಡಲು ತನಿಖಾ ತಂಡ ಮುಂದಾಗಿದೆ. ಈ ಪರೀಕ್ಷೆಗೆ ಗುಜರಾತ್‌ನ ಅಹಮದಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯ ಹಾಗೂ ವಿದೇಶಿ ತಜ್ಞರ ನೆರವು ಪಡೆದುಕೊಳ್ಳುತ್ತೇವೆ’ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಎಚ್. ಡಿ. ಕುಮಾರಸ್ವಾಮಿ ಹೇಳಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

ಕೇಜ್ರಿವಾಲ್ ಅವರನ್ನು ಜೈಲಿಗೇ ಕಳಿಸಿದ್ದಾರಲ್ಲಾ?

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಮೈಸೂರು: ‘ರಾಹುಲ್ ಗಾಂಧಿ ಅವರ ಸದಸ್ಯತ್ವವನ್ನೇ ರದ್ದುಗೊಳಿಸಿದ್ದರಲ್ಲಾ? ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೇ ಕಳಿಸಿದ್ದಾರಲ್ಲಾ? ಅದಕ್ಕೆಲ್ಲಾ ಏನೇನ್ನಬೇಕು? ದ್ವೇಷದ ರಾಜಕಾರಣವೆನ್ನಬೇಕಾ ಅಥವಾ ಪ್ರೀತಿಯ ರಾಜಕಾರಣವೆನ್ನಬೇಕಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು.

‘ಎಚ್.ಡಿ.ದೇವೇಗೌಡರ ಕುಟುಂಬದ ನಂತರ ಬಿ.ಎಸ್.ಯಡಿಯೂರಪ್ಪ ಕುಟುಂಬವನ್ನು ಗುರಿ ಮಾಡಲಾಗಿದೆ’ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಇಲ್ಲಿ ಶನಿವಾರ ತಿರುಗೇಟು ನೀಡಿದರು.

‘ನನ್ನ ವಿರುದ್ಧ, ಡಿ.ಕೆ. ಶಿವಕುಮಾರ್ ಹಾಗೂ ರಾಹುಲ್ ಗಾಂಧಿ ವಿರುದ್ಧ ಕೇಸ್ ಹಾಕಿದ್ರಲ್ಲಾ ಅದಕ್ಕೆ ಏನೆಂದು ಕರೆಯುವುದು? ಸೇಡಿನ ರಾಜಕಾರಣ ಮಾಡುವವರು ಅವರು. ಅದೇ ಬಿಜೆಪಿಯವರ ಕೆಲಸ. ನಾವು ಯಾವತ್ತೂ ಸೇಡಿನ ರಾಜಕಾರಣ ಮಾಡುವುದಿಲ್ಲ. ನಾನು ನೆನ್ನೆ-ಮೊನ್ನೆ ರಾಜಕೀಯಕ್ಕೆ ಬಂದಿಲ್ಲ. ಇಂದಿನವರೆಗೂ ಯಾರ ಮೇಲೂ ಸೇಡಿನ ರಾಜಕಾರಣ ಮಾಡಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

‘ದ್ವೇಷದ ರಾಜಕಾರಣ ಮಾಡುವುದೇ ಬಿಜೆಪಿಯವರ ಕೆಲಸ. ಹೆದರಿಸುವುದು, ಬೆದರಿಸುವುದು ಅದರ ಸಂಸ್ಕೃತಿ. ಅದಕ್ಕಾಗಿ ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ ಹಾಗೂ ಸಿಬಿಐ ಬಳಸಿಕೊಳ್ಳುತ್ತಿದ್ದಾರೆ. ಅದಕ್ಕಾಗಿಯೇ ಜನ ಈ ಬಾರಿ ಬಿಜೆಪಿಯವರಿಗೆ ಬಹುಮತ ಕೊಡಲಿಲ್ಲ’ ಎಂದರು.

ಕೇಂದ್ರ ಸಚಿವ ಸಂಪುಟದಲ್ಲಿ ದಕ್ಷಿಣ ಭಾರತದವರಿಗೆ ಪ್ರಧಾನಿಯು ಆದ್ಯತೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, ‘ದಕ್ಷಿಣ ಭಾರತದಲ್ಲಿ ಜನ ಬಿಜೆಪಿಯನ್ನು ಬೆಂಬಲಿಸುವುದಿಲ್ಲ. ಅದು ಆರ್‌ಎಸ್‌ಎಸ್ ಅಡಿಪಾಯದ ಪಕ್ಷ. ಸಂಘಟನೆಯ ರಾಜಕೀಯ ಮುಖವಾಡ. ಜನ ಬೆಂಬಲಿಸದ ಕಾರಣಕ್ಕೇ ಈ ಬಾರಿಯ ಚುನಾವಣೆಯಲ್ಲಿ ಉತ್ತರ ಭಾರತದ ಹಲವೆಡೆಯೂ ಪಕ್ಷಕ್ಕೆ ಹಿನ್ನಡೆಯಾಗಿದೆ. ಅಹಂಕಾರಕ್ಕೆ ಜನ ಸರಿಯಾದ ಪಾಠ ಕಲಿಸಿದ್ದಾರೆ ಎಂದು ಆರ್‌ಎಸ್‌ಎಸ್‌ನವರೇ ಹೇಳಿಕೆ ನೀಡಿದ್ದಾರೆ’ ಎಂದು ಟೀಕಿಸಿದರು.


ನೀಟ್ ಮರು ಪರೀಕ್ಷೆಗಾಗಿ ಕೇಂದ್ರಕ್ಕೆ ಪತ್ರ ಬರೆದಿರುವೆ– ಸಿ.ಎಂ: ‘ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಈ ವರ್ಷ ನಡೆಸಿದ ‘ನೀಟ್’ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದು, ತನಿಖೆ ನಡೆಸಬೇಕು ಹಾಗೂ ಮರುಪರೀಕ್ಷೆ ಮಾಡಬೇಕು ಎಂದು ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆದಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಎನ್‌ಟಿಎ (ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ) ಸರಿಯಾಗಿ ಪರೀಕ್ಷೆ ನಡೆಸಿಲ್ಲ. ಕೃಪಾಂಕ ಕೊಟ್ಟು ಯಾರನ್ನೂ ಪಾಸ್ ಮಾಡಬಾರದು. ಅದು ಕೆಟ್ಟ ಅಭ್ಯಾಸ. ಚೆನ್ನಾಗಿ ಓದಿ ಪರೀಕ್ಷೆ ಬರೆದವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು, ಆದಾಯ ಮಿತಿಯನ್ನು ಹೆಚ್ಚಿಸಿರುವುದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುವೆ. ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ಶುಲ್ಕವನ್ನು ಶೇ.10ರಷ್ಟು ಹೆಚ್ಚಿಸಿರುವುದು ಗೊತ್ತಿಲ್ಲ. ಪರಿಶೀಲಿಸುತ್ತೇನೆ’ ಎಂದರು.

‘ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಶೀಘ್ರದಲ್ಲೇ ಮಾಡುತ್ತೇವೆ’ ಎಂದರು.

‘ವೈದ್ಯಕೀಯ ಕೋರ್ಸ್: ಪರೀಕ್ಷೆ ನಡೆಸಲು ಅವಕಾಶ ನೀಡಲಿ’


ಡಿ.ಕೆ. ಶಿವಕುಮಾರ್

ಬೆಂಗಳೂರು: ‘ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯನ್ನು ರಾಜ್ಯಗಳೇ ನಡೆಸಲು ಅವಕಾಶ ಮಾಡಿಕೊಡುವುದು ಉತ್ತಮ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿನ (ನೀಟ್) ಅಕ್ರಮ ಗಂಭೀರ ಅಪರಾಧ. ಹೀಗಾಗಿ, ರಾಜ್ಯಗಳೇ ಪ್ರವೇಶ ಪರೀಕ್ಷೆ ನಡೆಸಲು ಅವಕಾಶ ನೀಡಲಿ ಎಂದು ಕೇಂದ್ರವನ್ನು ಮನವಿ ಮಾಡುತ್ತೇನೆ. ರಾಜ್ಯಗಳು ನಡೆಸುವ ಪರೀಕ್ಷೆಯಲ್ಲಿ ದೇಶದ ಎಲ್ಲ ರಾಜ್ಯಗಳ ವಿದ್ಯಾರ್ಥಿಗಳು ಭಾಗವಹಿಸಲಿ. ಅವರಿಗೆ ಮೀಸಲಾತಿಯನ್ನೂ ನೀಡಬಹುದು’ ಎಂದರು.

‘ನೀಟ್ ಪರೀಕ್ಷೆಯಿಂದ ಉತ್ತರ ಭಾರತದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ನಮ್ಮ ಮಕ್ಕಳಿಗೆ ತಾರತಮ್ಯವಾಗುತ್ತಿದೆ. ಈ ವಿಚಾರದಲ್ಲಿ ಒಗ್ಗಟ್ಟಿನಿಂದ ಹೋರಾಡಬೇಕು. ನೀಟ್ ಅಕ್ರಮದ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರ ಜತೆ ಚರ್ಚಿಸಿದ್ದೇನೆ. ಈ ವಿಚಾರವಾಗಿ ಉನ್ನತ ಮಟ್ಟದ ತನಿಖೆಯಾಗಿ, ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರದ ಪ್ರಸ್ತಾವ ಸರಿಯಾಗಿಲ್ಲ’ ಎಂಬ ಬಸವರಾಜ ಬೊಮ್ಮಾಯಿ ಹೇಳಿಕೆ ಬಗ್ಗೆ ಕೇಳಿದಾಗ, ‘ಸುಳ್ಳಿಗೆ ಮತ್ತೊಂದು ಹೆಸರೇ ಬೊಮ್ಮಾಯಿ ಎನ್ನುವಂತಾಗುತ್ತಿದೆ’ ಎಂದರು.

‘ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲೇ ಭದ್ರಾ ಮೇಲ್ದಂಡೆ ಯೋಜನೆಯನ್ನು ಬಜೆಟ್‌ನಲ್ಲಿ ಕೇಂದ್ರ ಸೇರಿಸಿಕೊಂಡಿತ್ತು. ನಮ್ಮ ಪ್ರಸ್ತಾವ ಸರಿಯಾಗಿಲ್ಲ ಎಂದಾದರೆ, ಹೇಗೆ ಬರೆಯಬೇಕೆಂದು ಅವರಿಂದಲೇ ಕೇಳಿ ಬರೆದು ಕೊಡುತ್ತೇವೆ. ಬೊಮ್ಮಾಯಿಯವರೂ ನೀರಾವರಿ ಸಚಿವರಾಗಿದ್ದವರು. ರಾಷ್ಟ್ರೀಯ ಯೋಜನೆ ಮಾಡಿ ಎಂದು ಪ್ರಸ್ತಾವ ಸಲ್ಲಿಸಲಾಗಿತ್ತು. ಸಂಪುಟ ಸಭೆಯ ಮುಂದೆ ಇಟ್ಟುಕೊಂಡರೇ ಹೊರತು, ಹಣ ಬಿಡುಗಡೆ ಮಾಡಲಿಲ್ಲ’ ಎಂದರು.


ಗಜ ಕಾಳಗ

ಬಂಡೀಪುರ ಅಭಯಾರಣ್ಯದಲ್ಲಿ ಶನಿವಾರ ಎರಡು ಆನೆಗಳು ಕಾದಾಡುತ್ತಿರುವ ದೃಶ್ಯ ಕಂಡುಬಂತು

ಪ್ರಜಾವಾಣಿ ಚಿತ್ರ: ಅನೂಪ್ ರಾಘ್. ಟಿ.

‘ಅರ್ಜುನ ಆನೆಗೆ ಎರಡು ಸ್ಮಾರಕ’

ಮೈಸೂರು: ‘ಅರ್ಜುನ ಆನೆ ಸಾವನ್ನಪ್ಪಿದ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಯಸಳೂರು ಹಾಗೂ ಅದು ವಾಸವಿದ್ದ ಎಚ್.ಡಿ.ಕೋಟೆ ತಾಲ್ಲೂಕಿನ ಬಳ್ಳೆ ಆನೆ ಶಿಬಿರದಲ್ಲಿ ಸ್ಮಾರಕ ನಿರ್ಮಾಣಕ್ಕೆ ಹದಿನೈದು ದಿನದೊಳಗೆ ಶಂಕುಸ್ಥಾಪನೆ ಮಾಡಲಾಗುವುದು’ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಶನಿವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಪುಂಡಾನೆಗಳ ನಿಯಂತ್ರಣಕ್ಕೆ ಸಾಕಾನೆಗಳನ್ನು ಕಳಿಸಿಕೊಡುವಂತೆ ಆಂಧ್ರಪ್ರದೇಶ ಸರ್ಕಾರ ಮನವಿ ಮಾಡಿದೆ. ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನಿಸುತ್ತೇವೆ. ದಸರಾ ಆನೆಗಳನ್ನು ಎಲ್ಲಿಗೂ ಕೊಡುವುದಿಲ್ಲ’ ಎಂದು ತಿಳಿಸಿದರು.

‘ಜಲ ವಿವಾದ ಪರಿಹರಿಸಲು ಯತ್ನಿಸುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆಯಲ್ಲಿ ಧ್ವನಿ ಎತ್ತುವ ಮೂಲಕ ಕರ್ನಾಟಕದ ನೀರಾವರಿ ಯೋಜನೆಗಳಾದ ಕೃಷ್ಣಾ, ಕಾವೇರಿ ಅಂತರರಾಜ್ಯ ಜಲ ವಿವಾದಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಸಂಸದನಾಗಿ ಆಯ್ಕೆಯಾಗಿ ದೆಹಲಿಗೆ ಹೋದರೂ, ಕರ್ನಾಟಕದ ರಾಜಕಾರಣದಲ್ಲಿ ಸಕ್ರಿಯನಾಗಿರುತ್ತೇನೆ. ನಮ್ಮ ವರಿಷ್ಠರು ಅದೇ ಕಾರಣಕ್ಕೆ ಕೆಲವು ನಿರ್ಣಯ ತೆಗೆದುಕೊಂಡಿದ್ದಾರೆ’ ಎಂದರು.

‘ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ಅನುದಾನ ಪಡೆಯಲು ರಾಜ್ಯ ಸರ್ಕಾರ ನಿಯಮಾನುಸಾರ ಮನವಿ ಸಲ್ಲಿಸಬೇಕು. ಹಿಂದೆ ನಾವು ತ್ವರಿತ ನೀರಾವರಿ ಯೋಜನೆಯಡಿ (ಎಐಬಿಪಿ) ಸುಮಾರು ಆರು ತಿಂಗಳು ದೆಹಲಿಯಲ್ಲಿ ನಮ್ಮ ಅಧಿಕಾರಿಗಳನ್ನು ಇಟ್ಟು ಸುಮಾರು ₹3,800 ಕೋಟಿ ತಂದಿದ್ದೇವೆ’ ಎಂದರು.

3 ವಿಧಾನಸಭಾ ಕ್ಷೇತ್ರ: ಉಪ ಚುನಾವಣೆಗೆ ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಗೆ ಆಯ್ಕೆಯಾದ ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಮತ್ತು ಇ. ತುಕಾರಾಂ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೀಗಾಗಿ, ಚನ್ನಪಟ್ಟಣ, ಶಿಗ್ಗಾವಿ, ಸಂಡೂರು ಕ್ಷೇತ್ರಗಳ ಉಪ ಚುನಾವಣೆಗೆ ದಾರಿಯಾಗಿದೆ.

ಕುಮಾರಸ್ವಾಮಿ ಮತ್ತು ಬಸವರಾಜ ಬೊಮ್ಮಾಯಿ ಅವರು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರನ್ನು ಶನಿವಾರ ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇ. ತುಕಾರಾಂ ಅವರು ವಿಧಾನಸಭಾಧ್ಯಕ್ಷರ ಅನುಮತಿ ಮೇರೆಗೆ ಕಾರ್ಯದರ್ಶಿಗೆ ಶುಕ್ರವಾರವೇ ರಾಜೀನಾಮೆ ಪತ್ರ ಸಲ್ಲಿಸಿದ್ದರು.

ಮೂವರ ರಾಜೀನಾಮೆಯನ್ನು ಸಭಾಧ್ಯಕ್ಷರು ಅಂಗೀಕರಿಸಿದ ಬೆನ್ನಲ್ಲೇ, ವಿಧಾನಸಭೆಯ ಮೂರು ಸ್ಥಾನಗಳು ಖಾಲಿಯಾಗಿವೆ ಎಂದು ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅಧಿಸೂಚನೆ ಹೊರಡಿಸಿದ್ದಾರೆ. ಈ ಅಧಿಸೂಚನೆಯನ್ನು ಚುನಾವಣೆ ಆಯೋಗಕ್ಕೆ ಕಳುಹಿಸಲಾಗಿದೆ. ಆಯೋಗವು ಆರು ತಿಂಗಳ ಒಳಗೆ ಉಪಚುನಾವಣೆಯನ್ನು ನಡೆಸಬೇಕಿದೆ.

ಕೋಟ ರಾಜೀನಾಮೆ: ಉಡುಪಿ– ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಚುನಾಯಿತರಾದ ಕೋಟ ಶ್ರೀನಿವಾಸ ಪೂಜಾರಿ ಅವರು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿ ಮಾಡಿ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಪೂಜಾರಿ ಪ್ರತಿನಿಧಿಸುತ್ತಿದ್ದ ಪರಿಷತ್ತಿನ ಸ್ಥಳೀಯ ಸಂಸ್ಥೆಗಳ ಕ್ಷೇತ್ರ (ದಕ್ಷಿಣ ಕನ್ನಡ)ಕ್ಕೂ ಚುನಾವಣೆ ನಡೆಯಬೇಕಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಸಾಂಸ್ಕೃತಿಕ ವಲಯದಿಂದ ವ್ಯಾಪಕ ಟೀಕೆ

ಕೆಪಿಸಿಸಿ ಕಚೇರಿಯಲ್ಲಿ ಅಕಾಡೆಮಿ ಅಧ್ಯಕ್ಷರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಕಚೇರಿಯಲ್ಲಿಯೇ ಸಾಂಸ್ಕೃತಿಕ ಅಕಾಡೆಮಿಗಳ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರ ಜತೆಗೆ ಸಭೆ ನಡೆಸಿರುವ ಕ್ರಮಕ್ಕೆ ಸಾಂಸ್ಕೃತಿಕ ವಲಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಈ ಸಭೆಯಲ್ಲಿ ಪಾಲ್ಗೊಂಡ ಅಕಾಡೆಮಿಗಳ ಅಧ್ಯಕ್ಷರ ನಡೆಯ ಬಗ್ಗೆಯೂ ಸಾಹಿತ್ಯ, ರಂಗಭೂಮಿ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದು, ಸಾಂಸ್ಕೃತಿಕ ಅಕಾಡೆಮಿಗಳು ಕಾಂಗ್ರೆಸ್ ಪಕ್ಷದ ಶಾಖೆಗಳೇ ಎಂದು ಪ್ರಶ್ನಿಸಿದ್ದಾರೆ.

ನಿಗಮ ಮಂಡಳಿಗಳ ಅಧ್ಯಕ್ಷರ ಜತೆಗೆ ವಿವಿಧ ಸಾಂಸ್ಕೃತಿಕ ಅಕಾಡೆಮಿಗಳ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರ ಜತೆಗೆ ಗುರುವಾರ ಸಭೆ ನಡೆಸಿದ್ದ ಡಿ.ಕೆ. ಶಿವಕುಮಾರ್, ‘ಈ ಹುದ್ದೆಗಳು ರಾಜಕಾರಣಕ್ಕೆ ಮೆಟ್ಟಿಲುಗಳಾಗಿದ್ದು, ಕೈ ಮತ್ತು ಬಾಯಿ ಶುದ್ಧವಾಗಿರಬೇಕು’ ಎಂದು ಕಿವಿಮಾತು ಹೇಳಿದ್ದರು. ಸಭೆಯಲ್ಲಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಮೊಹಮ್ಮದ್ ನಲಪಾಡ್, ರುಕ್ಸಾನಾ ಉಸ್ತಾದ್, ನಾರಾಯಣಸ್ವಾಮಿ, ಮುರುಳೀಧರ ಹಾಲಪ್ಪ ಪಾಲ್ಗೊಂಡಿದ್ದರು.

‘ಸಾಹಿತ್ಯ, ಕಲೆ, ಸಂಸ್ಕೃತಿ ಹಾಗು ಭಾಷೆಗೆ ಸಂಬಂಧಿಸಿದ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರನ್ನು ಕಾಂಗ್ರೆಸ್ ಪಕ್ಷದ ಕಚೇರಿಗೆ ಕರೆದು ಸಭೆ ನಡೆಸಿದ್ದು ಅತ್ಯಂತ ವಿಷಾದನೀಯ. ಪಕ್ಷದ ಕಚೇರಿಯಲ್ಲಿ ಆಯೋಜಿಸಿದ ಈ ಸಭೆಗೆ ಅಧ್ಯಕ್ಷರು ಹಾಗೂ ಸದಸ್ಯರು ಭಾಗವಹಿಸಿದ್ದನ್ನು ಒಪ್ಪಲಾಗದು’ ಎಂದು ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ. ಬೇಸರ ವ್ಯಕ್ತಪಡಿಸಿದ್ದಾರೆ.

‘ಈ ಹಿಂದೆ ಇಂತಹ ಘಟನೆ ನಡೆದ ನೆನಪಿಲ್ಲ. ಸಭೆಯನ್ನು ಸರ್ಕಾರದ ಕಚೇರಿಯಲ್ಲಿ, ವಿಧಾನಸೌಧದಲ್ಲಿ ಮಾಡಬಹುದಷ್ಟೆ. ಆಳುವ ಪಕ್ಷದ ಕಚೇರಿಯಲ್ಲಿ ಸಭೆ ಕರೆದು, ಉಪದೇಶ ನೀಡಿರುವುದು ಯಾವುದೇ ಕಾರಣಕ್ಕೂ ಸರಿಯಾದ ನಡೆಯಲ್ಲ. ಇದು ಸಾಂಸ್ಕೃತಿಕ ಅಧಃಪತನದ ಪರಾಕಾಷ್ಠೆಯಲ್ಲದೆ ಮತ್ತೇನೂ ಅಲ್ಲ’ ಎಂದು ಸಾಮಾಜಿಕ ಕಾರ್ಯಕರ್ತ ಸುರೇಂದ್ರ ರಾವ್ ಟಿ. ತಿಳಿಸಿದ್ದಾರೆ.

‘ಅಕಾಡೆಮಿ, ಪ್ರಾಧಿಕಾರಗಳು ಕಾಂಗ್ರೆಸ್ ಪಕ್ಷ, ಸರ್ಕಾರದ ಅಡಿಯಾಳುಗಳಲ್ಲ. ಅವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆ ಅಲ್ಲವೆ’ ಎಂದು ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್ ಪ್ರಶ್ನಿಸಿದ್ದಾರೆ.

‘ಸಾಂಸ್ಕೃತಿಕ ಅಕಾಡೆಮಿಗಳು ಕಾಂಗ್ರೆಸ್‌ನ ವಿಸ್ತರಣೆಯೆ? ಕುರ್ಚಿ ಏರಿದ ಮಾರನೆ ದಿನವೇ ಪಕ್ಷದ ಕಚೇರಿಯಲ್ಲಿ ಪಾಠ ಹೇಳಿಸಿಕೊಳ್ಳಲು ಹಾಜರಾದರೆ ಏನರ್ಥ? ನೈತಿಕತೆಯ ಒಂದು ಮೆಟ್ಟಿಲು ಇಳಿದಂತೆ ಎಂದಷ್ಟೇ ಅರ್ಥ’ ಎಂದು ಸಾಮಾಜಿಕ ಕಾರ್ಯಕರ್ತ ಸುರೇಶ ಕಂಜರ್ಪಣೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕಾಂಗ್ರೆಸ್ ಸರ್ಕಾರ ಅನಿಷ್ಠ ಪದ್ಧತಿಯನ್ನು ಹುಟ್ಟು ಹಾಕಿದೆ. ಇಲ್ಲಿಯವರೆಗೂ ಯಾವುದೇ ಪಕ್ಷದ ಸರ್ಕಾರವಿದ್ದರೂ ಪಕ್ಷದ ಕಚೇರಿಯಲ್ಲಿ ಸರ್ಕಾರಿ ಸಾಂಸ್ಕೃತಿಕ ಸಂಸ್ಥೆಗಳ ಸಭೆ ಕರೆದಿರಲಿಲ್ಲ. ಏಕೆಂದರೆ ಈ ಸಂಸ್ಥೆಗಳು ಸರ್ಕಾರದ ಅಧೀನದಲ್ಲಿವೆಯೇ ಹೊರತು ಯಾವುದೇ ಪಕ್ಷದ ಅಧೀನದಲ್ಲಿಲ್ಲ. ಸಾಂಸ್ಕೃತಿಕ ಸಂಸ್ಥೆಗಳನ್ನು ಕಾಂಗ್ರೆಸ್ಸೀಕರಣ ಮಾಡುವ ಹುನ್ನಾರವಾಗಿದೆ’ ಎಂದು ರಂಗಕರ್ಮಿ ಶಶಿಕಾಂತ್ ಯಡಹಳ್ಳಿ ತಿಳಿಸಿದ್ದಾರೆ.

‘ಖಾದರ್ ಸಾಮ್ರಾಜ್ಯದಲ್ಲಿ ಪಾಕ್ ಕುನ್ನಿಗಳಿವೆ’

ಪ್ರಜಾವಾಣಿ ವಾರ್ತೆ

ಮಂಗಳೂರು: 'ವಿಜಯೋತ್ಸವ ಮೆರವಣಿಗೆಯಲ್ಲಿ ಪಾಕಿಸ್ತಾನದ ಕುನ್ನಿಗಳೆ... ಎಂದು ಘೋಷಣೆ ಕೂಗಿದ್ದರೂ ಅದರಲ್ಲಿ ತಪ್ಪೇನಿದೆ? ಈ ಮಾತಿನಿಂದ ಪಾಕಿಸ್ತಾನಕ್ಕೆ ಹುಟ್ಟಿದವರು ಮಾತ್ರ ಪ್ರಚೋದನೆಗೆ ಒಳಗಾಗಬೇಕು. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಮಾತುಗಳನ್ನು ಕೇಳಿ, ಇಲ್ಲಿ ಯಾರೂ ಪಾಕಿಸ್ತಾನದ ಕುನ್ನಿಗಳಿಲ್ಲವೆಂದು ಭಾವಿಸಿದ್ದೆ. ಆದರೆ ಇಲ್ಲೂ ಅಂತಹವರಿದ್ದಾರೆ ಎಂದು ಸಾಬೀತಾಯಿತು' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ನರೇಂದ್ರ ಮೋದಿ ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನ ಉಳ್ಳಾಲ ತಾಲ್ಲೂಕಿನ ಬೋಳಿಯಾರ್‌ನಲ್ಲಿ ಏರ್ಪಡಿಸಿದ್ದ ವಿಜಯೋತ್ಸವ ಮೆರವಣಿಗೆ ಬಳಿಕ ಬಿಜೆಪಿ ಕಾರ್ಯಕರ್ತರಿಬ್ಬರಿಗೆ ಚೂರಿ ಇರಿದ ಘಟನೆಗೆ ಸಂಬಂಧಿಸಿದಂತೆ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಪಾಕಿಸ್ತಾನದ ಕುನ್ನಿಗಳೇ ಎಂದಿದ್ದಕ್ಕೆ ಪ್ರಚೋದಿತರಾಗಿ ಚೂರಿಯಿಂದ ಇರಿದಿದ್ದಾರೆ' ಎಂದು ಇಲ್ಲಿನ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಹೇಳಿದ್ದಾರೆ. ಅವರ ಹೇಳಿಕೆ ಸಮರ್ಥನೀಯವಲ್ಲ. ಅದನ್ನು ಹಿಂಪಡೆಯಬೇಕು. ಮುಸ್ಲಿಮರೆಲ್ಲ ಪಾಕಿಸ್ತಾನದ ಕುನ್ನಿಗಳು ಎಂದು ನಾನು ಭಾವಿಸಿಲ್ಲ. ಹಾಗೆ ಭಾವಿಸುವ ಮೂಲಕ ಮುಸ್ಲಿಮರನ್ನು ಕಮಿಷನರ್ ಅಪಮಾನಿಸಿದ್ದಾರೆ. ಕೆಲ ರಾಜಕಾರಣಿಗಳಿಗೆ ಮತಾಂಧರ ಓಲೈಸುವ ದುರ್ಗತಿ ಬರುತ್ತದೆ. ಪೊಲೀಸರಿಗೆ ಆ ದುರ್ಗತಿ ಬರಬಾರದು. ಅಗರ್ವಾಲ್ ಅವರು ಭಾರತದ ಪೊಲೀಸ್ ಅಧಿಕಾರಿಯೇ ಹೊರತು, ಪಾಕಿಸ್ತಾನದ ಅಧಿಕಾರಿಯಲ್ಲ. ಅವರು ಒತ್ತಡಕ್ಕೆ ಒಳಗಾಗಿದ್ದಾರೆ. ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಿ, ಮಸೀದಿಯವರು ಕೊಟ್ಟ ದೂರಿಗೆ ತಕ್ಷಣ ಬಿ–ವರದಿ ಸಲ್ಲಿಸಬೇಕು. ತಾವು ಮತೀಯ ಶಕ್ತಿ ಅಥವಾ ರಾಜಕೀಯ ಶಕ್ತಿಗಳ ಕೈಗೊಂಬೆಯಲ್ಲ ಎಂಬುದನ್ನು ಅಗರ್ವಾಲ್ ನಿರೂಪಿಸಬೇಕು' ಎಂದರು.

ಬಂದರು ಮಂಡಳಿಯ 'ಅಭಿವೃದ್ಧಿ' ಚಟುವಟಿಕೆಗಳಿಗೆ ಅಗತ್ಯ ಅನುಮೋದನೆಗೆ ತಾಕೀತು

₹10 ಕೋಟಿ ಠೇವಣಿಗೆ ಎನ್‌ಜಿಟಿ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಅರಣ್ಯ ಪ್ರದೇಶದಲ್ಲಿ ಕರ್ನಾಟಕ ಬಂದರು ಮಂಡಳಿಯು ಅಗತ್ಯ ಅನುಮೋದನೆ ಇಲ್ಲದೆ ಯಾವುದೇ ಚಟುವಟಿಕೆ ನಡೆಸುವಂತಿಲ್ಲ ಎಂದು ತಾಕೀತು ಮಾಡಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ), 'ಅರಣ್ಯ ಅನುಮೋದನೆಗೆ ಅರ್ಜಿ ಸಲ್ಲಿಸುವ ಮುನ್ನ ಮಂಡಳಿಯು ಅರಣ್ಯ ಇಲಾಖೆಯಲ್ಲಿ ₹10 ಕೋಟಿ ಠೇವಣಿ ಇಡಬೇಕು' ಎಂದು ಸೂಚಿಸಿದೆ.

₹2 ಸಾವಿರ ಕೋಟಿ ವೆಚ್ಚದಲ್ಲಿ ಕಾರವಾರದ ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣಾ ಯೋಜನೆಯನ್ನು ವಿರೋಧಿಸಿ ಸ್ಥಳೀಯ ಮೀನುಗಾರರು ಪ್ರತಿಭಟನೆ ನಡೆಸಿದ್ದರು. ಯೋಜನೆಯನ್ನು ವಿರೋಧಿಸಿ ಪ್ರದೀಪ್ ಬಾಬು ತಾಂಡೇಲ ಎಂಬುವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠದ ಮೊರೆ ಹೋಗಿದ್ದರು. ಪೀಠವು ಕರ್ನಾಟಕ ಸರ್ಕಾರ, ಕೇಂದ್ರ ಪರಿಸರ ಸಚಿವಾಲಯ, ಬಂದರು ಮಂಡಳಿಗೆ ನೋಟಿಸ್ ನೀಡಿತ್ತು.

'ಈ ಯೋಜನೆಗೂ ಬಂದರು ಮಂಡಳಿಯ ಅಭಿವೃದ್ಧಿ ಯೋಜನೆಗೂ ಸಂಬಂಧ ಇಲ್ಲ. ಇವೆರಡು ಪ್ರತ್ಯೇಕ ಯೋಜನೆಗಳು. ಬಂದರು ಮಂಡಳಿಯ ಯೋಜನೆಗೆ ಸರ್ವೆ ಸಂಖ್ಯೆ 42ರ ಅರಣ್ಯ ಬಳಕೆಗೆ ಅನುಮೋದನೆ ಕೋರಲಾಗಿದ್ದು, ಈವರೆಗೆ ಒಪ್ಪಿಗೆ ಸಿಕ್ಕಿಲ್ಲ' ಎಂದು ಬಂದರು ಮಂಡಳಿಯು ಪ್ರಮಾಣಪತ್ರ ಸಲ್ಲಿಸಿತ್ತು.

'ಬಂದರು ಹಾಗೂ ಮೀನುಗಾರಿಕೆ ತರಬೇತಿ ಸಂಸ್ಥೆಯನ್ನು ಕಾರವಾರದಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯ-ಮಂತ್ರಿಯವರು 2022–23ನೇ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಜಿಲ್ಲೆಯ ಜನರಿಗೆ ತರಬೇತಿ ನೀಡುವ ಹಾಗೂ ಕೌಶಲ ಬೆಳೆಸುವ ಸಂಸ್ಥೆ ಇದಾಗಿದೆ. ಇದಕ್ಕಾಗಿ ಸಂಸ್ಥೆ ನಿರ್ಮಿಸಲು ಉದ್ದೇಶಿಸಲಾಗಿದೆ. ಜತೆಗೆ, ಮಂಡಳಿಗೆ ಶಾಶ್ವತ ಕಟ್ಟಡದ ನಿರ್ಮಾಣವೂ ಆಗಬೇಕಿದೆ. ಈ ಕಾಮಗಾರಿಗಳನ್ನು ನಡೆಸಲು ಅರಣ್ಯ ಭೂಮಿ ಬಳಕೆಗೆ ಒಪ್ಪಿಗೆ ಕೇಳಲಾಗಿದೆ' ಎಂದುಪ್ರಮಾಣಪತ್ರದಲ್ಲಿಹೇಳಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿ ಆದೇಶ ನೀಡಿರುವ ನ್ಯಾಯಮೂರ್ತಿ ಪುಷ್ಪಾ ಸತ್ಯನಾರಾಯಣ ಹಾಗೂ ಡಾ.ಸತ್ಯಗೋಪಾಲ್ ಕೊರ್ಲಪಾಟಿ ಪೀಠವು, 'ಬಂದರು ಮಂಡಳಿಯ ಆಡಳಿತಾತ್ಮಕ ಕಟ್ಟಡ, ಅತಿಥಿ ಗೃಹ, ತರಬೇತಿ ಸಂಸ್ಥೆ, ವಿದ್ಯಾರ್ಥಿ ನಿಲಯ ಇತ್ಯಾದಿಗಳನ್ನು ಅರಣ್ಯ ಪ್ರದೇಶದ ಬದಲು ಬೇರೆ ಕಡೆಗಳಲ್ಲಿ ನಿರ್ಮಾಣ ಮಾಡಲು ಅವಕಾಶ ಇದೆ' ಎಂದು ಅಭಿಪ್ರಾಯಪಟ್ಟಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ (ಪಿಸಿಸಿಎಫ್) ಪತ್ರ ಬರೆದಿದ್ದ ಬಂದರು ಹಾಗೂ ಒಳನಾಡು ಜಲಸಾರಿಗೆ ನಿರ್ದೇಶಕರು, 'ಬೈತಖೋಲ್‌ನ ಸರ್ವೆ ಸಂಖ್ಯೆ 42ರಲ್ಲಿನ 15 ಅರಣ್ಯ ಪ್ರದೇಶದಲ್ಲಿ ವಿವಿಧ ನಿರ್ಮಾಣ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಉಳಿದ 14 ಎಕರೆಯನ್ನು ಪರಿಸರ ಪ್ರವಾಸೋದ್ಯಮದ ಮೀಸಲು ಪ್ರದೇಶವನ್ನಾಗಿ ಉಳಿಸಿಕೊಳ್ಳಲಾಗುತ್ತದೆ' ಎಂದಿದ್ದರು. ಮಂಡಳಿಯ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಲು ಅರಣ್ಯ ಅನುಮೋದನೆ ನೀಡುವಂತೆ 2020ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆಯಲಾಗುತ್ತದೆ ಎಂದೂ ತಿಳಿಸಿದ್ದರು. ಆರಂಭದಲ್ಲಿ ಬಂದರು ಮಂಡಳಿಯ ಚಟುವಟಿಕೆಗಳಿಗೆ 29 ಎಕರೆ ಅರಣ್ಯ ಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು.

ಬಂದರು ವಿಸ್ತರಣೆಗೆ ತಡೆ ನೀಡಿದ್ದ 'ಸುಪ್ರೀಂ'

ಕಾರವಾರದ ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣಾ ಯೋಜನೆಗೆ ಸಂಬಂಧಿಸಿದಂತೆ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳದಂತೆ ಸುಪ್ರೀಂ ಕೋರ್ಟ್ 2022ರ ಮಾರ್ಚ್ ತಿಂಗಳಲ್ಲಿ ಮೌಖಿಕ ತಡೆ ನೀಡಿತ್ತು.

ಯೋಜನೆಗೆ ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ತಜ್ಞರ ಸಲಹಾ ಸಮಿತಿಯ (ಇಎಸಿ)ಯ ಶಿಫಾರಸಿನ ಮೇರೆಗೆ ಪೂರ್ವಭಾವಿ ಪರಿಸರ ಅನುಮತಿ ಪಡೆದು ಅವಕಾಶ ನೀಡಬೇಕಿದೆ. ಹಾಗಾಗಿ, ಯೋಜನೆಯನ್ನು ಸ್ಥಗಿತಗೊಳಿಸಿ ಯಥಾಸ್ಥಿತಿಗೆ ಆದೇಶಿಸಬೇಕು ಎಂಬ ಅರ್ಜಿದಾರರ ಮನವಿಗೆ ಸಮ್ಮತಿ ನೀಡಿದ್ದ ಪೀಠ, ಈ ಕುರಿತ ಪರಿಶೀಲನೆಗೆ ಒಪ್ಪಿಗೆ ಸೂಚಿಸಿತ್ತು.

ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ ಬೈತಖೋಲ್ ಬಂದರು ನಿರಾಶ್ರಿತರ ಯಾಂತ್ರೀಕೃತ ದೋಣಿ ಮೀನುಗಾರರ ಸಹಕಾರ ಸಂಘವು, '2019ರ ಜನವರಿ 23ರಂದು ರಾಜ್ಯ ಮಟ್ಟದ ಅಧಿಕಾರಿಗಳಿಂದ ಪಡೆಯಲಾದ ಪರಿಸರ ಅನುಮತಿ ಸಹಾಯದೊಂದಿಗೆ ನಿರ್ಮಾಣ ಚಟುವಟಿಕೆ ಆರಂಭಿಸಲಾಗಿದೆ. ಇದು 2006ರ ಸೆಪ್ಟೆಂಬರ್ 14ರಂದು ಹೊರಡಿಸಲಾದ ಪರಿಸರದ ಮೇಲಾಗುವ ಪರಿಣಾಮಗಳ ಮೌಲ್ಯಮಾಪನ ಕುರಿತ ಅಧಿಸೂಚನೆಯನ್ನು ಉಲ್ಲಂಘಿಸಿದೆ' ಎಂದು ಅರ್ಜಿಯಲ್ಲಿ ದೂರಿತ್ತು.

ಕಾರವಾರವು ಪರಿಸರ ಸೂಕ್ಷ್ಮ ಪ್ರದೇಶವಾಗಿದ್ದು, ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಕರಾವಳಿ ಮತ್ತು ಕಡಲತೀರಗಳ ನೈಸರ್ಗಿಕ ಸೌಂದರ್ಯವು ಪ್ರವಾಸಿಗರನ್ನು ಆಕರ್ಷಿಸುತ್ತದೆ. ವಾಣಿಜ್ಯ ಬಂದರಿನ 2ನೇ ಹಂತದ ವಿಸ್ತರಣೆಗೆ ರಾಜ್ಯ ಮಟ್ಟದ ಪ್ರಾಧಿಕಾರ ನೀಡಿರುವ ಪರಿಸರ ಅನುಮತಿಯು ಕಾನೂನು ಬಾಹಿರವಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಕೃಷ್ಣಮೃಗ ಮಾಂಸ, ಚರ್ಮ ಸಾಗಿಸುತ್ತಿದ್ದ ಏಳು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಕೃಷ್ಣಮೃಗವನ್ನು ಬೇಟೆಯಾಡಿ ಕಾರಿನಲ್ಲಿ ಸಾಗಿಸುತ್ತಿದ್ದ ಏಳು ಮಂದಿ ಆರೋಪಿಗಳನ್ನು ಇಲ್ಲಿನ ಉಪವಲಯ ಅರಣ್ಯಾಧಿಕಾರಿಗಳು ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

'ರಾಯಬಾಗ ತಾಲ್ಲೂಕಿನ ಕಡಕಬಾವಿ ಗ್ರಾಮದ ಸುಭಾಷ ಸಿದ್ದಪ್ಪ ಪಿಡಾಯಿ (23), ಬ್ಯಾಕೋಡ ಗ್ರಾಮದ ಸುರೇಶ ನಿಂಗಪ್ಪ ಪಕಾಂಡೆ (21), ಚೇತನ ಹಣಮಂತ ಬಿದರಿ (24), ಕಂಕಣವಾಡಿ ಗ್ರಾಮದ ನಿಂಗಪ್ಪ ಲಕ್ಷ್ಮಣ ಪಡತಾರೆ (24), ದೇವಪ್ಪರಟ್ಟಿ ಗ್ರಾಮದ ಪ್ರಜ್ವಲ ಬಾಳಪ್ಪ ಮೆಳವಂಕಿ (18), ರಬಕವಿ-ಬನಹಟ್ಟಿ ತಾಲ್ಲೂಕಿನ ಹಳಿಂಗಳಿ ಗ್ರಾಮದ ಶಬ್ಬೀರ್ ಅಬ್ದುಲ್‌ಸಾಬ್ ಗುಡ್ಡದಮನಿ (25), ರಮಜಾನಸಾಬ್ ಇಮಾಮ್‌ಸಾಬ್ ಅಲಸ್ (25) ಬಂಧಿತರು. ಹಳಿಂಗಳಿ ಗ್ರಾಮದ ಲಾಲಸಾಬ್ ಸರ್ದಾರಸಾಬ್ ಗುಡ್ಡದಮನಿ, ಹನಗಂಡಿ ಗ್ರಾಮದ ರಮಜಾನ್‌ಸಾಬ್ ಇಸ್ಮಾಯಿಲ್‌ಸಾಬ್ ಅಲಾಸ್ ತಪ್ಪಿಸಿಕೊಂಡಿದ್ದಾರೆ' ಎಂದು ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಕೃಷ್ಣ ಮೃಗದ 13.5 ಕೆ.ಜಿ ಮಾಂಸ ಮತ್ತು ಚರ್ಮ, ನಾಲ್ಕು ಮೊಬೈಲ್ ಫೋನ್, ಕಾರು, ನಾಲ್ಕು ಬೇಟೆ ನಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿಸಿಎಫ್‌ಪಿ ಶ್ರೀಧರ ನೇತೃತ್ವದಲ್ಲಿ ಎಸಿಎಫ್ ರಾಜೇಶ್ವರಿ ಈರನಟ್ಟಿ, ಆರ್‌ಎಫ್‌ಒ ಪವನ ಕುರನಿಂಗ, ಹಣಮಂತ ಡೋಣಿ, ಡಿವೈಆರ್‌ಎಫ್‌ಒ ಅಶ್ವಿನಿ ಮಾನಮಿ, ಅರಣ್ಯಾಧಿಕಾರಿ ಆರ್.ಬಿ. ಮೆತ್ರಿ, ಎಸ್.ಎಚ್. ಕುಳಲಿ, ನಿರೀಕ್ಷಕ ಸದಾಶಿವ ಮಾಂಗ ಅವರಿದ್ದ ತಂಡ ಕಾರ್ಯಾಚರಣೆ ನಡೆಸಿತು.

ರಸ್ತೆ ಅಪಘಾತ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಹೊರವಲಯದ ಕಪನಯ್ಯನದೊಡ್ಡಿ ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿ ಕಾರು ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರಿನ ಇಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ವಿದ್ಯಾರಣ್ಯಪುರದಲ್ಲಿ ವಾಸವಾಗಿದ್ದ ಆಂಧ್ರಪ್ರದೇಶದ ಕುಪ್ಪಂ ಮೂಲದ ವಿಶ್ವ (20) ಮತ್ತು ತಮಿಳುನಾಡು ಮೂಲದ ಸೂರ್ಯ (21) ಮೃತರು. ಕಾರು ಚಾಲನೆ ಮಾಡುತ್ತಿದ್ದ ಸ್ಥಳೀಯ ವಿದ್ಯಾರಣ್ಯಪುರದ ಸುಹಾಸ್ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಳೆ: ರಾಜ್ಯದಲ್ಲಿ ಡೆಂಗಿ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಮಳೆ ಕಾಣಿಸಿಕೊಂಡ ಬಳಿಕ ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಳವಾಗಿದ್ದು, ಕಳೆದ ಒಂದು ತಿಂಗಳ ಅವಧಿಯಲ್ಲಿ ಎರಡು ಸಾವಿರಕ್ಕೂ ಅಧಿಕ ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ.

ಈಡಿಸ್ ಎಂಬ ಸೊಳ್ಳೆ ಕಡಿತದಿಂದ ಈ ಜ್ವರ ಬರಲಿದ್ದು, ಬಿಸಿಲು ಜತೆಗೆ ಮಳೆ ಬರುತ್ತಿರುವುದರಿಂದಾಗಿ ಡೆಂಗಿ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ರಾಜ್ಯದಲ್ಲಿ ಡೆಂಗಿ ಪ್ರಕರಣಗಳ ಪತ್ತೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ಈ ವರ್ಷ ಈಗಾಗಲೇ 87 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಿದೆ. ಅವರಲ್ಲಿ 39 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 4,886ಕ್ಕೆ ತಲುಪಿದೆ. ಕಳೆದ ತಿಂಗಳು ಈ ವೇಳೆ ಒಟ್ಟು 2,877 ಪ್ರಕರಣಗಳು ವರದಿಯಾಗಿದ್ದವು.

2023ರಲ್ಲಿ 16,500ಕ್ಕೂ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. 9 ಮಂದಿ ಮೃತಪಟ್ಟಿದ್ದರು. ಜೂನ್ ಬಳಿಕ ಪ್ರಕರಣಗಳ ಸಂಖ್ಯೆ ಗಣನೀಯ ಏರಿಕೆಯಾಗಿತ್ತು. ಈ ವರ್ಷವೂ ಜೂನ್‌ನಲ್ಲಿ ಏರಿಕೆ ಕಂಡಿದೆ.

ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 4,063 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದ್ದು, ಅವರಲ್ಲಿ 1,230 ಮಂದಿಯಲ್ಲಿ ಈ ಜ್ವರ ಖಚಿತಪಟ್ಟಿದೆ. ಮೈಸೂರು (377), ಚಿಕ್ಕಮಗಳೂರು (346), ಹಾವೇರಿ (272), ಶಿವಮೊಗ್ಗ (236), ಚಿತ್ರದುರ್ಗ (229), ದಕ್ಷಿಣ ಕನ್ನಡ (211) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ದೃಢಪಟ್ಟಿವೆ.

ಚಿಕೂನ್‌ಗುನ್ಯಾವೂ ಏರಿಕೆ: 27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 28 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 12 ಸಾವಿರಕ್ಕೂ ಅಧಿಕ ಜನರ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 813 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ಶಿವಮೊಗ್ಗ (147), ವಿಜಯಪುರ (98) ಹಾಗೂ ಮೈಸೂರು (82) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದೆಡೆ ಈ ಸಂಖ್ಯೆ 50ಕ್ಕಿಂತ ಕಡಿಮೆಯಿದೆ.

ಸೊಳ್ಳೆ ಕಚ್ಚಿದ ನಾಲ್ಕರಿಂದ ಹತ್ತು ದಿನಗಳ ಒಳಗೆ ರೋಗ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ರೋಗ ಲಕ್ಷಣಗಳಿಗೆ ಅನುಸಾರ ಚಿಕಿತ್ಸೆ ನೀಡಲಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಭೀಕರ ಅಪಘಾತ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ರಾಷ್ಟ್ರೀಯ ಹೆದ್ದಾರಿ 48ರ ಚಿಕ್ಕಬೆನ್ನೂರು ಗ್ರಾಮದ ಬಳಿ ಶನಿವಾರ ಬೆಳಿಗ್ಗೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಮತ್ತೊಬ್ಬರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಪ್ರಜ್ವಲ್ ರೆಡ್ಡಿ (30), ಹರ್ಷಿತಾ (26) ಹಾಗೂ ಸೋಹನ್ (2) ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ವಿಜಯರೆಡ್ಡಿ ಎಂಬುವರು ದಾವಣಗೆರೆಯ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಶಿಲ್ಪಾ, ಸ್ವರ್ಣ ಜಾರ್ಜ್, ಮಧುಮಿತ ಮತ್ತು ಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

ಕಾರಿನಲ್ಲಿ ಒಟ್ಟು 8 ಜನ ಇದ್ದರು. ಇವರೆಲ್ಲರೂ ಬೆಂಗಳೂರಿನ ಥಣಿಸಂದ್ರ ನಿವಾಸಿಗಳು ಎಂದು ಹೇಳಲಾಗಿದೆ. ವಾರಾಂತ್ಯದ ರಜೆ ಕಳೆಯಲು ಬೆಂಗಳೂರಿನಿಂದ ಗೋವಾಕ್ಕೆ ತೆರಳುತ್ತಿದ್ದರು.

ಹೆದ್ದಾರಿಯ ಮೂಲಕ ಚಿತ್ರದುರ್ಗದಿಂದ ದಾವಣಗೆರೆಗೆ ತೆರಳುತ್ತಿದ್ದ ಕಂಟೇನರ್ ಲಾರಿಯ ಟಯರ್ ಸಿಡಿದಿದೆ. ಅದರ ಹಿಂದೆಯೇ ವೇಗವಾಗಿ ಬರುತ್ತಿದ್ದ ಫಾರ್ಚೂನರ್ ಕಾರು ಚಾಲಕನ ನಿಯಂತ್ರಣ ತಪ್ಪಿ ಕಂಟೇನರ್‌ಗೆ ಡಿಕ್ಕಿ ಹೊಡೆದಿದೆ. ಲಾರಿ ಮತ್ತು ಕಾರು ಜಖಂಗೊಂಡಿವೆ. ಭರಮಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ಯಾಂಕರ್ ಸ್ವಚ್ಛತೆಗೂ ಸರ್ಕಾರದಲ್ಲಿ ಹಣವಿಲ್ಲ– ಆರ್. ಅಶೋಕ

'ನೀರು ನೀಡುವ ಯೋಗ್ಯತೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟ್ಯಾಂಕರ್‌ಗಳನ್ನು ಸ್ವಚ್ಛ-ಗೊಳಿಸಲು ಸರ್ಕಾರದ ಬಳಿ ಹಣವಿಲ್ಲ. ಜನರಿಗೆ ಶುದ್ಧ ಕುಡಿಯುವ ನೀರು ನೀಡುವ ಯೋಗ್ಯತೆ ಕೂಡ ರಾಜ್ಯ ಸರ್ಕಾರಕ್ಕೆ ಇಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರ ವರುಣ ಕ್ಷೇತ್ರದಲ್ಲೇ ಕಲುಷಿತ ನೀರು ಕುಡಿದುಜನರು ಮೃತಪಟ್ಟಿದ್ದಾರೆ. ತುಮಕೂರಿನಲ್ಲೂ ಕಲುಷಿತ ನೀರು ಸೇವಿಸಿ 6 ಜನರ ಸಾವಾಗಿದೆ. ಜಿಲ್ಲಾಧಿಕಾರಿಯನ್ನು ಕೇಳಿದರೆ ಮೂತ್ರ ಪಿಂಡ ಸಮಸ್ಯೆ ಎಂದು ಹೇಳಿದ್ದಾರೆ. ಈ ಕುರಿತು ವರದಿ ಕೇಳಿದ್ದೇನೆ' ಎಂದರು.

'ಕೊಪ್ಪಳದಲ್ಲೂ ಕೂಡ ಕಲುಷಿತ ನೀರು ಸೇವಿಸಿ ಕೆಲವರು ಆಸ್ಪತ್ರೆ ಸೇರಿದ್ದಾರೆ. ಶಾಸಕರು ಅನುದಾನ ಕೇಳಿದರೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಾಯ್ಮುಚ್ಚಿಕೊಂಡು ಸುಮ್ಮನಿರಿ ಎಂದಿದ್ದಾರೆ. ಜನರ ಸಾವಿಗೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ' ಎಂದರು.

ಟ್ಯಾಂಕರ್ ಮಾಫಿಯಾ: 'ಹೈಕಮಾಂಡ್‌ಗೆ ಹಣ ಕಳುಹಿಸಲು ಕಾಂಗ್ರೆಸ್ ಸರ್ಕಾರ ಟ್ಯಾಂಕರ್ ಮಾಫಿಯಾವನ್ನು ಬಳಸಿಕೊಂಡಿದೆ' ಎಂದು ದೂರಿದ ಅಶೋಕ, 'ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನದಲ್ಲಿ ಶೇ 25ರಷ್ಟು ಕಡಿತ ಮಾಡಿರುವುದರಿಂದ ಮೂಲಸೌಕರ್ಯ ಒದಗಿಸಲು ಅಡ್ಡಿಯಾಗಿದೆ. ಮುಖ್ಯಮಂತ್ರಿಯ ಸೂಚನೆಗೆ ಬೆಲೆ ನೀಡದೆ ಅಧಿಕಾರಿಗಳು ಕೈ ಚೆಲ್ಲಿದ್ದಾರೆ. ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ' ಎಂದರು.

'ಬಿಜೆಪಿ ಸರ್ಕಾರದ ವಿರುದ್ಧ ಶೇ 40 ಲಂಚದ ಆರೋಪ ಮಾಡಿದ್ದರೂ ಅದನ್ನು ಸಾಬೀತುಪಡಿಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಿಲ್ಲ' ಎಂದೂ ಹೇಳಿದರು.

ದ್ವೇಷದ ರಾಜಕಾರಣ: 'ಬಿ.ಎಸ್. ಯಡಿಯೂರಪ್ಪ ಅವರ ವಿಚಾರದಲ್ಲಿ ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ. ಡಿ.ಕೆ. ಶಿವಕುಮಾರ್ ಅವರಂತೂ ಇದನ್ನು ನೇರವಾಗಿ ಒಪ್ಪಿಕೊಂಡಿದ್ದಾರೆ. ಕರ್ನಾಟಕದಲ್ಲಿ ದ್ವೇಷ ರಾಜಕಾರಣ ಈವರೆಗೆ ಇರಲಿಲ್ಲ. ಯಡಿಯೂರಪ್ಪ ವಿರುದ್ಧ ದೂರು ನೀಡಿದ್ದ ಮಹಿಳೆ ಮಾನಸಿಕ ಅಸ್ವಸ್ಥೆ ಎಂದು ಗೃಹ ಸಚಿವರೇ ಹೇಳಿದ್ದರೂ, ಚುನಾವಣೆಯ ಬಳಿಕ ರಾಜಕೀಯ ದ್ವೇಷ ಸಾಧಿಸಲಾಗಿದೆ' ಎಂದು ದೂರಿದರು.

ವಿಜಯಕುಮಾರ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ



ಆಳಂದ (ಕಲಬುರಗಿ ಜಿಲ್ಲೆ): ಕುವೈತ್ ಅಗ್ನಿ ದುರಂತದಲ್ಲಿ ಮೃತಪಟ್ಟ ತಾಲ್ಲೂಕಿನ ಸರಸಂಬಾ ಗ್ರಾಮದ ವಿಜಯಕುಮಾರ (43) ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನೆರವೇರಿತು.

ಪಾರ್ಥಿವ ಶರೀರವನ್ನು ಶನಿವಾರ ಬೆಳಿಗ್ಗೆ ಹೈದರಾಬಾದ್‌ನಿಂದ ಗ್ರಾಮಕ್ಕೆ ತರಲಾಯಿತು. ವಿಜಯಕುಮಾರ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಸಲಹೆಗಾರ, ಶಾಸಕ ಬಿ.ಆರ್.ಪಾಟೀಲ್, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಸೇರಿ ಹಲವರು ಪುಷ್ಪ ನಮನ ಸಲ್ಲಿಸಿದರು.

ಕುಟುಂಬದವರ ಕಣ್ಣೀರ ಧಾರೆ ನಡುವೆ ಅಂತ್ಯಕ್ರಿಯೆ ನಡೆಯಿತು.

ಎರಡು ಮೇಕೆ ₹ 2.30 ಲಕ್ಷಕ್ಕೆ ಮಾರಾಟ!

ಪ್ರಜಾವಾಣಿ ವಾರ್ತೆ

ರಾಯಬಾಗ(ಬೆಳಗಾವಿ ಜಿಲ್ಲೆ): ಬಕ್ರೀದ್ ಹಿನ್ನೆಲೆಯಲ್ಲಿ ತಾಲ್ಲೂಕಿನ ಸುಟ್ಟಟ್ಟಿ ಗ್ರಾಮದಲ್ಲಿ ರೈತ ಮಹೇಶ ಖೋತ ಅವರಿಗೆ ಸೇರಿದ ಎರಡು ಮೇಕೆಗಳು ಒಟ್ಟು ₹2.30 ಲಕ್ಷಕ್ಕೆ ಮಾರಾಟವಾಗಿವೆ.

'ಸಾಮಾನ್ಯವಾಗಿ ಮೇಕೆ ದರ ₹10 ಸಾವಿರ ದಿಂದ ₹25 ಸಾವಿರ ಇರುತ್ತದೆ. ಆದರೆ ನನ್ನ ಎರಡೂ ಮೇಕೆಗಳು ಕ್ರಮವಾಗಿ ₹1.20 ಲಕ್ಷ ಮತ್ತು ₹1.10 ಲಕ್ಷಕ್ಕೆ ಮಾರಾಟವಾಗಿವೆ. ಮಹಾರಾಷ್ಟ್ರದ ಕೊಲ್ಹಾಪುರ ಮತ್ತು ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾದ ಗ್ರಾಹಕರು ಖರೀದಿಸಿದರು' ಎಂದು ಮಹೇಶ ಖೋತ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮದು ಅವಿಭಕ್ತ ಕುಟುಂಬ. 25 ಹೆಣ್ಣು ಮತ್ತು 12 ಗಂಡು ಮೇಕೆಗಳಿವೆ. ಈದ್ ಉಲ್ ಫಿತ್ರ್, ಬಕ್ರೀದ್ ಮತ್ತಿತರ ಹಬ್ಬಗಳ ಸಂದರ್ಭಗಳಲ್ಲಿ ಮಾರಲು ಮೇಕೆಗಳನ್ನು ಸಾಕುತ್ತೇವೆ' ಎಂದರು.

'ರಾಯಬಾಗ ತಾಲ್ಲೂಕಿನ ಮೇಕೆಗಳಿಗೆ ಹೆಚ್ಚು ಬೇಡಿಕೆಯಿದೆ. ಬಕ್ರೀದ್ ಹಿನ್ನೆಲೆಯಲ್ಲಿ ದುಬಾರಿ ಬೆಲೆ ಕೊಟ್ಟು ಗ್ರಾಹಕರು ಖರೀದಿಸುತ್ತಾರೆ' ಎಂದು ಪಶು ವೈದ್ಯಾಧಿಕಾರಿ ಡಾ.ಪ್ರದೀಪ ಮೊಳವಾಡ ಹೇಳಿದರು.



ರಾಯಬಾಗ ತಾಲ್ಲೂಕಿನ ಸುಟ್ಟಟ್ಟಿಯಲ್ಲಿ ರೈತ ಮಹೇಶ ಖೋತ ಎಂಬುವರು ₹1.20 ಲಕ್ಷಕ್ಕೆ ಮಾರಾಟ ಮಾಡಿರುವ ಮೇಕೆ

ಆರೋಗ್ಯ ಇಲಾಖೆ: ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಪ್ರಸಕ್ತ ಸಾಲಿನಲ್ಲಿ (2024-25) ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ಪ್ರಕ್ರಿಯೆ ನಡೆಯಲಿದೆ. 2016ರ ಬಳಿಕ ಎಲ್ಲ ವೃಂದಗಳಲ್ಲಿ (ಗ್ರೂಪ್ 'ಎ', 'ಬಿ', 'ಸಿ', 'ಡಿ') ಪೂರ್ಣ ಪ್ರಮಾಣದಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಡೆಸಿ, ಅರ್ಹ ವೈದ್ಯರು, ಸಿಬ್ಬಂದಿಗೆ ನ್ಯಾಯ ಒದಗಿಸಲು ಇಲಾಖೆ ನಿರ್ಧರಿಸಿದೆ.


ವರ್ಗಾವಣೆ ಸಂಬಂಧ ಮಾರ್ಗಸೂಚಿ ಸಹಿತ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಜುಲೈ 31ರ ಒಳಗೆ ಪ್ರಕ್ರಿಯೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇಲಾಖೆಯಲ್ಲಿ ಗುರುತಿಸಿರುವ ತಜ್ಞ ಹುದ್ದೆಗಳಲ್ಲಿ ವೈದ್ಯರು ಪರಿಣಿತಿಗೆ ಅನುಗುಣವಾಗಿ ಕಾರ್ಯನಿರ್ವಹಿಸದೆ ಬೇರೆ ಪರಿಣಿತಿ ಅಥವಾ ಇತರೆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ತಜ್ಞ ವೈದ್ಯರ ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

3 ವರ್ಷ ಸೇವಾವಧಿ ಪೂರೈಸಿದ ವೈದ್ಯರು, ನಾಲ್ಕು ವರ್ಷ ಪೂರೈಸಿರುವ ಗ್ರೂಪ್ 'ಬಿ' ನೌಕರರು, ಐದು ವರ್ಷ ಪೂರೈಸಿದ ಗ್ರೂಪ್ 'ಸಿ' ನೌಕರರು ಮತ್ತು ಏಳು ವರ್ಷ ಸೇವಾವಧಿ ಪೂರೈಸಿರುವ ಗ್ರೂಪ್ 'ಡಿ' ನೌಕರರು ಜೂನ್ ತಿಂಗಳ ಅಂತ್ಯದೊಳಗೆ ಮಾಹಿತಿ ನೀಡುವಂತೆ ತಿಳಿಸಲಾಗಿದೆ. ಈ ಸೇವಾವಧಿ ಪೂರೈಸಿರುವ ವೈದ್ಯರು, ಸಿಬ್ಬಂದಿ ಹುದ್ದೆಗಳಿಗೆ ಮಾತ್ರ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಡೆಸಲು ಅವಕಾಶ ಕಲ್ಪಿಸಲಾಗಿದೆ.

ನಿಧನ ವಾರ್ತೆ

ಸಗ್ರಿ ರಾಘವೇಂದ್ರ ಉಪಾಧ್ಯಾಯ



ಉಡುಪಿ: ವಿದ್ವಾಂಸ ಸಗ್ರಿ ರಾಘವೇಂದ್ರ ಉಪಾಧ್ಯಾಯ (72) ಅವರು ಶನಿವಾರ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಪತ್ನಿ, ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.


ಬೆಂಗಳೂರಿನಲ್ಲಿ ಶ್ರೀಭಂಡಾರಕೇರಿ ಮಠದ ವತಿಯಿಂದ ಶುಕ್ರವಾರ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಪ್ರವಚನ ನೀಡುತ್ತಿದ್ದಾಗ ಅವರು ಕುಸಿದು ಬಿದ್ದು ಅಸ್ವಸ್ಥಗೊಂಡಿದ್ದರು.

ಉಡುಪಿಯ ಅಷ್ಟಮಠಗಳ ಆಸ್ಥಾನ ವಿದ್ವಾಂಸರೂ ಆಗಿದ್ದ ಸಗ್ರಿ ರಾಘವೇಂದ್ರ ಅವರು, ಶ್ರೀ ಮನ್ನಧ್ವ ಸಿದ್ಧಾಂತ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸುದೀರ್ಘ ಅವಧಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ಮಠಗಳಿಂದ ಪ್ರಕಟವಾಗುತ್ತಿದ್ದ ಸುಗುಣಮಾಲಾ, ಸರ್ವಮೂಲ ತತ್ತ್ವವಾದ ಮೊದಲಾದ ಅನೇಕ ಮಾಸಪತ್ರಿಕೆಗಳಲ್ಲಿ ನಿರಂತರ ಆಧ್ಯಾತ್ಮಿಕ ಚಿಂತನೆಗಳಿಗೆ ಸಂಬಂಧಿಸಿದ ಅಂಕಣಗಳನ್ನು ಬರೆಯುತ್ತಿದ್ದರು.

ಬೆಂಗಳೂರಿನಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ಪತ್ರಕರ್ತ ಮತ್ತಿಹಳ್ಳಿ ಮದನ ಮೋಹನ



ಹುಬ್ಬಳ್ಳಿ: ಪತ್ರಕರ್ತ ಮತ್ತಿಹಳ್ಳಿ ಮದನ ಮೋಹನ (83) ಅವರು ನಗರದ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಇಲ್ಲಿನ ಪತ್ರಕರ್ತರ ನಗರದಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕೇಶ್ವಾಪುರದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

'ದಿ ಹಿಂದು' ಪತ್ರಿಕೆಯಲ್ಲಿ 47 ವರ್ಷ ಕಾರ್ಯನಿರ್ವಹಿಸಿದ ಅವರು, ನಿವೃತ್ತಿ ನಂತರವೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿವಿಧ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ಕೆಲ ವರ್ಷಗಳಿಂದ ಶಾಸ್ತ್ರ ಅಧ್ಯಯನದಲ್ಲಿ ತೊಡಗಿದ್ದರು.

ಬಳ್ಳಾರಿ ಜಿಲ್ಲೆಯ ಹರಪ್ಪನಹಳ್ಳಿಯ ಮತ್ತಿಹಳ್ಳಿ ಗ್ರಾಮದ ಅವರು, ಪತ್ರಕರ್ತರಾಗಿ ಹುಬ್ಬಳ್ಳಿ, ಬೆಳಗಾವಿ, ಗೋವಾದಲ್ಲಿ ಕಾರ್ಯನಿರ್ವಹಿಸಿದರು. ಹುಬ್ಬಳ್ಳಿಯಲ್ಲಿ ಉತ್ತರ ಕರ್ನಾಟದ ವಿಶೇಷ ವರದಿಗಾರರಾಗಿದ್ದ ಅವರು 2005ರಲ್ಲಿ ನಿವೃತ್ತರಾದರು.

ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಇದ್ದರೂ ಕನ್ನಡದಲ್ಲಿ ಲೇಖನ ಬರೆಯುತ್ತಿದ್ದರು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಅಧಿಕಾರ ವಿಕೇಂದ್ರಿಕರಣ, ಜಲಸಂಪನ್ಮೂಲ, ಪ್ರಾದೇಶಿಕ ಅಸಮಾನತೆ ಕುರಿತು ನಿರಂತರ ಲೇಖನಗಳನ್ನು ಬರೆದ ಅವರು, ನೀರಾವರಿ ಯೋಜನೆಗಳು ಮತ್ತು ಕೃಷ್ಣಾ ಜಲ ವಿವಾದದ ಬಗ್ಗೆ ಅಪಾರ ತಿಳಿವಳಿಕೆ ಹೊಂದಿದ್ದರು.

ಮದನ ಮೋಹನ ಅವರ ತಂದೆ ರಾಘವೇಂದ್ರರಾವ್ 'ದಿ ಹಿಂದು' ಪತ್ರಿಕೆಯ ಬಳ್ಳಾರಿ ವರದಿಗಾರರಾಗಿದ್ದರು. ಮದನ ಮೋಹನ ಅವರ ಪುತ್ರ ಮತ್ತಿಹಳ್ಳಿ ರಾಘವ ಕೂಡ 'ದಿ ಹಿಂದು' ಪತ್ರಿಕೆಯಲ್ಲಿ ಪತ್ರಕರ್ತರಾಗಿದ್ದಾರೆ.

ಮಾಜಿ ಶಾಸಕ ಡಾ. ಬಿ.ಜಿ.ಪಾಟೀಲ



ರಾಣೆಬೆನ್ನೂರು: ಕ್ಷೇತ್ರದ ಮಾಜಿ ಶಾಸಕ ಡಾ. ಬಿ.ಜಿ. ಪಾಟೀಲ (90) ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ. ನಗರದ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಬಳ್ಳಾರಿಯಲ್ಲಿ ಎಲ್‌ಎಎಂಎಸ್ ವೈದ್ಯಕೀಯ ಕೋರ್ಸ್ ಪೂರ್ಣಗೊಳಿಸಿದ ಡಾ. ಬಿ.ಜಿ. ಪಾಟೀಲ ಅವರು ತಮ್ಮ ಹುಟ್ಟೂರು ತಾಲ್ಲೂಕಿನ ಹಲಗೇರಿಯಲ್ಲಿ ಮೃತ್ಯುಂಜಯ ಕ್ಲಿನಿಕ್ ಆರಂಭಿಸಿದರು.

1968-69ರಲ್ಲಿ ತಾಲ್ಲೂಕು ಬೋರ್ಡ್ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದರು.1983ರ ವಿಧಾನಸಭೆ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದರು. ಎಂಜಿನಿಯರ್ ನೇಮಕಾತಿ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಆರ್. ಬೊಮ್ಮಾಯಿ ಅವರ ಆತ್ಮೀಯ-ರಾಗಿದ್ದ ಅವರು 1985ರಲ್ಲಿ ಧಾರವಾಡ ಜಿಲ್ಲಾ ಪರಿಷತ್‌ನ ಅಧ್ಯಕ್ಷರಾಗಿದ್ದರು.

'ಚನ್ನಪಟ್ಟಣದ ಮೇಲೆ ಡಿ.ಕೆ. ಸಹೋದರರ ವಕ್ರದೃಷ್ಟಿ'

ಚನ್ನಪಟ್ಟಣ (ರಾಮನಗರ): 'ನಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ದುರಹಂಕಾರದ ಮಾತುಗಳನ್ನಾಡುತ್ತಿದ್ದ ಡಿ.ಕೆ. ಸಹೋದರರಿಗೆ ಲೋಕಸಭಾ ಚುನಾವಣೆಯಲ್ಲಿ ನೀವೆಲ್ಲಾ ಸರಿಯಾಗಿಯೇ ಪಾಠ ಕಲಿಸಿದ್ದೀರಿ. ಇದೀಗ ಅವರ ವಕ್ರದೃಷ್ಟಿ ಚನ್ನಪಟ್ಟಣದ ಮೇಲೆ ಬಿದ್ದಿದೆ. ದುರಹಂಕಾರಿಗಳು ಮತ್ತು ದೌರ್ಜನ್ಯ ಮಾಡುವವರ ಬಗ್ಗೆ ಎಚ್ಚರಿಕೆ ಇರಲಿ' ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಪಟ್ಟಣದಲ್ಲಿ ಶನಿವಾರ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಸಮಾರಂಭದಲ್ಲಿ ಡಿ.ಕೆ.ಸಹೋದರರ ವಿರುದ್ಧ ವಾಗ್ದಾಳಿ ನಡೆಸಿದರು. 'ಕ್ಷೇತ್ರದ ಜನರನ್ನು ಬೆದರಿಸಿ ತಮ್ಮತ್ತ ಎಳೆದುಕೊಳ್ಳಲು ಸಹೋದರರಿಗೆ ಸಾಧ್ಯವಿಲ್ಲ. ಯಾಕೆಂದರೆ, ಇಲ್ಲಿಗೆ ಮಂಡ್ಯದ ಗಾಳಿಯೂ ಬೀಸುತ್ತಿದೆ' ಎಂದರು.


ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹15400
ಎಸಿ	₹9100
ಆರ್‌ಪಿ	₹16500
ಆರ್‌ಸಿ	₹9620

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹555
12 ಕ್ಕೆ	₹75
ಮೈಸೂರು	
100ಕ್ಕೆ	₹557

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹199.50
ಆರ್‌ಎಸ್‌ಎಸ್-5 ₹191
ಗುಡ್ ಲಾಟ್ ₹180
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹335-485
ದ್ವಿತಳಿ (ಬಿ.ವಿ) ₹350-613

ಹರಳು, ಚಿನ್ನಾಭರಣ ರಫ್ತು ಶೇ 5ರಷ್ಟು ಇಳಿಕೆ



ಮುಂಬೈ (ಪಿಟಿಐ): ದೇಶದಲ್ಲಿ ಮೇ ತಿಂಗಳಿನಲ್ಲಿ ₹20,713 ಕೋಟಿ ಮೌಲ್ಯದ ಹರಳು ಮತ್ತು ಚಿನ್ನಾಭರಣ ರಫ್ತು ಮಾಡಲಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ರಫ್ತು ಮೌಲ್ಯ ₹21,795 ಕೋಟಿ ಇತ್ತು. ಇದಕ್ಕೆ ಹೋಲಿಸಿ ದರೆ ಶೇ 5ರಷ್ಟು ಇಳಿಕೆಯಾಗಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿಯು (ಜಿಜೆಇಪಿಸಿ) ತಿಳಿಸಿದೆ.


ಆದಾಗ್ಯೂ, ಚಿನ್ನಾಭರಣ ರಫ್ತು ಪ್ರಮಾಣವು ಶೇ13.1ರಷ್ಟು ಏರಿಕೆಯಾಗಿದ್ದು, ₹5,507 ಕೋಟಿ ಆಗಿದೆ. ಕಳೆದ ವರ್ಷದ ಮೇ ತಿಂಗಳಿನಲ್ಲಿ ₹4,807 ಕೋಟಿ ಮೌಲ್ಯದ ಚಿನ್ನಾಭರಣ ರಫ್ತು ಮಾಡಲಾಗಿತ್ತು.

ಬೆಳ್ಳಿ ಆಭರಣಗಳ ರಫ್ತು ಮೌಲ್ಯವು ₹665 ಕೋಟಿಯಿಂದ ₹1,103 ಕೋಟಿಗೆ ಹೆಚ್ಚಳವಾಗಿದೆ. ಆದರೆ, ಕಟ್ ಹಾಗೂ ಪಾಲಿಷ್ ಮಾಡಿದ ವಜ್ರಗಳ ರಫ್ತು ₹14,190 ಕೋಟಿಯಿಂದ ₹12,270 ಕೋಟಿಗೆ ಇಳಿಕೆಯಾಗಿದೆ.

‘ಜಾಗತಿಕ ಬಿಕ್ಕಟ್ಟಿನ ನಡುವೆಯೂ ದೇಶದ ಹರಳು ಮತ್ತು ಚಿನ್ನಾಭರಣ ವಲಯದ ವಹಿವಾಟು ಚೇತರಿಕೆ ಕಂಡಿದೆ ಎಂದು ಮಂಡಳಿಯ ಮುಖ್ಯಸ್ಥ ವಿಪುಲ್ ಶಾ ತಿಳಿಸಿದ್ದಾರೆ.

₹25 ಸಾವಿರ ಕೋಟಿ ಬಂಡವಾಳ ಸಂಗ್ರಹ ಗುರಿ

ಹುಂಡೈ ಐಪಿಒ: ಸೆಬಿಗೆ ದಾಖಲೆ ಸಲ್ಲಿಕೆ



ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ಹುಂಡೈ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ಈ ಸಂಬಂಧ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿದೆ.

ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಸಂಗ್ರಹಿಸಿದ್ದ ₹21 ಸಾವಿರ ಕೋಟಿಯು ಇಲ್ಲಿಯವರೆಗೆ ಭಾರತದಲ್ಲಿನ ಅತಿದೊಡ್ಡ ಐಪಿಒ ಮೊತ್ತವಾಗಿದೆ. ಸೆಬಿ ಅನುಮತಿ ನೀಡಿದರೆ, ಹುಂಡೈ ಐಪಿಒ ಅತಿದೊಡ್ಡದಾಗಲಿದೆ.

ಒಟ್ಟು 14.12 ಕೋಟಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಈ ಮೊತ್ತ ಸಂಗ್ರಹಿಸಲು ನಿರ್ಧರಿಸಲಾಗಿದೆ ಎಂದು ದಾಖಲೆ ಪತ್ರದಲ್ಲಿ ಕಂಪನಿಯು ತಿಳಿಸಿದೆ.

ಹುಂಡೈ ದೇಶದ ಎರಡನೇ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾಗಿದೆ. ಶೇ 15ರಿಂದ 20ರಷ್ಟು ಷೇರುಗಳ ಮಾರಾಟದಿಂದ ಬಂಡವಾಳ ಸಂಗ್ರಹಿಸಲು ಪ್ರಸಕ್ತ ವರ್ಷದ ಆರಂಭದಲ್ಲಿಯೇ ಕಂಪನಿಯು ನಿರ್ಧರಿಸಿತ್ತು.

2003ರಲ್ಲಿ ಮಾರುತಿ ಸುಜುಕಿ ಕಂಪನಿಯು ಷೇರುಗಳನ್ನು ಮಾರಾಟ ಮಾಡಿ ಬಂಡವಾಳ ಕ್ರೋಡೀಕರಿಸಿತ್ತು. ಎರಡು ದಶಕದ ಬಳಿಕ ಹುಂಡೈ ಕಂಪನಿಯು ಇಂತಹದ್ದೇ ನಿರ್ಧಾರಕ್ಕೆ ಮುಂದಾಗಿರುವುದು ಭಾರತದ ಆಟೊಮೊಬೈಲ್ ವಲಯದ ಬೆಳವಣಿಗೆ ದೃಷ್ಟಿಯಿಂದ ಮಹತ್ವದ ಮೈಲುಗಲ್ಲು ಆಗಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪಿಎಂ–ಕಿಸಾನ್: 18ಕ್ಕೆ ರೈತರ ಖಾತೆಗೆ ಹಣ ಜಮೆ



ಶಿವರಾಜ್ ಸಿಂಗ್ ಚೌಹಾಣ್

ನವದೆಹಲಿ (ಪಿಟಿಐ): ಮೂರನೇ ಅವಧಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಜೂನ್ 18ರಂದು ನರೇಂದ್ರ ಮೋದಿ ಅವರು, ಮೊದಲ ಬಾರಿಗೆ ವಾರಾಣಸಿಗೆ ಭೇಟಿ ನೀಡಲಿದ್ದಾರೆ.

ಇದೇ ವೇಳೆ ಪಿಎಂ–ಕಿಸಾನ್ ಯೋಜನೆಯ 17ನೇ ಕಂತಿನ ₹20 ಸಾವಿರ ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಿದ್ದಾರೆ. ದೇಶದ 9.26 ಕೋಟಿ ರೈತರಿಗೆ ಇದರ ಪ್ರಯೋಜನ ಸಿಗಲಿದೆ.

ಕೃಷಿ ಮತ್ತು ಹೈನುಗಾರಿಕೆಯ ಬಲವರ್ಧನೆಗೆ ಕೇಂದ್ರ ಸರ್ಕಾರವು ‘ಕೃಷಿ ಸಖಿ’ ಯೋಜನೆಯನ್ನು ಜಾರಿಗೊಳಿಸಿದೆ. ಇದರಡಿ ಸ್ವಸಹಾಯ ಸಂಘದ 30 ಸಾವಿರ ಸದಸ್ಯೆಯರಿಗೆ ತರಬೇತಿ ನೀಡಲಾಗಿದ್ದು, ಅವರಿಗೆ ಇದೇ ಸಂದರ್ಭದಲ್ಲಿ ಪ್ರಮಾಣ ಪತ್ರಗಳನ್ನು ವಿತರಿಸಲಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ‘ಹಿಂದಿನ ಎರಡು ಅವಧಿಯಲ್ಲಿಯೂ ಮೋದಿ ಅವರು ಕೃಷಿ ಕ್ಷೇತ್ರಕ್ಕೆ ಪ್ರಧಾನ ಆದ್ಯತೆ ನೀಡಿದ್ದರು. ದೇಶದ ಅನ್ನದಾತರ ಹಿತದೃಷ್ಟಿಯಿಂದ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಂಡು ಅನುಷ್ಠಾನಗೊಳಿಸಿದ್ದಾರೆ. ಮೂರನೇ ಬಾರಿಗೆ ಅಧಿಕಾರ ವಹಿಸಿಕೊಂಡ ವೇಳೆ ಪಿಎಂ–ಕಿಸಾನ್ ಹಣ ಬಿಡುಗಡೆಗೆ ಮೊದಲ ಸಹಿ ಹಾಕಿದ್ದೇ ಇದಕ್ಕೆ ಸಾಕ್ಷಿ’ ಎಂದರು.

ಸೌರ ವಿದ್ಯುತ್ ಪಂಪ್‌ಸೆಟ್ ಅಳವಡಿಕೆಗೆ ಸಹಾಯಧನ: 18,000 ಅರ್ಜಿ ಸಲ್ಲಿಕೆ

ರೈತರಿಗೆ ‘ಕುಸುಮ್’ ವರದಾನ

• ಪೂರ್ಣಿಮಾ ಗೊಂದೆನಾಯ್ಕರ



> ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆ ಕಡಿಮೆಯಾಗಬೇಕು. ಸೌರ ಪಂಪ್‌ಸೆಟ್ ಅಳವಡಿಕೆಗೆ ರಾಜ್ಯ ಸರ್ಕಾರವು ಸಹಾಯಧನವನ್ನು ಶೇ 50ಕ್ಕೆ ಹೆಚ್ಚಿಸಿದೆ
> **ಕೆ.ಜೆ. ಜಾರ್ಜ್,** ಇಂಧನ ಸಚಿವ

> ರೈತರಿಗೆ ಯೋಜನೆ ಕುರಿತು ಹೆಚ್ಚಿನ ಮಾಹಿತಿ ನೀಡಬೇಕು. ವಿದ್ಯುತ್ ಪೂರೈಕೆ ಕಡಿತವಾದಾಗ, ಸೌರಶಕ್ತಿ ಬಳಸಬಹುದು ಎಂಬುದನ್ನು ರೈತರು ಮನಗಾಣಬೇಕು
> **ಲೋಕನಾಥ ಹೆಬಸೂರ,** ರೈತ ಮುಖಂಡ

ಹುಬ್ಬಳ್ಳಿ: ರೈತರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿರುವ ಪಿಎಂ ಕುಸುಮ್ ಯೋಜನೆಯಡಿ ಪ್ರಸಕ್ತ ವರ್ಷದ ಮಾರ್ಚ್ ಅಂತ್ಯದವರೆಗೆ ರಾಜ್ಯದಲ್ಲಿ 18,000 ಅರ್ಜಿಗಳು ಸಲ್ಲಿಕೆಯಾಗಿವೆ.

ಈ ಪೈಕಿ ಬೆಳಗಾವಿ ಜಿಲ್ಲೆಯಲ್ಲಿ ಅತಿಹೆಚ್ಚು ಸಲ್ಲಿಕೆಯಾಗಿದ್ದರೆ, ಉಡುಪಿ ಜಿಲ್ಲೆಯಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ರೈತರು ಹೆಸರು ನೋಂದಣಿ ಮಾಡಿಸಿದ್ದಾರೆ.

ವಿದ್ಯುತ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಈ ಯೋಜನೆಯಡಿ ರೈತರಿಗೆರಿಯಾಯಿತಿ ದರದಲ್ಲಿ ಸೌರ ವಿದ್ಯುತ್ ಪಂಪ್‌ಸೆಟ್ ನೀಡಲಾಗುತ್ತದೆ. ಕೇಂದ್ರ ಸರ್ಕಾರ ಶೇ30ರಷ್ಟು ಹಾಗೂ ರಾಜ್ಯ ಸರ್ಕಾರ ಶೇ50ರಷ್ಟು ಸಹಾಯಧನ ಸೌಲಭ್ಯ ಕಲ್ಪಿಸಲಿದೆ. ಫಲಾನುಭವಿಗಳು ಕೇವಲ ಶೇ20 ರಷ್ಟು ಹಣ ಭರಿಸಿ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ.

ಸೌರ ವಿದ್ಯುತ್ ಪಂಪ್‌ಸೆಟ್ ಬಳಕೆಯಿಂದ 8 ಗಂಟೆ ಕಾಲ ಹಗಲಿನಲ್ಲಿ ವಿದ್ಯುತ್ ಪೂರೈಕೆ ಆಗುತ್ತದೆ. ಇದರಿಂದ ರಾತ್ರಿವೇಳೆ ರೈತರಿಗೆ ಸಮಸ್ಯೆ ಆಗುವುದಿಲ್ಲ. ವರ್ಷ ಪೂರ್ತಿ ಸೌರ ವಿದ್ಯುತ್ ಮೂಲಕ ಕೃಷಿ ಚಟುವಟಿಕೆಗೆ ನೀರು ಪೂರೈಸಬಹುದಾಗಿದೆ.

‘ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚು ಕಬ್ಬು ಬೆಳೆಯುವ ಕಾರಣ ನೀರಿನ ಬಳಕೆ ಹೆಚ್ಚಿದೆ. ಬಹುತೇಕ ರೈತರು ಕೊಳವೆಬಾವಿ, ಕಾಲುವೆಗಳನ್ನು ಅವಲಂಬಿಸಿದ್ದಾರೆ. ವಿದ್ಯುತ್‌ನ ಅಸಮರ್ಪಕ ಪೂರೈಕೆಯಿಂದ ಬೆಳೆಗಳಿಗೆ ನೀರು ಪೂರೈಸಲು ಆಗುವುದಿಲ್ಲ. ಕುಸುಮ್ ಯೋಜನೆಯಡಿ ಸೌರ ವಿದ್ಯುತ್ ಪಂಪ್‌ಸೆಟ್ ಲಭಿಸುವುದರಿಂದ ನೀರು ಪೂರೈಕೆಗೆ ಹೆಚ್ಚು ಸಮಸ್ಯೆ ಆಗುವುದಿಲ್ಲ’ ಎಂದು ಆ ಜಿಲ್ಲೆಯ ರೈತರು ಹೇಳುತ್ತಾರೆ.

ಕುಸುಮ್ ‘ಬಿ’ ಯೋಜನೆಯಡಿ ಕೃಷಿ ಕ್ಷೇತ್ರವನ್ನು ಲಾಭದಾಯಕವಾಗಿಸಲು ಮತ್ತು ಸೌರಶಕ್ತಿ ಬಳಕೆಗೆ ಉತ್ತೇಜನ ನೀಡಲು ಸರ್ಕಾರದಿಂದ ಹೆಚ್ಚಿನ ಸಹಾಯಧನ ಸಿಗುತ್ತದೆ. ಕೃಷಿ ಭೂಮಿಯಲ್ಲಿ ಅಳವಡಿಸಲಾಗುವ ಈ ಪಂಪ್‌ಸೆಟ್‌ಗಳನ್ನು ಪೂರೈಕೆದಾರರೇ ಐದು ವರ್ಷ ಉಚಿತವಾಗಿ ನಿರ್ವಹಿಸಲಿದ್ದಾರೆ.

ಕುಸುಮ್ ‘ಸಿ’ ಯೋಜನೆಯಡಿ ಸ್ವಂತ ಬಳಕೆಯ ಜೊತೆಗೆ, ಸೌರ ವಿದ್ಯುತ್ ಮಾರಾಟ ಮಾಡಿ ರೈತರು ಹೆಚ್ಚುವರಿ ಆದಾಯ ಪಡೆಯಬಹುದು. ಐಪಿ ಸೆಟ್‌ಗಳಿಗೆ ಸೌರ ವಿದ್ಯುತ್ ಮೂಲದಿಂದ ವಿದ್ಯುತ್ ಪೂರೈಸಬಹುದು. ಸ್ಥಳೀಯವಾಗಿ ವಿದ್ಯುತ್ ಉತ್ಪಾದನೆ ಹೆಚ್ಚುವುದರಿಂದ ರೈತರ ಅಗತ್ಯಕ್ಕೆ ತಕ್ಕಂತೆ ಹಗಲು ವಿದ್ಯುತ್ ಪೂರೈಸಲು ಸಾಧ್ಯವಾಗಲಿದೆ.

ಜಿಲ್ಲಾವಾರು ಅರ್ಜಿಗಳ ಸಂಖ್ಯೆ

ಬೆಳಗಾವಿ	ತುಮಕೂರು	ವಿಜಯಪುರ	ಚಿಕ್ಕಮಗಳೂರು	ಹಾಸನ	ಉಡುಪಿ
2,284	1,970	1,593	1,245	1,240	111

ನೋಂದಣಿ ಹೇಗೆ?

ಪಿಎಂ ಕುಸುಮ್ ಯೋಜನೆಗೆ ರೈತರು ಆಧಾರ್, ಆರ್‌ಟಿಸಿ ಮತ್ತು ಬ್ಯಾಂಕ್ ವಿವರ ಸಹಿತ ಆನ್‌ಲೈನ್ ಪೋರ್ಟಲ್ ಮೂಲಕ ಹೆಸರು ನೋಂದಾಯಿಸಬಹುದು. ಸಮಸ್ಯೆಗಳಿದ್ದರೆ ಸಹಾಯವಾಣಿ ಮೂಲಕ ಪರಿಹರಿಸಿ ಕೊಳ್ಳಬಹುದು.
ಆನ್‌ಲೈನ್ ಪೋರ್ಟಲ್: https://souramitra.com
ಸಹಾಯವಾಣಿ ಸಂಖ್ಯೆ: 080-22202100

ದಕ್ಷಿಣ ಭಾರತ ಉತ್ಸವ

₹3,750 ಕೋಟಿ ಬಂಡವಾಳ ಹೂಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಶನಿವಾರ ಆರಂಭವಾದ ‘ದಕ್ಷಿಣ ಭಾರತ ಉತ್ಸವ’ದಲ್ಲಿ ಮಳಿಗೆಯನ್ನು ವೀಕ್ಷಿಸುತ್ತಿರುವ ನಾಗರಿಕರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದಕ್ಷಿಣ ಭಾರತ ಉತ್ಸವದ ಸಂದರ್ಭದಲ್ಲಿ ಕರ್ನಾಟಕಕ್ಕೆ ₹3,750 ಕೋಟಿ ಬಂಡವಾಳ ಹರಿದು ಬಂದಿದೆ’ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಸಹಯೋಗದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ‘ದಕ್ಷಿಣ ಭಾರತ ಉತ್ಸವ’ದಲ್ಲಿ ಅವರು ಮಾತನಾಡಿದರು.

‘ಕರ್ನಾಟಕವು 320 ಕಿ.ಮೀ ಉದ್ದದಷ್ಟು ಕರಾವಳಿ ತೀರ ಪ್ರದೇಶ ಹೊಂದಿದ್ದು, ಅದರಲ್ಲಿ 40 ತಾಣಗಳನ್ನು ಪ್ರವಾಸೋದ್ಯಮ ಸ್ಥಳಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು. ರಾಜ್ಯದಲ್ಲಿ 25 ಸಾವಿರಕ್ಕೂ ಹೆಚ್ಚು ಸ್ಮಾರಕಗಳಿದ್ದು, ಈ ಪೈಕಿ 500 ಸ್ಮಾರಕಗಳನ್ನು ಮಾತ್ರ ಸರ್ಕಾರ ಸಂರಕ್ಷಿಸುತ್ತಿದೆ. ಎಲ್ಲ ಸ್ಮಾರಕಗಳ ರಕ್ಷಣೆಗೆ ದತ್ತು ಸ್ಮಾರಕ ಯೋಜನೆ ರೂಪಿಸಲಾಗಿದೆ’ ಎಂದು ತಿಳಿಸಿದರು.

‘ಸಾಹಸ, ಶೈಕ್ಷಣಿಕ, ಕೃಷಿ, ಧಾರ್ಮಿಕ, ಪಾರಂಪರಿಕ ತಾಣಗಳ ಅಧ್ಯಯನದಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಲಿದೆ. ರಾಜ್ಯದಲ್ಲಿರುವ ಶ್ರದ್ಧಾ ಕೇಂದ್ರಗಳಿಗೆ ಮೂಲ ಸೌಕರ್ಯ ಒದಗಿಸಲು ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವ (ಪಿಪಿಪಿ) ಮಾದರಿ ಅಳವಡಿಕೆಗೆ ನಿರ್ಧರಿಸಲಾಗಿದೆ. ಇದರಲ್ಲಿ ಆಸಕ್ತ ಬಂಡವಾಳ ಹೂಡಿಕೆದಾರರು ಸರ್ಕಾರದೊಂದಿಗೆ ಕೈಜೋಡಿಸಬೇಕು’ ಎಂದು ಕರೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ರಾಜ್ಯ ಸರ್ಕಾರ ಪ್ರವಾಸೋದ್ಯಮದ ಅಭಿವೃದ್ಧಿಗೆ ಬದ್ಧವಾಗಿದ್ದು, ಹೆಚ್ಚು ಬಂಡವಾಳ ಹೂಡಿಕೆದಾರರ ಆಕರ್ಷಣೆಗೆ ನೂತನ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಲಾಗುವುದು’ ಎಂದರು.

ಪ್ರವಾಸೋದ್ಯಮಕ್ಕೆ ಜಿಎಸ್‌ಟಿ ಪೆಟ್ಟು

ಕೇಂದ್ರ ಸರ್ಕಾರವು ಪ್ರವಾಸೋದ್ಯಮದ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸುವ ಮೂಲಕ ಅದರ ಬೆನ್ನುಮೂಳೆಯನ್ನು ಮುರಿದಿದೆ. ಬ್ಯಾಂಕ್ ಬಡ್ಡಿ ದರ, ಇತರೆ ತೆರಿಗೆಗಳು ಸೇರಿ ಅರ್ಧಕ್ಕೂ ಹೆಚ್ಚು ಹಣ ಕಳೆದುಕೊಳ್ಳುವ ಹೂಡಿಕೆದಾರರು, ಪ್ರವಾಸೋದ್ಯಮದ ಕಡೆಗೆ ಗಮನ ಹರಿಸುತ್ತಿಲ್ಲ. ಜಿಎಸ್‌ಟಿ ಬಗ್ಗೆ ಎಚ್ಚೆತ್ತುಕೊಂಡು ದಕ್ಷಿಣ ಭಾರತೀಯರೆಲ್ಲರೂ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕಿದೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಹೂಡಿಕೆದಾರರು ತಮ್ಮ ಬೇಡಿಕೆಗಳನ್ನು ಲಿಖಿತ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕು. ಉತ್ಸವದಲ್ಲಿ ಭಾಗವಹಿಸಿರುವ ಆಂಧ್ರ, ತಮಿಳುನಾಡು, ಪಾಂಡಿಚೇರಿ, ತೆಲಂಗಾಣದ ಪ್ರತಿನಿಧಿಗಳು ಸಾಗರೋತ್ತರ ಪ್ರವಾಸೋದ್ಯಮದ ಅಭಿವೃದ್ಧಿಗೆ ಸಲಹೆ ನೀಡಬೇಕು’ ಎಂದರು.

ಪಾಕ್: ಪೆಟ್ರೋಲ್ ಡೀಸೆಲ್ ದರ ಕಡಿತ



ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಪಾಕಿಸ್ತಾನದಲ್ಲಿ ‘ಈದುಲ್ ಅದ್‌ಹಾ’ ಹಬ್ಬದ ಪ್ರಯುಕ್ತ ಪ್ರತಿ ಲೀಟರ್ ಪೆಟ್ರೋಲ್‌ಗೆ ಅಲ್ಲಿನ ರೂಪಾಯಿ ಮೌಲ್ಯದಲ್ಲಿ ₹10 ಹಾಗೂ ಹೈಸ್ಪೀಡ್ ಡೀಸೆಲ್‌ಗೆ ₹2.33 ದರ ಕಡಿತಗೊಳಿಸಲಾಗಿದೆ.

ಭಾರತದಲ್ಲಿ ಈ ಹಬ್ಬವು ‘ಬಕ್ರೀದ್’ ಎಂದು ಪ್ರಸಿದ್ಧಿಯಾಗಿದೆ. ಶನಿವಾರದಿಂದಲೇ ಇಂಧನ ದರ ಕಡಿತದ ಆದೇಶ ಜಾರಿಗೆ ಬರಲಿದೆ.

ಬೆಲೆ ಇಳಿಕೆಯಿಂದಾಗಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆಯು ಅಲ್ಲಿನ ರೂಪಾಯಿ ಮೌಲ್ಯದಲ್ಲಿ ₹258.16 ಹಾಗೂ ಡೀಸೆಲ್ ಬೆಲೆ ₹267.89 ಆಗಿದೆ ಎಂದು ‘ಎಕ್ಸ್‌ಪ್ರೆಸ್ ಟ್ರಿಬ್ಯೂನ್’ ಪತ್ರಿಕೆಯು ಪ್ರಧಾನಿ ಕಚೇರಿಯ ಹೇಳಿಕೆ ಉಲ್ಲೇಖಿಸಿ ವರದಿ ಮಾಡಿದೆ.

ಪಾಕಿಸ್ತಾನದ ಹಣಕಾಸು ಇಲಾಖೆ ಪ್ರತಿ ಹದಿನೈದು ದಿನಗಳಿಗೊಮ್ಮೆ ಇಂಧನ ಬೆಲೆಯನ್ನು ಪರಿಷ್ಕರಿಸಲಿದೆ. ಮುಂದಿನ ಪರಿಷ್ಕರಣೆವರೆಗೂ ಈ ಆದೇಶವೂ ಜಾರಿಯಲ್ಲಿ ಇರಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.



ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಟೆಂಪೊ ಟ್ರಾವೆಲರ್ ವಾಹನವು ರಸ್ತೆಯಿಂದ ನದಿಗೆ ಉರುಳಿ ಬಿದ್ದಿತ್ತು – ಪಿಟಿಐ ಚಿತ್ರ

ನದಿಗೆ ಬಿದ್ದ ವಾಹನ: 12 ಜನ ಸಾವು

ರುದ್ರಪ್ರಯಾಗ (ಪಿಟಿಐ): ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಟೆಂಪೊ ಟ್ರಾವೆಲರ್ ವಾಹನವು ರಸ್ತೆಯಿಂದ ಅಲಕಾನಂದ ನದಿಗೆ ಉರುಳಿಬಿದ್ದ ಪರಿಣಾಮ 12 ಪ್ರವಾಸಿಗರು ಮೃತಪಟ್ಟಿದ್ದು, 14 ಮಂದಿ ಗಾಯಗೊಂಡಿದ್ದಾರೆ.

‘ಈ ಪ್ರವಾಸಿಗರು ಬದರಿನಾಥ್ ರಾಷ್ಟ್ರೀಯ ಹೆದ್ದಾರಿ ಮೂಲಕ ಛೋಪ್ಟಾಗೆ ಪ್ರಯಾಣಿಸುತ್ತಿದ್ದರು. ಅವರಲ್ಲಿ ಬಹುಪಾಲು ಜನ ದೆಹಲಿ ಮೂಲದವರಾಗಿದ್ದಾರೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಗಂಭೀರವಾಗಿ ಗಾಯಗೊಂಡಿದ್ದ 7 ಜನರನ್ನು ಹೆಲಿ-ಆ್ಯಂಬುಲೆನ್ಸ್ ಮೂಲಕ ರಿಷಿಕೇಶದಲ್ಲಿರುವ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇನ್ನುಳಿದ 6 ಮಂದಿಗೆ ರುದ್ರಪ್ರಯಾಗದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ತಿಳಿಸಿದರು.


‘ಶನಿವಾರ ಬೆಳಿಗ್ಗೆ 11 ಗಂಟೆಗೆ ಅಪಘಾತ ನಡೆದಿದ್ದು, ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಲಾಗಿದೆ. ಬಸ್ ರಸ್ತೆಯಿಂದ 250 ಮೀಟರ್ ಆಳಕ್ಕೆ ಬಿದ್ದಿತ್ತು’ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪಡೆಯ ಅಧಿಕಾರಿ ನಂದನ್ ಸಿಂಗ್ ರಜ್ವಾರ್ ಅವರು ತಿಳಿಸಿದ್ದಾರೆ.

ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶದಲ್ಲಿ ಉತ್ಪಾದನೆಯಾಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಟನ್‌ಗೆ ₹5,200ರಿಂದ ₹3,250ಕ್ಕೆ ಇಳಿಸಿದೆ.

ಈ ಆದೇಶವು ಶನಿವಾರದಿಂದಲೇ ಜಾರಿಗೆ ಬರಲಿದೆ. ವಿಶೇಷ ಹೆಚ್ಚುವರಿ ಅಬಕಾರಿ ಸುಂಕದ (ಎಸ್‌ಎಇಡಿ) ರೂಪದಲ್ಲಿ ಈ ತೆರಿಗೆ ವಿಧಿಸಲಾಗುತ್ತದೆ. ರಫ್ತು ಮಾಡುವ ಡೀಸೆಲ್, ಪೆಟ್ರೋಲ್ ಮೇಲೆ ಈ ಸುಂಕ ಏರಿಕೆ ಮಾಡದೆ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಬಿ.ಎಸ್.ಕೇಶವ ಮೂರ್ತಿ
ಮಾಜಿ ನಿವೃತ್ತ ಇನ್ಸಪೆಕ್ಟರ್–ESI Corporation
ಜನನ –24.10.1936 ಮರಣ–15.06.2024
ದು:ಖ ತಪ್ತರು : ಪತ್ನಿ–ಬಿ.ಕೆ ನಳಿನಿ, ಮಗಳು ಮತ್ತು ಅಳಿಯ–ಬಿ.ಕೆ ಆಶಾ & ಹೆಚ್.ಎ ನಾಗರಾಜ, ಮೊಮ್ಮಕಳು–ಕ್ಷಮಾ.ಎನ್ & ದಿಕ್ಷಾರಾವ್ ಮತ್ತು ಬಂಧು–ಮಿತ್ರರು. Mob-9731802915

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಕುಸುಮಾ ರಾಮಚಂದ್ರ
ಜನನ: 20-4-1960 ಮರಣ: 16-6-2023

ಜೀವನವನ್ನು ಸಂಭ್ರಮಿಸುತ್ತ ಪ್ರತಿ ಮಾರ್ಗದಲ್ಲೂ ನಾವು ಬದುಕಿದೆವು; ಓರ್ವ ಸಮರ್ಪಿತ ಪತ್ನಿ, ಅಪರೂಪದ ತಾಯಿ, ಮಮತೆ ವಾತ್ಸಲ್ಯಭರಿತ ಅಜ್ಜಿ ಮತ್ತು ಸ್ನೇಹಜೀವದೊಂದಿಗೆ ಸಕಲರಿಗೂ ಮಾರ್ಗದರ್ಶನ ನೀಡಿದ ನಿಮಗೆ, ನಾವು ಚಿರಋಣಿಯಾಗಿದ್ದೇವೆ.

ಇಂತಿ ದುಃಖತಪ್ತರು:
ಪತಿ: ರಾಮಚಂದ್ರಪ್ಪ ತಂದೆ: ವೇಣುಗೋಪಾಲ ಮಕ್ಕಳು: ಡಾ. ಚೈತ್ರಾ ಮತ್ತು ಡಾ. ದೀಪಿಕಾ
ಮೊಮ್ಮಕ್ಕಳು: ರಕ್ಷಿತ್, ಚಿರಂತ್ ಹಾಗೂ ಕಿಯರಾ
ಅಳಿಯಂದಿರು, ಸಹೋದರ, ಸಹೋದರಿಯರು ಮತ್ತು ಕುಟುಂಬದ ಸದಸ್ಯರು.

ಪ್ರೀತಿಯ ನೆನಪಿನಲ್ಲಿ ದ್ವಿತೀಯ ವಾರ್ಷಿಕ ಪುಣ್ಯಸ್ಮರಣೆ



ಶ್ರೀಮತಿ ಜಿ. ಸ್ವರ್ಣಪ್ರಭ

ನಮ್ಮೆಲ್ಲರಿಗೂ ದಾರಿ ದೀಪವಾಗಿ, ಬದುಕಿಗೆ ಪ್ರೇರಕ ಮಾರ್ಗದರ್ಶಕರಾಗಿ, ಜನಮನದಲ್ಲಿ ಆದರ್ಶರಾಗಿ ಬಾಳಿದ ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಚಿರಸ್ಮರಣೀಯಾಗಿ ಉಳಿದಿದೆ.

ಎಂದೆಂದಿಗೂ ನಿಮ್ಮನ್ನು ಸ್ಮರಿಸುವ
ಶ್ರೀ ಬಿ.ಎನ್. ಗೋಪಾಲ ಗೌಡ ಮತ್ತು ದುಃಖತಪ್ತ ಕುಟುಂಬದವರು

5ನೇ ವರ್ಷದ ಪುಣ್ಯ ಸ್ಮರಣೆ



ಶ್ರೀಮತಿ ಎ. ಅನಸೂಯ
ಸಂಸ್ಥಾಪಕರು,
ನಿವೇದಿತಾ ಶಾಲೆ, ಗವಿಪುರಂ
ಎಕ್ಸ್ಟೆನ್ಶನ್ ಹಾಗೂ ವಸಂತಪುರ.

ನೀವು ನಮ್ಮನ್ನು ಅಗಲಿ ಇಂದಿಗೆ ಐದು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.

ತಮ್ಮ ಸ್ಮರಣೆಯಲ್ಲಿರುವ
ಕುಟುಂಬ ವರ್ಗ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು.

ಕೊನೆಯ ಲೀಗ್ ಪಂದ್ಯದಲ್ಲಿ ನೇಪಾಳ ಎದುರು 1 ರನ್ ಜಯ • ತಬ್ರೇಜ್ ಶಮ್ಸಿಗೆ ನಾಲ್ಕು ವಿಕೆಟ್

ಗೆಲ್ಲಲು ಏದುಸಿರುಬಿಟ್ಟ ದಕ್ಷಿಣ ಆಫ್ರಿಕಾ

ಕಿಂಗ್ಸ್‌ಟೌನ್, ಸೇಂಟ್ ವಿನ್ಸೆಂಟ್ (ಎಎಫ್‌ಪಿ): ಸತತ ಮೂರು ಪಂದ್ಯಗಳನ್ನು ಗೆದ್ದು ಬೀಗುತ್ತಿದ್ದ ದಕ್ಷಿಣ ಆಫ್ರಿಕಾ, ಟಿ20 ವಿಶ್ವಕಪ್ ಲೀಗ್ ಪಂದ್ಯದಲ್ಲಿ ಶನಿವಾರ ನೇಪಾಳ ವಿರುದ್ಧ ಮುಖಭಂಗದಿಂದ ಕೂದಲೆಳೆಯಲ್ಲಿ ಪಾರಾಯಿತು. ರೋಚಕ ಅಂತ್ಯಕಂಡ 'ಡಿ' ಗುಂಪಿನ ತನ್ನ ಕೊನೆಯ ಪಂದ್ಯವನ್ನು ದಕ್ಷಿಣ ಆಫ್ರಿಕಾ ಒಂದು ರನ್‌ನಿಂದ ಗೆದ್ದುಕೊಂಡಿತು.

116 ರನ್‌ಗಳ ಅಲ್ಪ ಮೊತ್ತದ ಗುರಿ ಎದುರಿಸಿದ ನೇಪಾಳಕ್ಕೆ ಕೊನೆಯ ಓವರಿನಲ್ಲಿ ಅಚ್ಚರಿಯ ಗೆಲುವಿಗೆ ಎಂಟು ರನ್‌ಗಳಷ್ಟೇ ಬೇಕಿದ್ದವು. ಒಟ್ನೀಲ್ ಬಾಟ್‌ಮನ್ ಮಾಡಿದ್ದ ಅಂತಿಮ ಓವರಿನ ಕೊನೆಯ ಎಸೆತದಲ್ಲಿ ಎರಡು ರನ್‌ಗಳು ಅಗತ್ಯವಿರುವಾವ ಗುಲ್ಶನ್ ಝಾ ರನೌಟ್ ಆದರು. ಪಂದ್ಯವನ್ನು ಕನಿಷ್ಠ ಸೂಪರ್ ಓವರ್‌ಗೆ ಬೆಳೆಸಬೇಕೆಂಬ ಅವರ ಯತ್ನ ಫಲಿಸಲಿಲ್ಲ. ತಂಡ 7 ವಿಕೆಟ್‌ಗೆ 114 ರನ್‌ಗಳೊಡನೆ ಓವರ್‌ಗಳನ್ನು ಪೂರೈಸಿತು.


ವಿಕೆಟ್ ಪಡೆದ ಸಂಭ್ರಮದಲ್ಲಿ ದಕ್ಷಿಣ ಆಫ್ರಿಕಾದ ತಬ್ರೇಜ್ ಶಮ್ಸಿ –ಐಸಿಸಿ ಎಕ್ಸ್ ಚಿತ್ರ

ದಕ್ಷಿಣ ಆಫ್ರಿಕಾ ಈ ಪಂದ್ಯಕ್ಕೆ ಮೊದಲೇ ಸೂಪರ್ ಎಂಟರ ಹಂತಕ್ಕೆ ಸ್ಥಾನ ಖಚಿತಪಡಿಸಿಕೊಂಡಿತ್ತು.

'ನಾವು ಇಂದು ನಮ್ಮ ಉತ್ತಮ ಆಟದ ಸಮೀಪವೂ ಬಂದಿರಲಿಲ್ಲ' ಎಂದು ನಿರಾಳರಾದ ದಕ್ಷಿಣ ಆಫ್ರಿಕಾ ನಾಯಕ ಏಡನ್ ಮರ್ಕರಂ ಪ್ರತಿಕ್ರಿಯಿಸಿದರು. 'ನಮಗೆ ಸಾಕಷ್ಟು ಪಾಠಗಳಿದ್ದವು' ಎಂದೂ ಹೇಳಿದರು.

ಲೆಗ್‌ಬ್ರೇಕ್ ಬೌಲರ್ ಕುಶಲ್ ಭುರ್ತೆಲ್ (19ಕ್ಕೆ4) ಮತ್ತು ಆಫ್ ಸ್ಪಿನ್ನರ್ ಪೇಂದ್ರ ಸಿಂಗ್ ಐರೀ (21ಕ್ಕೆ3) ಅವರು ಪರಿಣಾಮಕಾರಿ ದಾಳಿಯಿಂದ ಹರಿಣಗಳ ಓಟಕ್ಕೆ ಲಗಾಮುಹಾಕಿ 7 ವಿಕೆಟ್‌ಗೆ 115 ರನ್‌ಗಳಿಗೆ ಸೀಮಿತಗೊಳಿಸಿದರು. ಆಸಿಫ್ ಶೇಖ್ (42) ಮತ್ತು ಅನಿಲ್ ಸಹ್ (27) ಅವರು ಮೂರನೇ ವಿಕೆಟ್‌ಗೆ 50 ರನ್ ಸೇರಿಸಿ ನೇಪಾಳ ತಂಡವನ್ನು ಗೆಲುವಿನ ದಾರಿಯಲ್ಲಿ ಮುನ್ನಡೆಸಿದ್ದರು.

ಎರಡನೇ ಸ್ಪೆಲ್‌ನಲ್ಲಿ ದಾಳಿಗಿಳಿದ ಎಡಗೈ ಸ್ಪಿನ್ನರ್ ತಬ್ರೇಜ್ ಶಮ್ಸಿ (19ಕ್ಕೆ4) 18ನೇ ಓವರಿನಲ್ಲಿ ಆಸಿಫ್ ಮತ್ತು ಅನಿಲ್ ಅವರ ವಿಕೆಟ್‌ಗಳನ್ನು ಪಡೆದರು. 19ನೇ ಓವರಿನಲ್ಲಿ ಆನ್ರಿಚ್ ನಾಕಿಯಾ ಅವರು ಕುಶಲ್ ಮಲ್ಲ ಅವರನ್ನು ಬೌಲ್ಡ್ ಮಾಡಿದರು. ಹೀಗಾಗಿ ಪಂದ್ಯ ರೋಚಕ ಸ್ಥಿತಿಗೆ ತಲುಪಿತು. ಈ ವಿಶ್ವಕಪ್‌ನಲ್ಲಿ ತಂಡವನ್ನು ಸೇರಿಕೊಂಡ ಸಂದೀಪ್ ಲಾಮಿಚಾನೆ ಅವರ ಉಪಸ್ಥಿತಿ ತಂಡದ ಮನೋಬಲವನ್ನು ಹೆಚ್ಚಿಸಿದಂತೆ ಕಂಡಿತು.

ಮೊದಲು ಆಡಿದ ಹರಿಣಗಳ ಪ್ರಮುಖ ಬ್ಯಾಟರ್‌ಗಳು ನೇಪಾಳದ ಸ್ಪಿನ್ ದಾಳಿಯೆದುರು ಪರದಾಡಿದರು. ಹೆಂಡ್ರಿಕ್ಸ್, ಒಂದು ಸಿಕ್ಸರ್, ಐದು ಬೌಂಡರಿಗಳಿದ್ದ 43 ರನ್ (49 ಎ) ಹೊಡೆದು 'ಟಾಪ್ ಸ್ಕೋರರ್' ಎನಿಸಿದರು. ಕೊನೆಯಲ್ಲಿ ಟ್ರಿಸ್ಟನ್ ಸ್ಟಬ್ಸ್ ಲಗುಬಗನೇ 18 ಎಸೆತಗಳಲ್ಲಿ 27 ರನ್ ಹೊಡೆದರು. ಭುರ್ತೆಲ್ ಸತತ ಎರಡು ಎಸೆತಗಳಲ್ಲಿ ಮಾರ್ಕೊ ಯಾನ್ಸೆನ್ ಮತ್ತು ಕಗಿಸೊ ರಬಾಡ ವಿಕೆಟ್‌ಗಳನ್ನು ಪಡೆದರು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 7 ವಿಕೆಟ್‌ಗೆ 115 (ರೀಝಾ ಹೆಂಡ್ರಿಕ್ಸ್ 43, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 27; ಕುಶಲ್ ಭುರ್ತೆಲ್ 19ಕ್ಕೆ4, ದೀಪೇಂದ್ರ ಸಿಂಗ್ ಐರಿ 21ಕ್ಕೆ3); **ನೇಪಾಳ:** 20 ಓವರುಗಳಲ್ಲಿ 7 ವಿಕೆಟ್‌ಗೆ 114 (ಆಸಿಫ್ ಶೇಖ್ 42, ಅನಿಲ್ ಸಹ 27; ತಬ್ರೇಜ್ ಶಮ್ಸಿ 19ಕ್ಕೆ4, ಏಡನ್ ಮರ್ಕರಂ 8ಕ್ಕೆ1, ಆ್ಯನ್ರಿಚ್ ನಾಕಿಯಾ 27ಕ್ಕೆ1).
ಪಂದ್ಯದ ಆಟಗಾರ: ತಬ್ರೇಜ್ ಸಂಶಿ

ಮಳೆ: ಭಾರತ–ಕೆನಡಾ ಪಂದ್ಯ ರದ್ದು

ಲಾಡರ್‌ಹಿಲ್, ಅಮೆರಿಕ (ಪಿಟಿಐ): ಈ ಬಾರಿಯ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮತ್ತೊಂದು ಪಂದ್ಯವು ಮಳೆಯ ಆಟಕ್ಕೆ ಕೊಚ್ಚಿಹೋಯಿತು.

ಶನಿವಾರ ಇಲ್ಲಿ ಆಯೋಜನೆಗೊಂಡಿದ್ದ ಎ ಗುಂಪಿನ ಭಾರತ ಮತ್ತು ಕೆನಡಾ ನಡುವಣ ಪಂದ್ಯವು ರದ್ದಾಯಿತು. ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಿಕೆ ಮಾಡಲಾಯಿತು. ಇದರೊಂದಿಗೆ ಕೆನಡಾ ತಂಡವು ಒಟ್ಟು 3 ಅಂಕ ಗಳಿಸಿತು.

ಭಾರತ ತಂಡವು ಗುಂಪಿನಲ್ಲಿ ಈಗಾಗಲೇ ಅಗ್ರಸ್ಥಾನ ಪಡೆದು ಸೂಪರ್ 8ರ ಹಂತ ಪ್ರವೇಶಿಸಿದೆ. ಎರಡನೇ ಸ್ಥಾನದಲ್ಲಿರುವ ಅಮೆರಿಕವೂ ಎಂಟರ ಹಂತಕ್ಕೆ ಅರ್ಹತೆ ಗಳಿಸಿದೆ. ಶುಕ್ರವಾರ ಅಮೆರಿಕ ಮತ್ತು ಐರ್ಲೆಂಡ್ ನಡುವಣ ಪಂದ್ಯವೂ ಮಳೆಯಿಂದಾಗಿ ರದ್ದಾಗಿತ್ತು.

ರಾತ್ರಿ 8 ಗಂಟೆಗೆ ಪಂದ್ಯ ಆರಂಭವಾಗಬೇಕಿತ್ತು. ಆದರೆ ಅದಕ್ಕೂ ಮುನ್ನವೇ ಮಳೆ ಸುರಿಯಲಾರಂಭಿಸಿದ ಕಾರಣ ಟಾಸ್ ಹಾಕಲಿಲ್ಲ. ನಂತರ ಅಂಪೈರ್‌ಗಳು ಎರಡು ಬಾರಿ ಮೈದಾನವನ್ನು ಪರಿಶೀಲಿಸಿದರು. ರಾತ್ರಿ 9ರ ನಂತರ (ಭಾರತೀಯ ಕಾಲಮಾನ) ಪರಿಶೀಲನೆ ಮಾಡಿ ಪಂದ್ಯವನ್ನು ರದ್ದುಗೊಳಿಸಿದರು.


ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಆಟಗಾರ ವಿರಾಟ್ ಕೊಹ್ಲಿ ಮತ್ತು ನೆರವು ಸಿಬ್ಬಂದಿ –ಎಎಫ್‌ಪಿ ಚಿತ್ರ

ಇಂದಿನ ಪಂದ್ಯಗಳು

ಆಸ್ಟ್ರೇಲಿಯಾ Vs ಸ್ಕಾಟ್ಲೆಂಡ್	ಬೆಳಿಗ್ಗೆ 6
ಪಾಕಿಸ್ತಾನ Vs ಐರ್ಲೆಂಡ್	ರಾತ್ರಿ 8

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್ ಆ್ಯಪ್

ಪಾಕಿಸ್ತಾನ ತಂಡದ ವೈಫಲ್ಯ: ಆಕ್ರೋಶ

ಕರಾಚಿ (ಎಎಫ್‌ಪಿ): ಮೊದಲ ಸುತ್ತಿನಲ್ಲೇ ಹೊರಬಿದ್ದು ಮುಖಭಂಗ ಅನುಭವಿಸಿರುವ ಪಾಕ್ ತಂಡದ ವಿರುದ್ಧ ಮಾಜಿ ಸ್ಟಾರ್ ಆಟಗಾರರು ಹರಿಹಾಯ್ದಿದ್ದಾರೆ. ತಂಡದಲ್ಲಿ ಒಡಕು, ಪಕ್ಷಪಾತ ಈ ಹಿನ್ನಡೆಗೆ ಕಾರಣ ಎಂದಿದ್ದಾರೆ.

ಈ ಹಿಂದಿನ ಟಿ20 ವಿಶ್ವಕಪ್‌ಗಳಲ್ಲಿ ಪಾಕಿಸ್ತಾನ ಇಷ್ಟು ಬೇಗ ನಿರ್ಗಮಿಸಿರಲಿಲ್ಲ. ಐರ್ಲೆಂಡ್ ವಿರುದ್ಧ ಪಂದ್ಯ ಆಡಲು ಇದ್ದರೂ 2009ರ ಚಾಂಪಿಯನ್ ತಂಡ ಅದನ್ನು ಔಪಚಾರಿಕವಷ್ಟೇ ಆಡಬೇಕಿದೆ. ಅಮೆರಿಕ ಎದುರು ಸೂಪರ್ ಓವರ್‌ನಲ್ಲಿ ಆಘಾತ ಅನುಭವಿಸಿದ್ದ ಪಾಕ್, ನಂತರ ಸಾಂಪ್ರದಾಯಿಕ ಎದುರಾಳಿ ಭಾರತ ವಿರುದ್ಧ ಅಲ್ಪ ಅಂತರದ ಸೋಲು ಕಂಡಿತ್ತು. ಕೆನಡಾ ವಿರುದ್ಧ ಜಯಗಳಿಸಿತ್ತು.

'ತಾವು ಚೆನ್ನಾಗಿ ಆಡದಿದ್ದರೆ, ಕೋಚ್‌ಗಳನ್ನು ಕಿತ್ತುಹಾಕುತ್ತಾರೆ. ತಮಗೇನೂ ಆಗದು ಎಂದು ಪಾಕಿಸ್ತಾನದ ಆಟಗಾರರು ಭಾವಿಸಿದ್ದಾರೆ. ಇಡಿಯ ತಂಡ ಬದಲಾಯಿಸಿ ಕೋಚ್‌ಗಳನ್ನು ಉಳಿಸಿಕೊಳ್ಳಲು ಇದು ಸಕಾಲ' ಎಂದು ಮಾಜಿ ನಾಯಕ ವಾಸಿಂ ಅಕ್ರಂ ಅವರು ತಂಡ ಭಾರತಕ್ಕೆ ಸೋತ ನಂತರ ಹೇಳಿದ್ದರು.

ತಂಡದಲ್ಲಿ ಆಂತರಿಕ ಕಲಹ ಇರುವ ಮಾತುಗಳೂ ಕೇಳಿಬಂದಿದ್ದವು. ಅರ್ಹತೆಗಿಂತ, ಸ್ವಜನಪಕ್ಷಪಾತದ ಕಾರಣ ಕೆಲವು ಆಟಗಾರರು ತಂಡದಲ್ಲಿ ಸ್ಥಾನ ಪಡೆಯುತ್ತಿದ್ದರೆಂಬ ದೂರುಗಳಿದ್ದವು. ಸರಿಯಾದ ಆಟಗಾರರನ್ನು ತಂಡ ಆಯ್ಕೆ ಮಾಡಲಿಲ್ಲ ಎಂದು ಅಭಿಮಾನಿಗಳು, ವಿಶ್ಲೇಷಕರು ದೂರಿದ್ದಾರೆ.

ಬಾಬರ್ ಆಜಂ ಅವರಿಗೆ ಆಪ್ತರಾಗಿರುವ ಕಾರಣ ಶದಾಬ್ ಖಾನ್ ಅವರನ್ನು ತಂಡದಲ್ಲಿ ಉಳಿಸಲಾಯಿತು. ಹೀಗಾಗಿ ಪಾಕಿಸ್ತಾನ್ ಸೂಪರ್ ಲೀಗ್‌ನ ಅತ್ಯಧಿಕ ವಿಕೆಟ್ ಗಳಿಕೆದಾರ ಉಸ್ಮಾನ್ ಮಿರ್ ಅವರನ್ನು ಕೈಬಿಡಬೇಕಾಯಿತು' ಎಂದು ಮಾಜಿ ಆಟಗಾರ ಕಮ್ರಾನ್ ಅಕ್ಮಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಿತ್ರನೆಂಬ ಕಾರಣ ತನಗೆ ಬೇಕಾದ ಆಟಗಾರರನ್ನು ಆಡಿಸಿದರೆ ಇಂಥ ಫಲಿತಾಂಶ ಬರುತ್ತದೆ. ಮಿರ್ ತಂಡದಲ್ಲಿರಬೇಕಿತ್ತು. ಇದು ದೊಡ್ಡ ಅನ್ಯಾಯ' ಎಂದು ಅವರು ಎಎಫ್‌ಪಿಗೆ ತಿಳಿಸಿದ್ದಾರೆ. 'ನನಗ ಜಿಗುಪ್ಸೆ ಮೂಡಿದೆ. ವಿಶ್ವಕಪ್‌ನ ಯಾವುದೇ ಪಂದ್ಯಗಳನ್ನು ಇನ್ನು ನೋಡಲ್ಲ' ಎಂದು ಪಾಕ್ ಅಭಿಮಾನಿ ಮೊಹಮ್ಮದ್ ಆಸಿಂ ಹೇಳಿದ್ದಾರೆ.

'ಬದಲಾವಣೆಗಳು ಅನಿವಾರ್ಯ. ಪಾಕಿಸ್ತಾನ ತಂಡಕ್ಕೆ ಮೇಜರ್ ಸರ್ಜರಿ ಅಗತ್ಯವಿದೆ' ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಮೊಹ್ಸಿನ್ ನಕ್ವಿ ಹೇಳಿದ್ದಾರೆ.

ಗುತ್ತಿಗೆ ಮರುಪರಿಶೀಲನೆ?

ಲಾಹೋರ್ (ಪಿಟಿಐ): ಟಿ20 ವಿಶ್ವಕಪ್‌ನಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದಿರುವ ಕಾರಣ ಪಾಕಿಸ್ತಾನ ತಂಡದ ಕ್ರಿಕೆಟಿಗರ ಕೇಂದ್ರಿಯ ಗುತ್ತಿಗೆ ಮರುಪರಿಶೀಲಿಸಿ, ವೇತನ ಕಡಿತಗೊಳಿಸಲು ಪಿಸಿಬಿ ಚಿಂತನೆ ನಡೆಸುತ್ತಿದೆ.

ಝಕಾ ಅಶ್ರಫ್ ಅವಧಿಯಲ್ಲಿ ಆಟಗಾರರಿಗೆ ನೀಡಿರುವ ಕೇಂದ್ರೀಯ ಗುತ್ತಿಗೆಯನ್ನು ಮರುವಿಮರ್ಶೆಗೆ ಒಳಪಡಿಸಬೇಕು ಎಂದು ಕೆಲವು ಅಧಿಕಾರಿಗಳು ಹಾಗೂ ಮಾಜಿ ಆಟಗಾರರು ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಅವರಿಗೆ ಸಲಹೆ ಮಾಡಿದ್ದಾರೆ ಎಂದು ಮಂಡಳಿಯ ವಿಶ್ವಸನೀಯ ಮೂಲ ತಿಳಿಸಿದೆ.

ಸೌಥಿ ದಾಳಿಗೆ ಕುಸಿದ ಯುಗಾಂಡ; ಕಿವೀಸ್ ಪಡೆಗೆ ಮೊದಲ ಜಯ

ಟ್ರಿನಿಡಾಡ್ (ಪಿಟಿಐ): ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 8ರ ಹಾದಿಯಿಂದ ಈಗಾಗಲೇ ಹೊರಬಿದ್ದಿರುವ ನ್ಯೂಜಿಲೆಂಡ್ ತಂಡವು ಯುಗಾಂಡ ಎದುರು ಜಯ ಸಾಧಿಸಿತು.

ಸಿ ಗುಂಪಿನಲ್ಲಿ ಕಿವೀಸ್ ಬಳಗಕ್ಕೆ ಇದು ಮೊದಲ ಜಯವಾಗಿದೆ. ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕಿವೀಸ್ ವೇಗದ ಜೋಡಿ ಟಿಮ್ ಸೌಥಿ (4ಕ್ಕೆ3) ಮತ್ತು ಟ್ರೆಂಟ್ ಬೌಲ್ಟ್ (7ಕ್ಕೆ2) ಯುಗಾಂಡ ತಂಡವನ್ನು ಕೇವಲ 40 ರನ್‌ಗಳಿಗೆ ಕಟ್ಟಿಹಾಕಿದರು. ಆದರೆ ಯುಗಾಂಡ ತಂಡದ ಬ್ಯಾಟರ್‌ಗಳು ಈ ಮೊತ್ತ ಗಳಿಸಲು ಒಟ್ಟು 18.4 ಓವರ್‌ಗಳನ್ನು ಆಡಿದ್ದು ವಿಶೇಷ.

ಈ ಗುರಿಯನ್ನು ಬೆನ್ನಟ್ಟಿದ ಕಿವೀಸ್ ತಂಡವು 5.2 ಓವರ್‌ಗಳಲ್ಲಿ 1 ವಿಕೆಟ್‌ಗೆ 41 ರನ್ ಗಳಿಸಿತು. ಡೆವೊನ್ ಕಾನ್ವೆ 15 ಎಸೆತಗಳಲ್ಲಿ ಅಜೇಯ 22 ರನ್ ಗಳಿಸಿದರು. ಅದರಲ್ಲಿ 4 ಬೌಂಡರಿ ಸೇರಿದ್ದವು.


ನ್ಯೂಜಿಲೆಂಡ್ ತಂಡದ ಬೌಲರ್‌ಗಳಾದ ಟಿಮ್ ಸೌಥಿ ಮತ್ತು ಮಿಚೆಲ್ ಸ್ಯಾಂಟನರ್ ಸಂಭ್ರಮ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಯುಗಾಂಡ: 18.4 ಓವರ್‌ಗಳಲ್ಲಿ 40 (ಕೆ. ವೈಸ್ವಾ 11, ಟ್ರೆಂಟ್ ಬೌಲ್ಟ್ 7ಕ್ಕೆ2, ಟಿಮ್ ಸೌಥಿ 4ಕ್ಕೆ3, ಮಿಚೆಲ್ ಸ್ಯಾಂಟನರ್ 8ಕ್ಕೆ2, ರಚಿನ್ ರವೀಂದ್ರ 9ಕ್ಕೆ2) **ನ್ಯೂಜಿಲೆಂಡ್:** 5.2 ಓವರ್‌ಗಳಲ್ಲಿ 1 ವಿಕೆಟ್‌ಗೆ 41 (ಡೆವೊನ್ ಕಾನ್ವೆ ಔಟಾಗದೆ 22, ರಜತ್ ಅಲಿ ಶಾ 10ಕ್ಕೆ1).
ಪಂದ್ಯದ ಆಟಗಾರ: ಟಿಮ್ ಸೌಥಿ

ಅಫ್ಗನ್ ಸ್ಪಿನ್ನರ್ ಮುಜೀಬ್ ಹೊರಕ್ಕೆ

ಗ್ರೋಸ್ ಐಲೆಟ್ (ಪಿಟಿಐ): ಬೆರಳಿನ ಗಾಯದಿಂದಾಗಿ ಆಫ್ ಸ್ಪಿನ್ನರ್ ಮುಜೀಬ್ ಉರ್ ರೆಹಮಾನ್ ಟಿ20 ವಿಶ್ವಕಪ್‌ನಿಂದ ಹೊರಗುಳಿದಿದ್ದು, ಅವರ ಬದಲಿಗೆ ಬ್ಯಾಟರ್ ಹಜರತ್‌ಉಲ್ಲಾ ಝಜೈ ಅಫ್ಗಾನಿಸ್ತಾನ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬಲ ತೋರುಬೆರಳಿಗೆ ಗಾಯ ಮಾಡಿಕೊಂಡಿರುವ 23 ವರ್ಷದ ಮುಜೀಬ್, ಯುಗಾಂಡ ವಿರುದ್ಧದ ಆರಂಭಿಕ ಪಂದ್ಯದಲ್ಲಿ ಮಾತ್ರ ಆಡಿದ್ದಾರೆ.

'ಟಿ20 ವಿಶ್ವಕಪ್ 2024ರ ತಾಂತ್ರಿಕ ಕಮಿಟಿ ಅಫ್ಗಾನಿಸ್ತಾನ ತಂಡದಲ್ಲಿ ಮುಜೀಬ್ ಬದಲಿಗೆ ಹಜರತ್‌ಉಲ್ಲಾ ಝಜೈ ಅವರನ್ನು ಅನುಮೋದಿಸಿದೆ' ಎಂದು ಐಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಈಗಾಗಲೇ ಸೂಪರ್ 8 ಹಂತಕ್ಕೆ ಅರ್ಹತೆ ಪಡೆದಿರುವ ಅಫ್ಗಾನಿಸ್ತಾನ ತಂಡ, ತನ್ನ ಗುಂಪಿನಲ್ಲಿ ಅತಿಥೇಯ ವೆಸ್ಟ್‌ಇಂಡೀಸ್ ವಿರುದ್ಧ ಕೊನೆಯ ಪಂದ್ಯವನ್ನು ಆಡಲಿದೆ.

ಹಾಕಿ ಶಿಬಿರಕ್ಕೆ 40 ಸಂಭವನೀಯರು

ಬೆಂಗಳೂರು (ಪಿಟಿಐ): ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ (ಸಾಯ್) ಜೂನ್ 16 ರಿಂದ 63 ದಿನಗಳ ಕಾಲ ನಡೆಯಲಿರುವ ಜೂನಿಯರ್ ಪುರುಷರ ರಾಷ್ಟ್ರೀಯ ತರಬೇತಿ ಶಿಬಿರಕ್ಕೆ 40 ಆಟಗಾರರ ಸಂಭವನೀಯ ತಂಡವನ್ನು ಹಾಕಿ ಇಂಡಿಯಾ ಶನಿವಾರ ಪ್ರಕಟಿಸಿದೆ.

ಭಾರತ ಜೂನಿಯರ್ ಪುರುಷರ ತಂಡದ ಯುರೋಪ್ ಪ್ರವಾಸದ ಬೆನ್ನಲ್ಲೆ ಈ ಶಿಬಿರ ನಡೆಯುತ್ತಿದೆ. ಅಲ್ಲಿ ತಂಡವು ಮೇ 20-29 ರವರೆಗೆ ಬೆಲ್ಜಿಯಂ, ಜರ್ಮನಿ ಮತ್ತು ನೆದರ್ಲೆಂಡ್ ಕ್ಲಬ್ ತಂಡ ಬ್ರೆಡೇಸ್ ಹಾಕಿ ವೆರೆನಿಜಿಂಗ್ ಪುಷ್ ವಿರುದ್ಧ ಐದು ಪಂದ್ಯಗಳನ್ನು ಆಡಿತು.

ಕೋಚ್ ಜನಾರ್ದನ ಸಿ.ಬಿ ನೇತೃತ್ವದ ಮತ್ತು ಹೈಪರ್ಫಾರ್ಮೆನ್ಸ್ ನಿರ್ದೇಶಕ ಹರ್ಮನ್ ಕ್ರೂಸ್ ಅವರ ಮೇಲ್ವಿಚಾರಣೆಯಲ್ಲಿ ಶಿಬಿರವು ಆಗಸ್ಟ್ 18 ರಂದು ಕೊನೆಗೊಳ್ಳಲಿದೆ.


ಹರ್ಮನ್ ಕ್ರೂಸ್

ಜನಾರ್ದನ ಮಾತನಾಡಿ, 'ನಮ್ಮಲ್ಲಿ ಪ್ರತಿಭಾವಂತ ಆಟಗಾರರ ತಂಡ ಇದೆ. ತರಬೇತಿ ಶಿಬಿರಗಳು ಅವರ ಸಂಪೂರ್ಣ ಸಾಮರ್ಥ್ಯವನ್ನು ತಲುಪಲು ಸಹಾಯ ಮಾಡುತ್ತದೆ. ಯಾವುದೇ ಸವಾಲನ್ನು ಎದುರಿಸಲು ಸಿದ್ಧವಾಗಿರುವ ಒಗ್ಗಟ್ಟಿನ ಮತ್ತು ಅಸಾಧಾರಣ ತಂಡವನ್ನು ಅಭಿವೃದ್ಧಿಪಡಿಸುವುದು ನಮ್ಮ ಗುರಿಯಾಗಿದೆ' ಎಂದು ಹೇಳಿದ್ದಾರೆ.

ಹಾಕಿ ಫೈವ್ಸ್: ಏಜೀಸ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಏಜೀಸ್) ತಂಡವು ಹಾಕಿ ಕರ್ನಾಟಕ ಫೈವ್ಸ್ ಪುರುಷರ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಶನಿವಾರ ನಡೆದ ಫೈನಲ್‌ನಲ್ಲಿ ಅಕೌಂಟೆಂಟ್ ತಂಡವು 3–1ರಿಂದ ಕೆನರಾ ಬ್ಯಾಂಕ್ ತಂಡವನ್ನು ಸೋಲಿಸಿತು. ಮೂರನೇ ಸ್ಥಾನ ನಿರ್ಣಯಕ್ಕಾಗಿ ನಡೆದ ಪಂದ್ಯದಲ್ಲಿ ನೈಋತ್ಯ ರೈಲ್ವೆ ತಂಡವು 5–4ರಿಂದ ಯುವ ಸಬಲೀಕರಣ ಕ್ರೀಡಾ ಇಲಾಖೆಯ 'ಬಿ' ತಂಡವನ್ನು ಮಣಿಸಿತು. ಮೊದಲ ಮೂರು ಸ್ಥಾನ ಪಡೆದ ತಂಡಗಳು ಕ್ರಮವಾಗಿ ₹30 ಸಾವಿರ, ₹20 ಸಾವಿರ ಮತ್ತು ₹ 10 ಸಾವಿರ ನಗದು ಬಹುಮಾನ ಪಡೆದವು.

ಹಾಕಿ ಇಂಡಿಯಾ ಮಾಸ್ಟರ್ಸ್ ಕಪ್ (40 ವರ್ಷ ಮೇಲಿನವರ) ಟೂರ್ನಿಯಲ್ಲಿ ಬೆಂಗಳೂರು ಬ್ಲೂಸ್ ಪ್ರಶಸ್ತಿ ಗೆದ್ದುಕೊಂಡಿತು. ಪ್ರಿಮ್‌ರೋಸ್ ಹಾಕಿ ಕ್ಲಬ್ ಮತ್ತು ಸೈಮನ್ ಹಾಕಿ ಕ್ಲಬ್ ತಂಡಗಳು ಕ್ರಮವಾಗಿ ರನ್ನರ್ಸ್ ಅಪ್ ಮತ್ತು ಮೂರನೇ ಸ್ಥಾನ ಪಡೆದವು.

ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ ಸೆಲ್ಫಿ ವಿಡಿಯೊ

#ಮೆಲೊಡಿ: ಮೆಲೊನಿ – ಮೋದಿ ಸೆಲ್ಫಿ!

ಬಾರಿ (ಇಟಲಿ): 'ಹಾಯ್ ಫ್ರೆಂಡ್ಸ್, ಫ್ರಂ #ಮೆಲೊಡಿ'... ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗಿನ ಸ್ನೇಹವನ್ನು ತೋರಿಸುವ ಸೆಲ್ಫಿ ವಿಡಿಯೊಕ್ಕೆ ನೀಡಿರುವ ಅಡಿಶೀರ್ಷಿಕೆ ಇದು.

ಈ ಸೆಲ್ಫಿ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಶನಿವಾರ ವ್ಯಾಪಕವಾಗಿ ಹರಿದಾಡಿದೆ. ಮೆಲೊನಿ ಮತ್ತು ಮೋದಿ ಹೆಸರುಗಳನ್ನು ಬೆಸೆದು ಅವರು 'ಮೆಲೊಡಿ' ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಸೆಲ್ಫಿ ವಿಡಿಯೊ ಹಂಚಿಕೊಂಡಿದ್ದಾರೆ.

ದಕ್ಷಿಣ ಇಟಲಿಯ ಅಪ್ಪೂಲಿಯದಲ್ಲಿ ಮೋದಿ ಅವರು ಮೆಲೊನಿ ಅವರನ್ನು ಶುಕ್ರವಾರ ಭೇಟಿ ಮಾಡಿದರು. ಜಿ–7 ರಾಷ್ಟ್ರಗಳ ಶೃಂಗಸಭೆಗೆ ತಮ್ಮನ್ನು ಆಹ್ವಾನಿಸಿದ್ದಕ್ಕೆ ಮೋದಿ ಅವರು ಮೆಲೊನಿ ಅವರಿಗೆ ಧನ್ಯವಾದ ಹೇಳಿದರು. ಮೋದಿ ಅವರು ಪ್ರಧಾನಿಯಾಗಿ ಸತತ ಮೂರನೆಯ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ ನಂತರದ ಮೊದಲ ವಿದೇಶ ಪ್ರವಾಸ ಇದು.

ಮೆಲೊನಿ ಅವರು ಮೋದಿ ಅವರ ಜೊತೆಗಿನ ಐದು ಸೆಕೆಂಡುಗಳ ಸೆಲ್ಫಿ ವಿಡಿಯೊವನ್ನು ತಮ್ಮ ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿದ್ದಾರೆ.

ಈ ವಿಡಿಯೊದಲ್ಲಿ ಮೆಲೊನಿ ಅವರು ಮೋದಿ ಅವರ ಜೊತೆ ನಿಂತು, 'ಹೆಲೊ ಫ್ರಂ ಮೆಲೊಡಿ ಟೀಂ' ಎಂದು ಹೇಳಿದ್ದಾರೆ. ಈ ಸೆಲ್ಫಿ ವಿಡಿಯೊವನ್ನು ಮೋದಿ ಅವರು ಹಂಚಿಕೊಂಡಿದ್ದು, ಅದಕ್ಕೆ 'ಭಾರತ–ಇಟಲಿ ಸಂಬಂಧ ಚಿರಕಾಲ ಬಾಳಲಿ' ಎಂದು ಬರೆದಿದ್ದಾರೆ.

ಜಿ–7 ಶೃಂಗಸಭೆಯಲ್ಲಿ ಮೋದಿ ಮತ್ತು ಮೆಲೊನಿ ಅವರು ಕ್ಲಿಕ್ಕಿಸಿಕೊಂಡ ಸೆಲ್ಫಿಯೊಂದನ್ನು ಸಾಮಾಜಿಕ ಜಾಲತಾಣಗಳ ಬಳಕೆದಾರರು ವ್ಯಾಪಕವಾಗಿ ಹಂಚಿಕೊಂಡಿದ್ದರು.


ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಕ್ಷಣ –ಪಿಟಿಐ ಚಿತ್ರ

ಮೆಲೊನಿ ಮತ್ತು ಮೋದಿ ಅವರ ನಡುವೆ ಶುಕ್ರವಾರ ದ್ವಿಪಕ್ಷೀಯ ಮಾತುಕತೆ ನಡೆಯಿತು. ಜಾಗತಿಕ ವೇದಿಕೆಗಳಲ್ಲಿ, ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್ ಸೇರಿದಂತೆ ಹಲವು ಬಹುಪಕ್ಷೀಯ ಕಾರ್ಯಕ್ರಮಗಳಲ್ಲಿ ಭಾರತ ಮತ್ತು ಇಟಲಿ ನಡುವಿನ ಸಹಕಾರವನ್ನು ಇನ್ನಷ್ಟು ಹೆಚ್ಚಿಸಲು ಇಬ್ಬರೂ ನಾಯಕರು ಒಪ್ಪಿದರು.

'ಪ್ರಧಾನಿ ಜಾರ್ಜಿಯಾ ಮೆಲೊನಿ ಅವರ ಜೊತೆಗಿನ ಭೇಟಿ ಬಹಳ ಉತ್ತಮವಾಗಿತ್ತು' ಎಂದು ಮೋದಿ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ. 'ವಾಣಿಜ್ಯ, ಇಂಧನ, ರಕ್ಷಣೆ ಹಾಗೂ ಇನ್ನೂ ಹಲವು ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳ ಸಂಬಂಧವನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ನಾವು ಚರ್ಚಿಸಿದೆವು. ಜೈವಿಕ ಇಂಧನ, ಆಹಾರ ಸಂಸ್ಕರಣೆ ಮತ್ತು ಖನಿಜಗಳಂತಹ ಭವಿಷ್ಯದ ಕ್ಷೇತ್ರದಲ್ಲಿ ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡಲಿವೆ' ಎಂದು ಮೋದಿ ಅವರು ಸಭೆಯ ನಂತರ ತಿಳಿಸಿದ್ದಾರೆ.

ಐಮೆಕ್ ಯೋಜನೆಗೆ ಬದ್ಧತೆ ವ್ಯಕ್ತಪಡಿಸಿದ ಜಿ7

ಬಾರಿ (ಇಟಲಿ) (ಪಿಟಿಐ): ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್ (ಐಮೆಕ್) ಒಳಗೊಂಡಂತೆ ವಿವಿಧ ಮೂಲಸೌಕರ್ಯ ಯೋಜನೆಗಳಿಗೆ ಒತ್ತು ನೀಡಲು ಜಿ–7 ದೇಶಗಳ ಪ್ರಮುಖರು ಬದ್ಧತೆ ವ್ಯಕ್ತಪಡಿಸಿದ್ದಾರೆ.

ಶೃಂಗಸಭೆಯ ಆತಿಥ್ಯ ವಹಿಸಿದ್ದ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರ ಆಹ್ವಾನದ ಮೇರೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಭೆಯಲ್ಲಿ ಭಾಗಿಯಾಗಿದ್ದರು.

ಜಿ–7 ದೇಶಗಳ ಶೃಂಗಸಭೆಯ ಕೊನೆಯಲ್ಲಿ, ಶುಕ್ರವಾರ ಹೊರಡಿಸಿರುವ ಹೇಳಿಕೆಯಲ್ಲಿ ಈ ಯೋಜನೆಯ ಬಗ್ಗೆ ಉಲ್ಲೇಖವಿದೆ. ಇಂಡೊ–ಪೆಸಿಫಿಕ್ ಪ್ರದೇಶವನ್ನು ನಿಯಮಗಳಿಗೆ ಅನುಗುಣವಾಗಿ ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ಇರಿಸುವುದಕ್ಕೆ ಕೂಡ ಈ ದೇಶಗಳ ಮುಖಂಡರು ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

ಐಮೆಕ್ ಯೋಜನೆಯು ಸೌದಿ ಅರೇಬಿಯಾ, ಭಾರತ, ಅಮೆರಿಕ ಮತ್ತು ಯುರೋಪಿನ ನಡುವೆ ಬೃಹತ್ತಾದ ರೈಲು, ರಸ್ತೆ ಮತ್ತು ಹಡಗು ಮಾರ್ಗವನ್ನು ರೂಪಿಸುವ ಆಲೋಚನೆ ಹೊಂದಿದೆ. ಈ ಮೂಲಕ ಏಷ್ಯಾ, ಮಧ್ಯಪ್ರಾಚ್ಯ ಹಾಗೂ ಪಶ್ಚಿಮದ ದೇಶಗಳನ್ನು ಬೆಸೆಯುವುದು ಯೋಜನೆಯ ಉದ್ದೇಶ.

ಚೀನಾ ಆರಂಭಿಸಿರುವ ಬೆಲ್ಟ್ ಆ್ಯಂಡ್ ರೋಡ್ (ಬಿಆರ್‌ಐ) ಯೋಜನೆಗೆ ಎದುರಾಗಿ, ಪ್ರಭಾವಿ ಯೋಜನೆಯೊಂದನ್ನು ರೂಪಿಸಲು ಸಮಾನ ಮನಸ್ಕ ದೇಶಗಳ ಉಪಕ್ರಮವನ್ನಾಗಿಯೂ ಐಮೆಕ್ ಯೋಜನೆಯನ್ನು ಗುರುತಿಸಲಾಗಿದೆ. ಬಿಆರ್‌ಐ ಯೋಜನೆಯಲ್ಲಿನ ಪಾರದರ್ಶಕತೆಯ ಕೊರತೆ ಹಾಗೂ ಕೆಲವು ದೇಶಗಳ ಸಾರ್ವಭೌಮತ್ವಕ್ಕೆ ಗೌರವ ಕೊಡದೆ ಇರುವುದಕ್ಕಾಗಿ ಆ ಯೋಜನೆಯ ಬಗ್ಗೆ ಟೀಕೆಗಳು ಇವೆ.

ಐಮೆಕ್‌ನ ರೂಪುರೇಷೆಗಳನ್ನು ನವದೆಹಲಿಯಲ್ಲಿ ಕಳೆದ ವರ್ಷ ನಡೆದ ಜಿ–20 ದೇಶಗಳ ಶೃಂಗಸಭೆಯಲ್ಲಿ ಅಂತಿಮಗೊಳಿಸಲಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಉಕ್ರೇನ್‌ಗೆ ಬೆಂಬಲ ನೀಡುವುದಾಗಿಯೂ ಜಿ–7 ದೇಶಗಳು ಹೇಳಿವೆ.

ವರ್ಷದ ಅಂತ್ಯದ ವೇಳೆಗೆ ಉಕ್ರೇನ್‌ಗೆ ಅಂದಾಜು 50 ಬಿಲಿಯನ್ ಡಾಲರ್ (₹4.17 ಲಕ್ಷ ಕೋಟಿ) ನೆರವು ಸಿಗುವಂತೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಈ ದೇಶಗಳು ಹೇಳಿವೆ. ಜಿ–7 ಶೃಂಗದಲ್ಲಿ ಪೋಪ್ ಫ್ರಾನ್ಸಿಸ್ ಅವರು ಭಾಗಿಯಾಗಿದ್ದರು. ಈ ಶೃಂಗದಲ್ಲಿ ಪಾಲ್ಗೊಂಡ ಮೊದಲ ಧರ್ಮಗುರು ಅವರು.

ದೆಹಲಿ, ಹರಿಯಾಣದಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಲು ಸಿದ್ಧತೆ

ಕಾಂಗ್ರೆಸ್–ಎಎಪಿ ಮೈತ್ರಿಗೆ ಧಕ್ಕೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಮಟ್ಟದಲ್ಲಿ ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆ ಎದುರಿಸಿದ್ದ ಕಾಂಗ್ರೆಸ್ ಮತ್ತು ಎಎಪಿ ಪಕ್ಷಗಳು ದೆಹಲಿ ಹಾಗೂ ಹರಿಯಾಣದಲ್ಲಿ ತಮ್ಮದೇ ಹಾದಿಯನ್ನು ರೂಪಿಸಿಕೊಳ್ಳುವ ಮತ್ತು ಪರಸ್ಪರ ವಿರೋಧಿಸುವ ಮೂಲಕ ಮೈತ್ರಿಯಿಂದ ನಿಧಾನವಾಗಿ ಕಳಚಿಕೊಳ್ಳುವ ಪ್ರಕ್ರಿಯೆ ಆರಂಭಿಸಿವೆ.

ರಾಷ್ಟ್ರದ ರಾಜಧಾನಿಯಲ್ಲಿ ತಲೆದೋರಿರುವ ನೀರಿನ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ದೆಹಲಿ ಕಾಂಗ್ರೆಸ್ ಘಟಕವು ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದೆ. ಮತ್ತೊಂದೆಡೆ ಹರಿಯಾಣದಲ್ಲಿ ಪಕ್ಷದ ಕಾರ್ಯಕರ್ತರ ಸಭೆ ನಡೆಸಿರುವ ಎಎಪಿ, ರ್‍ಯಾಲಿ ಆಯೋಜಿಸಲು ನಿರ್ಧರಿಸಿದೆ. ಸಭೆಯಲ್ಲಿ ಕೇಜ್ರಿವಾಲ್ ಪತ್ನಿ, ಸುನೀತಾ ಕೇಜ್ರಿವಾಲ್ ಪಾಲ್ಗೊಂಡಿದ್ದಾರೆ.

ತಮ್ಮನಡುವಣ ಮೈತ್ರಿ ರಾಷ್ಟ್ರಮಟ್ಟದಲ್ಲಿ ಮತ್ತು ಲೋಕಸಭಾ ಚುನಾವಣೆಗೆ ಮಾತ್ರ ಸೀಮಿತವಾಗಿತ್ತು ಎಂದು ಎರಡೂ ಪಕ್ಷದವರು ಹೇಳಿಕೊಳ್ಳುತ್ತಿದ್ದಾರೆ. ಈ ಮೂಲಕ, ವರ್ಷಾಂತ್ಯದ ವೇಳೆಗೆ ಹರಿಯಾಣದಲ್ಲಿ ಮತ್ತು ಮುಂದಿನ ವರ್ಷದ ಆರಂಭದಲ್ಲಿ ದೆಹಲಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಪರಸ್ಪರರ ವಿರುದ್ಧ ಹೋರಾಡಲು ವೇದಿಕೆ ಅಣಿಗೊಳಿಸುತ್ತಿದ್ದಾರೆ.

ಎಎಪಿ ಮತ್ತು ಕಾಂಗ್ರೆಸ್ ದೆಹಲಿ, ಹರಿಯಾಣ ಹಾಗೂ ಗುಜರಾತ್ ರಾಜ್ಯಗಳಲ್ಲಿ ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆ ಎದುರಿಸಿದ್ದವು. ಆದರೆ, ಅಸ್ಸಾಂ ಮತ್ತು ಪಂಜಾಬ್‌ನಲ್ಲಿ ಸೀಟು ಹಂಚಿಕೆ ಮಾಡದೆ, ಪರಸ್ಪರ ಪೈಪೋಟಿ ನಡೆಸಿದ್ದವು. ಎಎಪಿಯು ಅಸ್ಸಾಂನಲ್ಲಿ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಲು ಬಯಸಿದ್ದರೂ, ಕೊನೆಯ ಕ್ಷಣದಲ್ಲಿ ನಿರ್ಧಾರ ಬದಲಿಸಿತ್ತು. ಗೋವಾದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ಸೂಚಿಸಿತ್ತು.

ವಿಧಾನಸಭಾ ಚುನಾವಣೆಯಲ್ಲಿ ದೆಹಲಿ ಮತ್ತು ಹರಿಯಾಣದಲ್ಲಿ ಪೈಪೋಟಿ ನಡೆಸುವ ಸಾಧ್ಯತೆಯಿದೆ ಎಂದು ಉಭಯ ಪಕ್ಷಗಳು ಈಗಾಗಲೇ ಘೋಷಿಸಿವೆ.

ದೆಹಲಿಯ 280 ಬ್ಲಾಕ್‌ಗಳಲ್ಲಿ ಕಾಂಗ್ರೆಸ್ ವತಿಯಿಂದ ಶನಿವಾರ ಮಣ್ಣಿನ ಮಡಕೆ ಒಡೆಯುವ ಪ್ರತಿಭಟನೆ ನಡೆದಿದೆ. ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್ ಅವರೂ ಪಾಲ್ಗೊಂಡಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 2015ರ ಬಳಿಕ ಒಂದೂ ಸ್ಥಾನ ಗೆದ್ದಿಲ್ಲ. ಆದರೆ 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮತ ಪ್ರಮಾಣ, ಎಎಪಿಗಿಂತ ಹೆಚ್ಚಿತ್ತು. ಈ ಬಾರಿ ಎಎಪಿಯು ನಾಲ್ಕು ಹಾಗೂ ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದವು.

ದೆಹಲಿಯ ಸುಮಾರು 12 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಉತ್ತಮ ಪ್ರದರ್ಶನ ನೀಡಿದೆ ಎಂಬುದು ಲೋಕಸಭಾ ಫಲಿತಾಂಶದ ವಿಶ್ಲೇಷಣೆಯಿಂದ ತಿಳಿದುಬಂದಿದ್ದು, ಆ ಕ್ಷೇತ್ರಗಳತ್ತ ಗಮನ ಹರಿಸಿದೆ ಎಂದು ಮೂಲಗಳು ತಿಳಿಸಿವೆ.

ಅಲ್ಪಸಂಖ್ಯಾತ ಮತ್ತು ದಲಿತ ಮತದಾರರ ವಿಶ್ವಾಸ ಗಳಿಸಲು ಪಕ್ಷಕ್ಕೆ ಸಾಧ್ಯವಾಗಿದ್ದು, ಅದು ಮತಗಳಾಗಿ ಪರಿವರ್ತನೆಯಾಗಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ.


ನವದೆಹಲಿಯಲ್ಲಿನ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಮಣ್ಣಿನ ಮಡಕೆ ಹೊತ್ತು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ಹರಿಯಾಣದಲ್ಲಿ ಸಿದ್ಧತೆ ಆರಂಭ'

ಹರಿಯಾಣದಲ್ಲಿ ಪಕ್ಷವು ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸಿದೆ ಎಂದು ಎಎಪಿ ನಾಯಕ ಸುಶೀಲ್ ಗುಪ್ತಾ ಹೇಳಿದ್ದಾರೆ.

'ಎಎಪಿಯ ಪ್ರತಿಯೊಬ್ಬ ಕಾರ್ಯಕರ್ತ ಹಾಗೂ ನಾಯಕ ಪಕ್ಷವನ್ನು ಬಲಪಡಿಸಲು ಬೇಕಾದ ಸಿದ್ಧತೆಯನ್ನು ಆರಂಭಿಸಲಿದ್ದಾರೆ. ಜೂನ್ 30ರಂದು ಸುನೀತಾ ಕೇಜ್ರಿವಾಲ್ ಅವರ ರ್‍ಯಾಲಿಗೂ ಸಿದ್ಧತೆ ನಡೆಯುತ್ತಿದೆ. ರ್‍ಯಾಲಿ ನಡೆಯುವ ಸ್ಥಳವನ್ನು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು' ಎಂದರು.

ಛತ್ತೀಸ್‌ಗಢ: ಎಸ್‌ಟಿಎಫ್‌ನ ಒಬ್ಬ ಸಿಬ್ಬಂದಿ ಹುತಾತ್ಮ

ಎನ್‌ಕೌಂಟರ್: 8 ನಕ್ಸಲರ ಹತ್ಯೆ

ನಾರಾಯಣಪುರ (ಛತ್ತೀಸ್‌ಗಢ) (ಪಿಟಿಐ): ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯಲ್ಲಿ ಶನಿವಾರ ನಡೆದ ಎನ್‌ಕೌಂಟರ್‌ನಲ್ಲಿ ಎಂಟು ನಕ್ಸಲರ ಹತ್ಯೆ ಮಾಡಲಾಗಿದೆ. ವಿಶೇಷ ಕಾರ್ಯಪಡೆಯ (ಎಸ್‌ಟಿಎಫ್) ಒಬ್ಬ ಸಿಬ್ಬಂದಿ ಹುತಾತ್ಮರಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಎನ್‌ಕೌಂಟರ್ ನಡೆದ ಸ್ಥಳದಲ್ಲಿ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಅಬೂಝ್‌ಮಾಡ್ ಅರಣ್ಯ ಪ್ರದೇಶದಲ್ಲಿ ಶನಿವಾರ ಬೆಳಿಗ್ಗೆ ಗುಂಡಿನ ಚಕಮಕಿ ಆರಂಭವಾಗಿದೆ. ನಾರಾಯಣಪುರ, ಕಾಂಕೇರ್, ದಾಂತೇವಾಡ ಮತ್ತು ಕೊಂಡಗಾಂವ್ ಜಿಲ್ಲೆಗಳ ಭದ್ರತಾ ಸಿಬ್ಬಂದಿಯ ತಂಡಗಳು ನಕ್ಸಲರ ವಿರುದ್ಧ ಜಂಟಿ ಕಾರ್ಯಾಚರಣೆ ನಡೆಸಿವೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜಿಲ್ಲಾ ಮೀಸಲು ಪಡೆ, ಎಸ್‌ಟಿಎಫ್, ಐಟಿಬಿಪಿಯ 53ನೇ ಬೆಟಾಲಿಯನ್ ಮತ್ತು ಗಡಿ ಭದ್ರತಾ ಪಡೆಯ 135ನೇ ಬೆಟಾಲಿಯನ್‌ನ ಸಿಬ್ಬಂದಿ ನಕ್ಸಲರು ಪ್ರಬಲವಿರುವ ಕುತುಲ್, ಪರಸ್‌ವಾಡಾ ಮತ್ತು ಕೊಡ್ತಮೇಟಾ ಗ್ರಾಮಗಳ ಅರಣ್ಯ ಪ್ರದೇಶದಲ್ಲಿ ಜೂನ್ 12ರಿಂದ ಕಾರ್ಯಾಚರಣೆ ಆರಂಭಿಸಿದ್ದರು.

ಭದ್ರತಾ ಸಿಬ್ಬಂದಿ ಈ ಪ್ರದೇಶವನ್ನು ಸುತ್ತುವರಿದಾಗ ಗುಂಡಿನ ಚಕಮಕಿ ನಡೆದು ಭದ್ರತಾ ಸಿಬ್ಬಂದಿಯ ಗುಂಡಿಗೆ ಎಂಟು ನಕ್ಸಲರ ಹತರಾದರು. ಎಸ್‌ಟಿಎಫ್‌ನ ಒಬ್ಬ ಜವಾನ ಹುತಾತ್ಮರಾದರು. ಭದ್ರತಾ ಪಡೆಯ ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಯ್‌ಪುರಕ್ಕೆ ಕರೆದೊಯ್ಯಲಾಯಿತು ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಮೂರು ಕಚ್ಚಾ ಬಾಂಬ್ ಪತ್ತೆ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ರಸ್ತೆಯಲ್ಲಿ ನಕ್ಸಲರು ಹುದುಗಿಸಿಟ್ಟಿದ್ದ ಮೂರು ಕಚ್ಚಾ ಬಾಂಬ್‌ಗಳನ್ನು ಪತ್ತೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ನೀಟ್–ಯುಜಿ ಪರೀಕ್ಷೆ ರದ್ದು ಕೋರಿ ಸುಪ್ರೀಂಗೆ ಮೊರೆ

ನವದೆಹಲಿ (ಪಿಟಿಐ): ನೀಟ್–ಯುಜಿ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ 20 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಮೇ 5ರಂದು ನಡೆದ ಪರೀಕ್ಷೆಯಲ್ಲಿನ ಅಕ್ರಮಗಳ ಬಗ್ಗೆ ಸಿಬಿಐ ಅಥವಾ ಇತರ ಯಾವುದೇ ಸ್ವತಂತ್ರ ಸಂಸ್ಥೆಯಿಂದ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದೂ ಕೋರಲಾಗಿದೆ.

ವೈದ್ಯಕೀಯ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದ 20 ವಿದ್ಯಾರ್ಥಿಗಳು ಈ ಅರ್ಜಿ ಸಲ್ಲಿಸಿದ್ದು, ಪರೀಕ್ಷೆಯನ್ನು ಹೊಸದಾಗಿ ನಡೆಸಲು ಎನ್‌ಟಿಎ ಮತ್ತು ಸಂಬಂಧಿಸಿದವರಿಗೆ ನಿರ್ದೇಶನ ನೀಡುವಂತೆ ಕೋರಿದ್ದಾರೆ.

ಏಕಸ್ವಾಮ್ಯಕ್ಕೆ ಅವಕಾಶ ಬೇಡ: ಜೈರಾಂ

ನವದೆಹಲಿ (ಪಿಟಿಐ): ಕಾರ್ಪೊರೇಟ್ ಕಂಪನಿಗಳ ನಡುವಿನ ಸ್ಪರ್ಧೆಯನ್ನು ಹತ್ತಿಕ್ಕದಂತೆ ನೋಡಿಕೊಳ್ಳುವ ಹೊಣೆಯು ಸರ್ಕಾರದ ಮೇಲಿದೆ ಎಂದು ಕಾಂಗ್ರೆಸ್ ಪಕ್ಷವು ಶನಿವಾರ ಹೇಳಿದೆ.

ಅಲ್ಲದೆ, ಕಾರ್ಪೊರೇಟ್ ವಲಯದಲ್ಲಿ ಕೆಲವೇ ಕಂಪನಿಗಳ ಹಿಡಿತ ಸೃಷ್ಟಿಯಾಗದಂತೆ ಅಥವಾ ಕಂಪನಿಯೊಂದು ಏಕಸ್ವಾಮ್ಯ ಸ್ಥಾಪಿಸದಂತೆ, ಕಂಪನಿಗಳ ಸ್ವಾಧೀನ ಪ್ರಕ್ರಿಯೆಯು ಮುಕ್ತವಾಗಿ ಹಾಗೂ ನ್ಯಾಯ ಸಮ್ಮತವಾಗಿ ಆಗುವಂತೆ ನೋಡಿಕೊಳ್ಳುವ ಹೊಣೆ ಕೂಡ ಸರ್ಕಾರದ್ದು ಎಂದು ಅದು ಹೇಳಿದೆ.

ರಾಜಕೀಯ ಅಧಿಕಾರ ಕೇಂದ್ರದಲ್ಲಿ ಇರುವವರ ಜೊತೆಗಿನ ಸಂಪರ್ಕವನ್ನು ಯಾರೂ ಅನುಚಿತವಾಗಿ ಬಳಕೆ ಮಾಡದಂತೆ ಕೂಡ ಸರ್ಕಾರವು ಖಾತರಿಪಡಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ಹೇಳಿದ್ದಾರೆ.

ಅದಾನಿ ಸಮೂಹವು ಪೆನ್ನಾ ಸಿಮೆಂಟ್ಸ್ ಕಂಪನಿಯನ್ನು ಸ್ವಾಧೀನಪಡಿಸಿಕೊಂಡ ನಂತರ ರಮೇಶ್ ಅವರು ಈ ಮಾತು ಹೇಳಿದ್ದಾರೆ.

'ಕಾಲಾನುಕ್ರಮದಲ್ಲಿ ಏನಾಯಿತು ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಿ: ಸೆಪ್ಟೆಂಬರ್ 2022ರಲ್ಲಿ ಅಂಬುಜಾ ಸಿಮೆಂಟ್ಸ್ ಮತ್ತು ಎಸಿಸಿ ಕಂಪನಿಗಳನ್ನು ಅದಾನಿ ಸ್ವಾಧೀನಪಡಿಸಿಕೊಂಡು ದೇಶದ ಎರಡನೆಯ ಅತಿದೊಡ್ಡ ಸಿಮೆಂಟ್ ಕಂಪನಿಯಾಯಿತು. 2023ರ ಆಗಸ್ಟ್‌ನಲ್ಲಿ, ಸಂಘಿ ಇಂಡಸ್ಟ್ರೀಸ್‌ಅನ್ನು ಅದಾನಿ ಸ್ವಾಧೀನಪಡಿಸಿಕೊಂಡಿತು. 2024ರ ಜೂನ್‌ನಲ್ಲಿ ಪೆನ್ನಾ ಸಿಮೆಂಟ್ಸ್ ಕಂಪನಿಯನ್ನು ಅದಾನಿ ಸ್ವಾಧೀನಕ್ಕೆ ತೆಗೆದುಕೊಂಡಿತು, ಇದು ದಕ್ಷಿಣ ಭಾರತದಲ್ಲಿಯೂ ಗಣನೀಯ ಮಾರುಕಟ್ಟೆ ಪಾಲನ್ನು ಒದಗಿಸಿದೆ' ಎಂದು ಜೈರಾಂ ಹೇಳಿದ್ದಾರೆ.

'ಮುಂದೆ: ಸೌರಾಷ್ಟ್ರ ಸಿಮೆಂಟ್, ವದರಾಜ್ ಸಿಮೆಂಟ್ ಮತ್ತು ಜೈಪ್ರಕಾಶ್ ಅಸೋಸಿಯೇಟ್ಸ್ ಕಂಪನಿಯ ಸಿಮೆಂಟ್ ವಹಿವಾಟುಗಳ ಸ್ವಾಧೀನಕ್ಕೆ ಅದಾನಿ ಮುಂದಾಗಿದೆ' ಎಂದು ರಮೇಶ್ ಅವರು ಎಕ್ಸ್ ಮೂಲಕ ಹೇಳಿದ್ದಾರೆ.

ಆರ್‌ಬಿಐನ ಮಾಜಿ ಡೆಪ್ಯುಟಿ ಗವರ್ನರ್ ವಿರಲ್ ಆಚಾರ್ಯ ಅವರ ಮಾತನ್ನು ಉಲ್ಲೇಖಿಸಿ ರಮೇಶ್ ಅವರು, ಅದಾನಿ ಸಮೂಹ ಸೇರಿದಂತೆ ಐದು ಬೃಹತ್ ಉದ್ಯಮ ಸಮೂಹಗಳು ಸಿಮೆಂಟ್ ವಲಯ ಸೇರಿದಂತೆ 40 ವಲಯಗಳಲ್ಲಿ ಏಕಸ್ವಾಮ್ಯ ಸ್ಥಾಪಿಸುತ್ತಿವೆ ಎಂದು ಖ್ಯಾತ ಹಣಕಾಸು ಅರ್ಥಶಾಸ್ತ್ರಜ್ಞ ಸಾಬೀತುಪಡಿಸಿದ್ದರು ಎಂದು ಕೂಡ ರಮೇಶ್ ಹೇಳಿದ್ದಾರೆ.

'ಏಕಸ್ವಾಮ್ಯವು ಹೆಚ್ಚಾಗುತ್ತಿರುವುದಕ್ಕೂ ಭಾರತದ ಅಸ್ಥಿರ ಆರ್ಥಿಕ ಬೆಳವಣಿಗೆ, ನಿರುದ್ಯೋಗದ ಬಿಕ್ಕಟ್ಟು ಹಾಗೂ ಭಾರಿ ಹಣದುಬ್ಬರ ಪ್ರಮಾಣಕ್ಕೂ ಸಂಬಂಧ ಇದೆ. 2015ರಲ್ಲಿ ಜನಸಾಮಾನ್ಯರು ಸರಕುಗಳಿಗಾಗಿ ₹100 ವಿನಿಯೋಗಿಸಿದಾಗ ಅದರಲ್ಲಿ ಉದ್ಯಮದ ಮಾಲೀಕನಿಗೆ ₹18 ಲಾಭದ ರೂಪದಲ್ಲಿ ಸಂದಾಯವಾಗುತ್ತಿತ್ತು. 2021ರಲ್ಲಿ ಉದ್ಯಮದ ಮಾಲೀಕನಿಗೆ ಲಾಭದ ರೂಪದಲ್ಲಿ ₹36 ಸಿಗುತ್ತಿದೆ' ಎಂದು ರಮೇಶ್ ಹೇಳಿದ್ದಾರೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 16 ಜೂನ್ 2024


ಮಳೆಗಾಲದ ಅತಿಥಿಗಳು ಸುಂದರ ಅಣಬೆಗಳು

13


ಕಾಲಚಕ್ರದಲ್ಲಿ ವೃದ್ಧ ದಂಪತಿಯ ಯಾನ


ವಿವಿಡ್ ಸಿಡ್ನಿ ಬೆಳಕಿನ ಬೆರಗು

15

ಸಸಿ ನೆಡುವ ಆಸಕ್ತಿಯಿದ್ದು ಹಣ ಖರ್ಚು ಮಾಡಲು ಅನುಕೂಲ ಇಲ್ಲದವರಿಗೆ ಹಸಿರು ಹಬ್ಬಿಸುವ ಸರಳ ದಾರಿಗಳಿವೆ. ದುಡ್ಡಿಲ್ಲದೇ ದೊಡ್ಡ ಕೆಲಸ ಮಾಡಿದ ಹಿರಿಯರ ಜಾಣ್ಮೆಯಿಂದ ಹೆದ್ದಾರಿಗಳಲ್ಲಿ ಹಳೆಯ ಬೇವು, ಮಾವು, ಆಲ, ಅರಳಿ ವೃಕ್ಷಗಳ ನೆರಳಿದೆ. ಜನಪದರ ಜೀವನ ದರ್ಶನದಲ್ಲಿ ಕಂಡ ಸಸ್ಯಾಭಿವೃದ್ಧಿಯ ದೇಸಿ ಮಾರ್ಗದರ್ಶನ ಇಲ್ಲಿದೆ.


ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಸುಂಕಾತೊಣ್ಣೂರಿನಲ್ಲಿ ಗೌಡೇಗೌಡ ಬೆಳೆಸಿದ ಸಾಲುಮರ
ಚಿತ್ರ: ಹಾರೋಹಳ್ಳಿ ಪ್ರಕಾಶ್

ಮರ ಬೆಳೆಸುವ ಸರಳ ತಂತ್ರಗಳು

ಶಿವಾನಂದ ಕಳವೆ

ಉಡುಪಿ ಜಿಲ್ಲೆಯ ಬೈಂದೂರಿನ ಬಸ್ ನಿಲ್ದಾಣದಲ್ಲಿ ಜೀಪು ನಿಲ್ಲಿಸಿಕೊಂಡು ಮೂರು ನಾಲ್ಕು ಜನ ಕಾಯುತ್ತಿದ್ದರು. ಅವರಿಗೆ ನಮ್ಮ ಕಾನಿನ ಗಾಳಿ (Acronychia Pedunculata) ಜಾತಿಯ 150 ಸಸಿಗಳನ್ನು ಕೊಡಬೇಕಿತ್ತು. ಬಸ್ಸು ನಿಲ್ಲುತ್ತಲೇ ಸರಸರ ಓಡಿ ಬಂದವರು ಸಸಿ ಎಲ್ಲಿದೆಯೆಂದರು? ಪುಟ್ಟ ಕೈ ಚೀಲದಲ್ಲಿದ್ದ ಸಸಿಗಳ ಕಟ್ಟನ್ನು ಹೂಗುಚ್ಛ ನೀಡಿದಷ್ಟು ಹಗುರವಾಗಿ ಹಸ್ತಾಂತರಿಸಿದೆ. ನೂರಾರು ಸಸಿಗಳನ್ನು ಸಾಗಿಸಲು ಜೀಪು ಬೇಕು, ಪಾಲಿಥೀನ್ ಚೀಲದಲ್ಲಿ ಬೆಳೆಸಿದ ಸಸಿ ಮಣ್ಣು ಸಹಿತ ಕಿಲೊಗ್ರಾಂ ಭಾರವಿರುತ್ತದೆ, ನಿಲ್ದಾಣದಲ್ಲಿ ಬಸ್ ನಿಂತ ಹತ್ತು ನಿಮಿಷಗಳಲ್ಲಿ ಸರಸರ ಸಸಿ ಇಳಿಸಿ ಜೀಪಿಗೇರಿಸಲು ಸಮರೋಪಾದಿಯಲ್ಲಿ ಅವರು ಸನ್ನದ್ಧರಾಗಿದ್ದರು. ಎರಡು ಮೂರು ಕಿಲೊಗ್ರಾಂ ತೂಕವಿಲ್ಲದ ಬೇರು ಸಹಿತ ಕಿತ್ತು ತಂದ ಸಸಿ ಕಟ್ಟು ಕಂಡು ಅವರಿಗೆ ವಿಚಿತ್ರವೆನಿಸಿತು. ಬುಡ ಕಿತ್ತ ಸಸಿ ಬದುಕುತ್ತದೆಯೇ? ಇವನ್ನು ಹೊಯ್ದು ಮಾಲೀಕರಿಗೆ ಮುಖ ತೋರಿಸುವುದು ಹೇಗೆಂಬ ಚಿಂತೆಯೂ ಕಾಡಿರಬಹುದು. ಬಸ್ಸು ಹೊರಡುವ ತನಕವೂ ವಿಚಿತ್ರ ರೀತಿಯಲ್ಲಿ ಅಲ್ಲಿಯೇ ನಿಂತು ನಗುತ್ತ ಅವರೆಲ್ಲ ನೋಡುತ್ತಿದ್ದುದು ಎಂಟು ವರ್ಷಗಳ ನಂತರವೂ ನೆನಪಿದೆ.

ಮಳೆಗಾಲದಲ್ಲಿ ಚೂಪಾದ ಕೋಲನ್ನು ಭೂಮಿಗೆ ಊರಿ ಕುಳಿ ಮಾಡಿ ಅದರೊಳಗೆ ಸಸ್ಯದ ಬೇರಿಳಿಸಿ ಸಸಿ ಸುತ್ತ ಮೆಟ್ಟುತ್ತ ಮಣ್ಣು ಬಿಗಿಗೊಳಿಸಿ ಸಸಿ ನೆಡಲು ಹೇಳಿದೆ. ಗುಂಡಿ ತೆಗೆಯದೇ ಸುಲಭಕ್ಕೆ ನಾಟಿ ಕ್ರಮ ತಿಳಿಸಿದೆ. ಸಸಿಗಳನ್ನು ಒಂದು ವರ್ಷ ಪಾಲಿಥೀನ್ ಚೀಲದಲ್ಲಿ ನರ್ಸರಿಯಲ್ಲಿ ನೀರುಣಿಸಿ ಚೆನ್ನಾಗಿ ಬೆಳೆಸಿ ನೆಡುವುದಾಗಿ ಅವರೆಷ್ಟೇ ಹೇಳಿದರೂ ತಕ್ಷಣ ನಾಟಿ ಮಾಡಲು ಸೂಚಿಸಿದೆ. ಮಳೆ ಸುರಿಯುತ್ತಿದ್ದರಿಂದ ಸಸಿ ಚಿಗುರಿ ಬದುಕಿ ಬೆಳೆಯುತ್ತದೆಂದು ಭರವಸೆ ನೀಡಿದೆ. ಒಮ್ಮೆ ಇವು ಸತ್ತರೆ ಬೇರೆ ಸಸಿ ಕೊಡುವುದಾಗಿ ವಾಗ್ದಾನ ಮಾಡಿದೆ. ಅಂದು ನೆಟ್ಟ ಸಸಿಗಳು ಈಗ ಎತ್ತರಕ್ಕೆ ಬೆಳೆದು ಆಗಸ್ಟ್ ಹೊತ್ತಿಗೆ ಗೊಂಚಲು ಹೂವರಳಿಸಿ ಚಿಟ್ಟೆಗಳನ್ನು ಸೆಳೆಯುತ್ತಿವೆ. ಸುಲಭ ಸಾಗಾಟ, ಕೆಲವೇ ಸಮಯದಲ್ಲಿ ನಾಟಿ ಕ್ರಮದಲ್ಲಿ ತಕ್ಷಣ ನಂಬಿಕೆ ಮೂಡಲಿಕ್ಕಿಲ್ಲ. ಆದರೆ ವಾರ್ಷಿಕ 100-120 ಮಳೆ ದಿನಗಳ ಮಲೆನಾಡು ಕರಾವಳಿಯ ಜನಕ್ಕೆ ಈ ತಂತ್ರ ಹೊಸದೇನಲ್ಲ.

ಚಿಗುರು ಗೂಟದಲ್ಲಿ ಹಸಿರು ಸಾಕಾರ: 70ರ ದಶಕದ ನಂತರದಲ್ಲಿ ಸಸಿಯನ್ನು ಪಾಲಿಥೀನ್ ಚೀಲದಲ್ಲಿ ಬೆಳೆಸುವ ನರ್ಸರಿ ತಂತ್ರಗಳು ಶುರುವಾಗಿವೆ. ಅದಕ್ಕೂ ಮುಂಚೆ ಅರಣ್ಯ ಇಲಾಖೆ ಮಳೆಗಾಲಕ್ಕೆ ಮುನ್ನ ತೇಗದ ಮರದ ಬೇರಿನ ಚಿಕ್ಕ ಚಿಕ್ಕ ತುಂಡುಗಳನ್ನು ಕತ್ತರಿಸಿ ಮಣ್ಣಿನ ಮಡಿಯಲ್ಲಿ ಸೇರಿಸಿ ವರ್ಷದ ನಂತರ ಚಿಗುರಿ ಬೆಳೆದದ್ದನ್ನು ಕಿತ್ತು ನಾಟಿ ಮಾಡುತ್ತಿತ್ತು. ನಂತರದಲ್ಲಿ ನೀರಾವರಿ ಮೂಲಕ ನರ್ಸರಿಯಲ್ಲಿ ಸಸಿ ಬೆಳೆಸುವ ತಂತ್ರ ಬಂದಿತು. 'ವೆಟ್ ನರ್ಸರಿ' ಎಂದು ಅರಣ್ಯ ಇಲಾಖೆ ಫಲಕ ಬದಲಿಸಿತು. ಈಗ ನರ್ಸರಿಯೆಂದರೆ ಮೊದಲಿಗೆ ಪಾಲಿಥೀನ್ ಚೀಲಕ್ಕೆ ಫಲವತ್ತಾದ ಮರಳು ಮಿಶ್ರಿತ ಮಣ್ಣು ತುಂಬುವುದರಿಂದ ಕೆಲಸ ಶುರುವಾಗುತ್ತದೆ. ವಿವಿಧ ಜಾತಿಯ ಸಸಿಗಳನ್ನು ವ್ಯಾಪಕವಾಗಿ ಬೆಳೆಸಿ ಸುರಕ್ಷಿತವಾಗಿ ದೂರ ಸಾಗಿಸಲು ಸಾಧ್ಯವಾಗಿದ್ದನ್ನು ಅಲ್ಲಗಳೆಯುವಂತಿಲ್ಲ. ಗುಂಡಿ ತೆಗೆದು ಸಾಲಿನಲ್ಲಿ ಸಸಿ ಬೆಳೆಸುವ ತಂತ್ರದಲ್ಲಿ ಮಣ್ಣಿನ ಶಕ್ತಿಗಿಂತ ಸಾಲು ಶಿಸ್ತಿಗೆ ಶರಣಾದೆವು. ಆದರೆ ಸುಲಭದಲ್ಲಿ ಮರ ಬೆಳೆಸುವ ಹಳೆಯ ತಂತ್ರ ಮರೆಯಲಾಗದು. ಹೆಚ್ಚು ಹೆಚ್ಚು ಜನ ಸಮಯ ಸಿಕ್ಕಾಗೆಲ್ಲ ಫಲವತ್ತಾದ ನೆಲೆಯಲ್ಲಿ ಪುಟ್ಟ ಸಸಿಯ ಬೇರೂರುವ ಕಾರ್ಯದಲ್ಲಿ ತೊಡಗಿದರೆ ಹಸಿರೀಕರಣಕ್ಕೆ ಅನುಕೂಲ.

ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಹಳಕಾರು ಹಳ್ಳಿಯಿದೆ. ಇಲ್ಲಿ ಅರಣ್ಯ ಪಂಚಾಯತ್ ಎಂಬ ಬ್ರಿಟಿಷ್ ಕಾಲದ ವಿಕೇಂದ್ರೀಕೃತ ಅರಣ್ಯ ಸಂರಕ್ಷಣೆಯ ಹಳೆಯ ವ್ಯವಸ್ಥೆಯಿದೆ. ಹಳ್ಳಿಗರು ಅರಣ್ಯ ಸಂರಕ್ಷಣೆ ಜವಾಬ್ದಾರಿ ಹೊತ್ತು ನೂರು ವರ್ಷಗಳಾಗಿವೆ. ಇದರ ಇತಿಹಾಸ ಅಧ್ಯಯನ ಮಾಡುವಾಗ ಸಸಿ ಬೆಳೆಸುವ ಸರಳ ತಂತ್ರದ ಉಲ್ಲೇಖ ದೊರಕಿದೆ. 1928ರ ಠರಾವು ದಾಖಲೆಯಲ್ಲಿ ಹಳ್ಳಿಯ ಪ್ರತೀ ಮನೆಯವರೂ ಮಾವಿನ ಒರಟೆ, ಹಲಸು, ಗೇರು ಬೀಜಗಳನ್ನು ಹಿಡಿದು ಮಳೆಗಾಲದ ಜೂನ್ ಜುಲೈ ತಿಂಗಳಿನಲ್ಲಿ ಕಾಡಿಗೆ ಬರಬೇಕು.

14ನೇ ಪುಟಕ್ಕೆ...

ಪ್ರತಿಕ್ರಿಯೆಗಾಗಿ
bhanuvara@prajavani.co.in

ಸಸಿ ನಾಟಿಯ ಸುಲಭ ಕಲಿಕೆ

2001ರಿಂದ ಸಸಿ ನೆಡುವ ಕಾರ್ಯದ ನನ್ನ ಪುಟ್ಟ ಅನುಭವ ಹೇಳಬೇಕು. ಮೊದಲಿಗೆ ಎರಡು ಅಡಿ ಗುಂಡಿ ತೆಗೆದು ನಾಟಿ ಮಾಡುವ ಕ್ರಮ ಅನುಸರಿಸಿ ದಿನಕ್ಕೊಂದು ಸಸಿಯಂತೆ ವರ್ಷಕ್ಕೆ 365 ಸಸಿಗಳನ್ನು ನೆಡುತ್ತಿದ್ದೆ. ಈಗ ಕುಳಿ ತೆಗೆದು ನಾಟಿ ಮಾಡುವುದು ಬಿಟ್ಟು ನಾಲ್ಕೈದು ವರ್ಷಗಳಾಗಿವೆ. ಮಳೆಗಾಲ ಶುರುವಿನಲ್ಲಿ ಬೇರು ಕಿತ್ತ ಸಣ್ಣ ಸಣ್ಣ ಸಸಿ ಊರುವ ಸುಲಭ ಕ್ರಮ ಅನುಸರಿಸಿದ್ದೇನೆ. ಮನೆಯ ಸುತ್ತಮುತ್ತ ಮಾವಿನ ಗೊರಟೆ ರಾಶಿ ಇದ್ದೇ ಇರುತ್ತದೆ. ಮಳೆಯಲ್ಲಿ ಯಾವುದೋ ಕಾಡು ಹಣ್ಣಿನ ಮರಗಳ ಕೆಳಗಡೆ ಹುಟ್ಟಿದ ಸಹಸ್ರಾರು ಸಸಿಗಳು ಸಿಗುತ್ತವೆ. ಅದರಲ್ಲಿ ಕೆಲವನ್ನು ಬೇರಿಗೆ (ಬೇರು ಟೋಪಿಗೆ) ಗಾಯವಾಗದಂತೆ ಕಿತ್ತು ಮಳೆ ಶುರುವಾದ ತಿಂಗಳೊಳಗೆ ಭೂಮಿ ಬಿಸಿಯಿದ್ದಾಗ ಚೂಪಾದ ಕೋಲಿನ ನೆರವಿನಿಂದ ನೆಡುವ ಕ್ರಮ, ಸಸಿ ಬುಡಕ್ಕೆ ತುಸು ತರಗೆಲೆ ಹಾಕಿದರೆ ಸಸಿಗೆ ಸಂಭ್ರಮ. ಒಂದೆರಡು ತಾಸಿನಲ್ಲಿ ಈ ಕಾರ್ಯ ಮಾಡಬಹುದು.

ಇದು ಸಸಿ ಬೆಳೆಸುವ ಕ್ರಮವೇ ಹೊರತೂ ಶಿಸ್ತಿನ ಸಾಲಿನ ನಾಟಿಯಲ್ಲ! ಫಲವತ್ತಾದ ಮಣ್ಣಿರುವ ಜಾಗ, ಸತ್ತ ಮರದ ಬುಡ, ಮುಳ್ಳುಕಂಟಿ, ಮಣ್ಣಿನ ಅಗಳ, ತರಗೆಲೆ ಬಿದ್ದ ಜಾಗ, ಫಲವತ್ತಾದ ಮಣ್ಣು ಶೇಖರಣೆಯಾಗುವ ತಗ್ಗಿನ ನೆಲೆಯಲ್ಲಿ ಹೀಗೆ ನೆಡಲು ಸ್ಥಳ ಆಯ್ಕೆ ಮಾಡಿಕೊಳ್ಳಬಹುದು. ಬಿಸಿಲು ಬರಕ್ಕೆ ಸಸಿಗಳು ಹೆದರಿಲ್ಲ, ಕಳೆದ ವರ್ಷ ನೆಟ್ಟ ನೂರಾರು ಮಾವಿನಸಸಿಗಳಲ್ಲಿ ಒಂದೆರಡು ಮಾತ್ರ ಸತ್ತಿರಬಹುದು! ಎರಡು ಮೂರು ಅಡಿಯೆತ್ತರ ಬೆಳೆದ ಗಿಡದ ಬುಡದಲ್ಲಿ ಒಣಗಿದ ಮಾವಿನ ಗೊರಟೆ ಕೂಡಾ ಈಗ ಕಾಣುತ್ತದೆ. ಅಂದರೆ ಯಾವ ಆಳದ ಗುಂಡಿ ತೆಗೆಯದೇ, ಗುದ್ದಲಿ, ಹಾರೆ ಬಳಸದೇ ಪುಟ್ಟ ಚೂಪಾದ ಕೋಲಿನ ಸಹಾಯದಲ್ಲಿ ಎಳೆ ಸಸಿಗಳ ಬೇರನ್ನು ಸೂಕ್ತ ಜಾಗದಲ್ಲಿ ಮಣ್ಣಿಗೆ ಊರಿದಕ್ಕೆ ಸಾಕ್ಷಿಯಿದು.


ಚೂಪಾದ ಕೋಲನ್ನು ಬಳಸಿ ಸಸಿ ನೆಡುವುದು

ಸಸಿಯ ಬೇರು ಆಳಕ್ಕೆ ಹೋದರೆ ನೀರಿಲ್ಲದೇ ಬದುಕುತ್ತವೆ. ನಮ್ಮ ನೈಸರ್ಗಿಕ ಕಾಡು ಬೆಳೆದಿದ್ದು ಹೇಗೆ? ಗಮನಿಸುತ್ತ ಹೋಗಬೇಕು, ಗಿಡದ ಬುಡದಲ್ಲಿ ತೇವಾಂಶ ಉಳಿಸಲು ತರಗೆಲೆ ಕಸಕಡ್ಡಿ ಮುಚ್ಚಿಗೆ ಮಾಡಿದರೆ ಅನುಕೂಲ. ನಮ್ಮ ಕಾಡುಗಳಲ್ಲಿ ಬಹು ಬೇಗ ಬೆಳೆಯುವ ಹಲವು ಮೃದು ಜಾತಿಯ ಸಸ್ಯಗಳಿವೆ. ಅವನ್ನು ನೆಟ್ಟು ಭೂಮಿಗೆ ಫಲವತ್ತತೆ ಹೆಚ್ಚಿಸುವ ಕಾರ್ಯ ಮಾಡಬಹುದು. ಮಣ್ಣು ಬದಲಾದರೆ ಮರ ದಟ್ಟನೆಯೂ ಹೆಚ್ಚುತ್ತದೆ. ನಮ್ಮ ಸುತ್ತಮುತ್ತ ನೋಡುತ್ತಾ ಹೋದರೆ ಕಾಡಿನಲ್ಲಿ ಕಲಿಯಲು ಬಹಳವಿದೆಯೆಂಬುದು 24 ವರ್ಷಗಳಲ್ಲಿ ಅನುಭವಕ್ಕೆ ಬಂದಿದೆ.

ಬಂಡೆಗಳ ಮೇಲೆ ಕಾವ್ಯ ಬರೆಸಿದ ನಾಡು

ಎಚ್. ಎಸ್. ಅನುಪಮಾ

ಬಯಲಿಗೊಂದು ಸೌಂದರ್ಯ, ಬಂಡೆಗಳಿಗೊಂದು ಗಾಂಭೀರ್ಯ. ದಟ್ಟಡವಿಗೊಂದು ನಿಗೂಢ ಚೆಲುವು, ಮನ ತೆರೆದು ಹರಡುವಂತೆ ಬಯಲು. ಪ್ರಕೃತಿ ಎಲ್ಲೆಡೆಯೂ 'ಸಿರಿ'ಯೇ ಆದರೂ ಹಸಿರು ಹೊದ್ದ ಬುವಿಯನ್ನು ನೋಡುತ್ತಲೇ ಇರುವ ಮಲೆಸೀಮೆಯ ನಮಗೆ ಧೀರ ಗಂಭೀರವಾಗಿ ನಿಂತ ಬಂಡೆಗಳ ಬೆಟ್ಟಗಳೆಂದರೆ ಕಣ್ಣಿಗೆ ಹಬ್ಬ.

ಕಣ್ಣು ಹಾಯಿಸಿದತ್ತ ಬಂಡೆಗಳೆಂಬ ಕಾವ್ಯ ಎದುರುಗೊಳ್ಳುವ ಊರು ಕೊಪ್ಪಳ. ಊರೊಳಗೂ ಬಡಾವಣೆಗಳಲ್ಲಿ ನಿಸರ್ಗ ವ್ಯಾಪಾರಗಳಿಗೆ ಸಾಕ್ಷಿಯಾಗಿ ಕೋಟ್ಯಂತರ ವರ್ಷಗಳಿಂದ ಮಲಗಿರುವ ಮೌನಿಗಲ್ಲುಗಳು ಕಾಣಸಿಗುತ್ತವೆ. ಏನು ಸೋಜಿಗವೋ, ಬೃಹತ್ ಬಂಡೆಯೊಂದರ ಎದುರು ನಿಂತರೆ ನಮ್ಮೊಳಗೊಂದು ಏಕಾಂತ ಸೃಷ್ಟಿಯಾಗಿಬಿಡುತ್ತದೆ!

ಅಂತಹ ಕೊಪ್ಪಳ ನಾಡಿಗೆ ಕಾಲಿಟ್ಟ ಮೇಲೆ ಸಣ್ಣ ಬೆಟ್ಟವನ್ನಾದರೂ ಹತ್ತಿಯೇ ಸಿದ್ಧ ಎಂದು ಪಟ್ಟಣದ ಸೆರಗಿಗೆ, ಗವಿಮಠದ ಹಿಂದಿರುವ ಗುಡ್ಡಕ್ಕೆ ಆ ಬೆಳಗು ಹೊರಟೆವು. ನಿಲುಕದ ಬಂಡೆಯೊಂದರ ಮೇಲೆ ಅಂದೆಂದೋ ನಾಡನಾಳಿದ ಅರಸು ಅಕ್ಷರಗಳನ್ನು ಅಕ್ಕರೆಯಿಂದ ಕಡೆಸಿಟ್ಟಿರುವ ತಾಣವದು. ಎರಡು ಸಾವಿರದ ಮುನ್ನೂರು ವರುಷ ಕೆಳಗೆ ಲೋಕದ ಶೋಕ ಕಾರಣವ ಹೋಗಲಾಡಿಸುವೆನೆಂದು ಪಣ ತೊಟ್ಟು ಲೋಕಹಿತದ ಬೌದ್ಧ ಮಾರ್ಗ ತುಳಿದ ಸಾಮ್ರಾಟ ಅಶೋಕನು ತನ್ನ ಪ್ರಜೆಗಳಿಗೆ ಕಾಲಾತೀತ ಸತ್ಯವನ್ನರುಹಲು ಬರೆಸಿದ ಶಾಸನ ಅಲ್ಲಿದೆ. ಮಳೆ ಗಾಳಿ, ಚಳಿ ಧೂಳಿಗೆ ಅಕ್ಷರಗಳೀಗ ಮಸುಕು ಮಸುಕಾಗಿವೆ. ನಮ್ಮ ಕಣ್ಣಬೆಳಕು ಆರುವ ಮೊದಲೇ ನೋಡಬೇಕೆಂಬ ತುರ್ತುಭಾವ ಆವರಿಸಿ ಬಳಗದೊಂದಿಗೆ ನಾನಲ್ಲಿದ್ದೆ.

ದಿಬ್ಬದಂತಹ ಬೆಟ್ಟದ ಬುಡದ ಬೇಲಿ ದಾಟಿ, ಪುರಾತತ್ವ ಇಲಾಖೆಯ ಫಲಕ ಓದಿ ಏರತೊಡಗಿದೆವು. ಕಣ್ಣು ಹಾಯಿಸಿದತ್ತ ನಾನಾ ಆಕಾರ, ರೂಪ, ರಚನೆ, ಜೋಡಿದಾರಿಕೆಯ ಬಂಡೆಗಳು. ಹಿಡಿಮಣ್ಣು ಇರುವಲ್ಲೆಲ್ಲ ಹಸಿರು. ಸಂದಿಗೊಂದಿಗಳಲ್ಲಿ ಬಾವಲಿ, ನಾಯಿ, ಹಾವುಹರಣೆ. ವಾರದ ಕೆಳಗೆ ಸುರಿದ ಮಳೆಯಿಂದ ಮೇ ತಿಂಗಳಿನಲ್ಲೂ ತಂಗಾಳಿ ಬೀಸುತ್ತಿತ್ತು.


ಏರತೊಡಗಿದ ಹತ್ತು ನಿಮಿಷದಲ್ಲಿ ದೊಡ್ಡ ಬಂಡೆಯೊಂದರ ಎದುರು ನಿಂತೆವು. ನಾವು ಕುಬ್ಜರೆನಿಸುವಂತೆ ಮಾಡಿದ ಅದು ಅಗಮ್ಯವೇನಲ್ಲ, ಆದರೆ ಡಬಲ್ ಡೆಕರನ್ನು ಏರುವುದು ಐವತ್ತು ದಾಟಿದ ಹೆಣ್ಣು ಮೊಣಕಾಲುಗಳಿಗೆ ಸುಲಭವಾಗಿರಲಿಲ್ಲ. ಚತುಷ್ಪಾದಿಗಳಾಗಿ ಕೆಳಬಂಡೆಯ ಮೇಲೆ ಕೆತ್ತಿಟ್ಟ ಕಚ್ಚುಗಳಲ್ಲಿ ಕೈಕಾಲಿಟ್ಟು ಹತ್ತಿದರೆ ಮೇಲಿನ ಬಂಡೆ ಛತ್ರಿಯಂತೆ, ಸೂರಿನಂತೆ ಹರಡಿಕೊಂಡು ವಿಶಾಲ ಆವರಣ ರೂಪಿಸಿರುವುದು ಕಾಣುತ್ತದೆ. ಅದರಡಿ ಬಿಸಿಲು ತಾಗಲು ಸಾಧ್ಯವೇ ಇಲ್ಲ. ರುಮುರುಮು ಗಾಳಿಗೆ ಬೆವರು ಸುಳಿಯುವುದಿಲ್ಲ. ಮಳೆ ಬಂದರೂ ನೆನೆಯುವುದಿಲ್ಲ. ಹುಡುಕಿ ನೋಡಿದರಷ್ಟೇ ಬ್ರಾಹ್ಮಿ ಲಿಪಿಯ ಅಕ್ಷರಗಳು ಕಾಣುವಂತಿವೆ.

ಬುದ್ಧ ಮಾರ್ಗವನ್ನರಿತು, ಹಾಗೆಯೇ ನಡೆದುಕೊಂಡು, ತನಗಾದ ಅರಿವು ಬಹುಕಾಲ ಜನರ ನೆನಪಿನಲ್ಲಿರುವಂತಾಗಲಿ ಎಂದು ಕಾವ್ಯದಂತಹ ಸಾಲುಗಳನ್ನು ಸಾಮ್ರಾಟ ಅಶೋಕ ಬರೆಸಿದ ಶಿಲಾಶಾಸನವದು. ಎಂಟು ಸಾಲುಗಳ ಶಾಸನದ ಸಾರಾಂಶ ಹೀಗಿದೆ:

'ದೇವನಾಂಪ್ರಿಯ ಪ್ರಿಯದರ್ಶಿಯು ಹೇಳುತ್ತಾನೆ: ನಾನು ಎರಡೂವರೆ ವರ್ಷಗಳಿಂದ ಶಾಕ್ಯನಾಗಿದ್ದೆ. ಆದರೆ ಮನಃಪೂರ್ವಕ ಬೌದ್ಧನಾಗಲು ಪ್ರಯತ್ನಿಸಿರಲಿಲ್ಲ. ವರ್ಷದ ಕೆಳಗೆ ಸಂಘದೊಳಹೊಕ್ಕು ಈಗ ನಿಜ ಬೌದ್ಧನಾಗಲು ಮನಸ್ಸಿಟ್ಟು ಯತ್ನಿಸುತ್ತಿರುವೆನು. ಜಂಬೂದ್ವೀಪದಲ್ಲಿ ದೇವರುಗಳು ಸಾಮಾನ್ಯ ಜನರೊಂದಿಗೆ ಸಂಪರ್ಕವಿಟ್ಟುಕೊಂಡಿರಲಿಲ್ಲ. ಉನ್ನತ ಜನ್ಮದವರಷ್ಟೇ ದೇವರುಗಳ ಮಿತ್ರರಾದರು. ಅದು ಪ್ರಯತ್ನದ ಫಲ. ಆದರೆ ಅವರಿಗಷ್ಟೇ ಇದು ಸಾಧ್ಯವೆಂದು ತಿಳಿಯಬೇಡಿ. ಸಾಮಾನ್ಯ ಜನರೂ ನಿಷ್ಠೆಯಿಂದ ಪ್ರಯತ್ನಿಸಿದರೆ ವಿಮುಕ್ತಿಯನ್ನು ಪಡೆಯಬಹುದು. ಈ ದಿಕ್ಕಿನಲ್ಲಿ ಕ್ಷುದ್ರರೂ, ಮಹಾತ್ಮರೂ, ಜಯಶಾಲಿಗಳಾಗಲಿ ಎಂದು; ನೆರೆಹೊರೆಯ ಗಡಿನಾಡಿನವರೂ ಇದನ್ನರಿಯಲೆಂದು; (ದಮ್ಮವು) ಚಿರಸ್ಥಾಯಿಯಾಗಿ ನಿಲ್ಲಲೆಂದು ಇದನ್ನು ಮಾಡಿಸಿರುವುದು. ಇದು (ಅನುಸರಿಸಿದಲ್ಲಿ ದಮ್ಮವು) ವರ್ಧಿಸುತ್ತದೆ. ವಿಪುಲವಾಗಿಯೇ ವರ್ಧಿಸುತ್ತದೆ.'

1931ರಲ್ಲಿ ಕೊಪ್ಪಳದ ಲಿಂಗಾಯತ ಮಠಾಧಿಪತಿಗಳೊಬ್ಬರಿಗೆ ಬಂಡೆಯ ಮೇಲೆ ಅಕ್ಷರಗಳಿರುವುದು ಕಂಡುಬಂತು. ಇತಿಹಾಸಕ್ತರಾಗಿದ್ದ ಅವರು ಅಕ್ಷರಗಳನ್ನು ಎನ್. ಬಿ. ಶಾಸ್ತ್ರಿಯವರಿಗೆ ತೋರಿಸಿದರು.

13ನೇ ಪುಟಕ್ಕೆ...


ಕೊಪ್ಪಳದ ಗವಿಮಠದ ಹಿಂದಿರುವ ಗುಡ್ಡ ಚಿತ್ರಗಳು: ಭರತ್ ಕಂದಕೂರ

ನೀರ ಬಿಟ್ಟು ನೆಲದ ಮೇಲೆ ವೇಣುಗೋಪಾಲ!

ಗಣಂಗೂರು ನಂಜೇಗೌಡ

ಶ್ರೀರಂಗಪಟ್ಟಣ ಮತ್ತು ಆಸುಪಾಸಿನ ತಾಣಗಳಿಗೆ ಒಂದು ದಿನದ ಪ್ರವಾಸ ಕೈಗೊಳ್ಳಲು ಇಷ್ಟಪಡುವವರಿಗೆ ಇತ್ತೀಚಿನ ವರ್ಷಗಳಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಮತ್ತೊಂದು ಆಕರ್ಷಣೆಯ ತಾಣವೇ ಹೊಸ ಕನ್ನಂಬಾಡಿಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯ.

ಹೊಯ್ಸಳರ ಕಾಲದ ಈ ದೇವಾಲಯ ಸುಮಾರು 70 ವರ್ಷ ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದ ನೀರಿನಲ್ಲಿ ಮುಳುಗಿ ಹೋಗಿತ್ತು. ಈ ದೇವಾಲಯವನ್ನು 2003ರಲ್ಲಿ ಜಲಾಶಯದ ಹಿನ್ನೀರು ಪ್ರದೇಶದ ತುಸು ಎತ್ತರದ ಜಾಗಕ್ಕೆ ಮೂಲ ರಚನೆಗೆ ಧಕ್ಕೆ ಬಾರದಂತೆ ಯಥಾವತ್ ಸ್ಥಳಾಂತರಿಸಲಾಗಿದೆ. ಈ ಸವಾಲಿನ ಕೆಲಸವನ್ನು ಮಾಡಿದವರು ಉದ್ಯಮಿ ದಿವಂಗತ ಶ್ರೀಹರಿ ಖೋಡೆ. ಅವರು ಇದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿದರು. ಅವರ ಆಸಕ್ತಿಯ ಫಲವಾಗಿ ಶ್ರೀಮಂತ ವಾಸ್ತುಶಿಲ್ಪ ಮತ್ತು ಪರಂಪರೆಯ ಬಹುಮುಖ್ಯ ಕುರುಹು ದಡ ಸೇರಿದೆ.

ಇದು ಈಗ ಪ್ರವಾಸಿ ತಾಣವಾಗಿದ್ದು ರಾಜ್ಯ, ಹೊರ ರಾಜ್ಯಗಳ ಪ್ರವಾಸಿಗರು ಇತ್ತ ಬರುತ್ತಿದ್ದಾರೆ. ಶ್ರೀರಂಗಪಟ್ಟಣ, ಮೈಸೂರು, ಮಡಿಕೇರಿಗೆ ಭೇಟಿ ನೀಡುವ ಪ್ರವಾಸಿಗರ ಪಟ್ಟಿಯಲ್ಲಿ ವೇಣುಗೋಪಾಲಸ್ವಾಮಿ ದೇವಾಲಯ ಕೂಡ ಸೇರಿರುತ್ತದೆ. ದೇಗುಲದ ಬಲಕ್ಕೆ ಅಲೆಅಲೆಯಾಗಿ ತುಳುಕುವ ವಿಶಾಲ ನೀರಿನ ಹರವು, ಕೃಷ್ಣರಾಜಸಾಗರ ಅಣೆಕಟ್ಟೆಯ ನೋಟ, ಹಿನ್ನೀರ ದಡದಲ್ಲಿ ಹಸಿರು ಮುಕ್ಕಳಿಸುವ ತೋಟಗಳು ಈ ತಾಣದ ಸೊಬಗನ್ನು ಹೆಚ್ಚಿಸಿವೆ.

ವರವಾದ ಬರಗಾಲ

ಜಲಾಶಯ ನಿರ್ಮಾಣ ಸಮಯದಲ್ಲಿ (1911–1931)ಸ್ಥಳಾಂತರ ಮಾಡಲು ಸಾಧ್ಯವಾಗದೆ ಬಿಟ್ಟ ದೇವಾಲಯಗಳಲ್ಲಿ ವೇಣುಗೋಪಾಲಸ್ವಾಮಿ ದೇವಾಲಯ ಪ್ರಮುಖವಾದುದು. 2001–2003ರ ಅವಧಿಯಲ್ಲಿ ತೀವ್ರ ಬರಗಾಲ ಎದುರಾಗಿತ್ತು. ಪರಿಣಾಮ ಇಡೀ ಜಲಾಶಯ ಬರಿದಾಯಿತು. ಈ ಜಲಾಶಯ ಗರಿಷ್ಠ ಮಟ್ಟ 124.80 ಅಡಿಗಳು. ಈ ದೇವಾಲಯ 60 ಅಡಿ ಆಳದಲ್ಲಿ ಇತ್ತು. ಜಲಾಶಯ ಬತ್ತಿ ಹೋದದ್ದರಿಂದ ಸ್ಪಷ್ಟವಾಗಿ ಗೋಚರಿಸಿತು. ರಾಜ್ಯದ ವಿವಿಧೆಡೆಗಳಿಂದ ತಂಡೋಪತಂಡವಾಗಿ ಜನರು ಬಂದು ವೀಕ್ಷಿಸಿದರು. ದೇವಾಲಯದ ಮೇಲೆ ಹತ್ತಿ ಇಳಿದರು. ಸಿನಿಮಾ ಮಂದಿ ಧಾವಿಸಿ ಬಂದು ಚಿತ್ರೀಕರಣ ನಡೆಸಿದರು. ಆದರೆ ಈ ದೇವಾಲಯ ಉದ್ಯಮಿ ಶ್ರೀಹರಿ ಖೋಡೆ ಅವರ ಕಣ್ಣಿಗೆ ಅಮೂಲ್ಯ ಸಂಪತ್ತಿನಂತೆ ಕಂಡಿತು. ಸರ್ಕಾರದ ಜತೆ ಮಾತುಕತೆ ನಡೆಸಿ ಸ್ಥಳಾಂತರಿಸಲು ಒಪ್ಪಿಗೆ ಪಡೆದರು. ಜಲಾಶಯದ ಹಿನ್ನೀರಿಗೆ ಹೊಂದಿಕೊಂಡಂತೆ ನಾಲ್ಕಾರು ಎಕರೆ ಜಮೀನು ಖರೀದಿಸಿ, ಶ್ರೀಹರಿ ಖೋಡೆ ಫೌಂಡೇಶನ್ ಹೆಸರಿನಲ್ಲಿ ದೇವಾಲಯವನ್ನು ಪುನರುಜ್ಜೀವನಗೊಳಿಸಿದರು.


ಹೊಸ ಕನ್ನಂಬಾಡಿಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯ
ಚಿತ್ರಗಳು: ಗಣಂಗೂರು ನಂಜೇಗೌಡ

ಸ್ಥಳಾಂತರಗೊಂಡ ಬಗೆ

2003ರಲ್ಲಿ ದೇವಾಲಯ ಸ್ಥಳಾಂತರ ಪ್ರಕ್ರಿಯೆ ಆರಂಭವಾಯಿತು. ಐತಿಹಾಸಿಕ ದೇಗುಲದ ಮೂಲ ಸ್ವರೂಪದಂತೆಯೇ ಪುನರುಜ್ಜೀವನ ಮಾಡಬೇಕು ಎಂಬ ಕಾರಣಕ್ಕೆ ಒಂದೊಂದು ಕಲ್ಲಿಗೂ ನಂಬರ್ ಹಾಕಿದರು. ಈ ಮೊದಲೇ ಸಿದ್ದಪಡಿಸಿಕೊಂಡಿದ್ದ ನಕ್ಷೆಯ ಸ್ಥಳಕ್ಕೆ ಅವುಗಳನ್ನು ತಂದು ಹಾಕಲಾಯಿತು. ಕೇವಲ 13 ದಿನಗಳಲ್ಲಿ ದೇವಾಲಯದ ಅಷ್ಟೂ ಅವಶೇಷಗಳು ಬರಿದಾದ ಜಲಾಶಯದ ಒಡಲಿನಿಂದ ದಡಕ್ಕೆ ಬಂದು ಬಿದ್ದವು. ಹದಿನಾಲ್ಕು ಕ್ರೇನ್‌ಗಳು, ನಾಲ್ಕು ಜೆಸಿಬಿಗಳು ಮತ್ತು ಎಂಬತ್ತು ಟ್ರ್ಯಾಕ್ಟರ್‌ಗಳ ಸಹಾಯದಿಂದ ಒಂದೊಂದೇ ಕಲ್ಲು ಚಪ್ಪಡಿಗಳನ್ನು ನಿಗದಿತ ಜಾಗಕ್ಕೆ ಸ್ಥಳಾಂತರಿಸಲಾಯಿತು. 2003ರಲ್ಲಿ ಆರಂಭವಾದ ದೇವಾಲಯದ ಪುನರುಜ್ಜೀವನ ಕಾರ್ಯ 2017 ರಲ್ಲಿ ಪೂರ್ಣಗೊಂಡಿತು.

ತಮಿಳುನಾಡು ಮತ್ತು ಆಂಧ್ರಪ್ರದೇಶದ 300 ರಿಂದ 400 ಮಂದಿ ಕಾರ್ಮಿಕರು ಹದಿನಾಲ್ಕು ವರ್ಷ ಅವಿರತವಾಗಿ ದುಡಿದ ಫಲವಾಗಿ ದೇವಾಲಯ ಮತ್ತೆ ಜೀವ ತಳೆಯಿತು. ನಕ್ಷತ್ರಾಕಾರದ ಜಗತಿಯ ಮೇಲೆ ಗರ್ಭಗುಡಿ, ಸುಖನಾಶಿ, ನವರಂಗ, ಪಾತಾಳಾಂಕಣ, ಮುಖ ಮಂಟಪ, ಗರುಡಗಂಬ, ಸುತ್ತಾಲಯ, ಮಹಾದ್ವಾರ ಸಹಿತ ದೇವಾಲಯ ಹೊಯ್ಸಳ ಶೈಲಿಯಲ್ಲಿಯೇ ಮೈದಳೆದಿದೆ. ವೇಣುಗೋಪಾಲಸ್ವಾಮಿಯ ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಈ ದೇಗುಲ ಜಲಾಶಯದಲ್ಲಿ ಮುಳುಗುವ ಮುನ್ನ ಇದ್ದ ವಿಗ್ರಹ ಪಾಂಡವಪುರ ತಾಲ್ಲೂಕಿನ ನಾರ್ತ್‌ಬ್ಯಾಂಕ್ ಎಂಬ ಗ್ರಾಮದಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಿಸಿಕೊಟ್ಟಿರುವ ಇದೇ ಹೆಸರಿನ ದೇವಾಲಯದಲ್ಲಿದೆ.

14ನೇ ಪುಟಕ್ಕೆ...


ಕೆಆರ್‌ಎಸ್ ಜಲಾಶಯದೊಳಗಿದ್ದ ವೇಣುಗೋಪಾಲಸ್ವಾಮಿ ದೇವಾಲಯ

ದೇಗುಲದ ಐತಿಹ್ಯ

ಹೊಯ್ಸಳರ ದೊರೆ ವಿಷ್ಣುವರ್ಧನನ ನಂತರದ ದೊರೆಗಳ ಕಾಲದಲ್ಲಿ ನಿರ್ಮಾಣವಾಗಿದ್ದ ತ್ರಿಕೂಟಾಚಲ ದೇಗುಲ. ಕನ್ನಂಬಾಡಿ ಗ್ರಾಮ 12ನೇ ಶತಮಾನದಲ್ಲಿ ಮಹಾ ಅಗ್ರಹಾರವಾಗಿದ್ದು, ಕಾಮೆಯ ದಣ್ಣಾಯಕ ಎಂಬಾತನು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ಎಂದು ದೇಗುಲದ ಯಾಗಶಾಲೆಯ ಮೇಲ್ಛಾವಣಿ ಶಾಸನ ತಿಳಿಸಿದೆ. ಹೊರ ಬಿತ್ತಿಯ ಮೇಲಿರುವ 14ನೇ ಶತಮಾನದ ಶಾಸನದಲ್ಲಿ ಪಟ್ಟನೋಜನ ಮಗ ಚಿಕ್ಕಬಾಚೆಯ ಎಂಬಾತನು ಮಂಟಪವೊಂದನ್ನು ಕಟ್ಟಿಸಿದ ಉಲ್ಲೇಖವಿದೆ. ಶಂಕರನಾಯಕ ಎಂಬಾತನು ಈ ದೇವಾಲಯಕ್ಕೆ ಜಮೀನು ದತ್ತಿ ಬಿಟ್ಟ ವಿಚಾರವನ್ನು ದಕ್ಷಿಣ ಮಂಟಪದ ಒಂದನೇ ಕಲ್ಲಿನ ಕಂಬದ ಮೇಲಿರುವ 14ನೇ ಶತಮಾನದ ಶಾಸನ ಹೇಳುತ್ತದೆ. (ಕ್ರಿ.ಶ.1722ರ ನ,22ರಲ್ಲಿ) ಬರೆದಿರುವ ತಾಮ್ರ ಶಾಸನವು, ಬಿಳುಗುಲಿ ಗೋಪೈಯನವರ ಮಗ ದೇವರಾಜಯ್ಯನು ಗೋಪಾಲಕೃಷ್ಣ ದೇವರ ಹೆಸರಿನಲ್ಲಿ ಜಮೀನು ದಾನ ನೀಡಿದ ಸಂಗತಿ ತಿಳಿಸುತ್ತದೆ.

ಮಳೆಗಾಲದ ಅತಿಥಿಗಳು ಸುಂದರ ಅಣಬೆಗಳು

ಬೀರಣ್ಣ ನಾಯಕ ಮೊಗಟಾ

ಮಲೆನಾಡಿನ ಮಣ್ಣಿನ ಮೇಲೆ ಮಳೆ ಮುತ್ತಿಕ್ಕಿ, ರಾತ್ರಿ ಗುಡುಗು, ಸಿಡಿಲಿನ ಅಬ್ಬರದ ಅಲಾರಾಮಿಗೆ ಮಲೆಯ ಮಣ್ಣಿನ ಮಕ್ಕಳಿಗೆ ಅಣಬೆಯ ನೆನಪು ಹಸಿಯಾಗಿ ಬೆಳಗಿನ ಜಾವಕ್ಕಾಗಿ ಕಾಯದೆ ಇರಲಾರರು. ಬೆಳಗಿನ ಚಹಾ ಕುಡಿಯುವ ಮೊದಲೇ ಅಣಬೆಯ ಅನುಭವವಿರುವ ಮಲೆನಾಡಿಗರು ಕೊಡ್ಲಗದ್ದೆಯ ಇಕ್ಕಲ ಬೆಟ್ಟ, ಖಂಟಗಾರಿನ ಸೊವೆಹಕ್ಕಲು, ನಂದೊಳ್ಳಿಯ ಕುಂಬ್ರಿಬೆಟ್ಟ, ತಟಗಾರಿನ ಗವಿಯನಪಾಲು, ಹೊಳೆಮಕ್ಕಿಯ ದನದಗುಡ್ಡ, ಇಡಗುಂದಿಯ ದೊಡ್ಡಹಕ್ಕಲುಗಳನೆಲ್ಲಾ ಸುತ್ತಾಡಿ ಅಣಬೆ ಬೇಟೆಗೆ 'ಜೈ' ಎಂದು ಮನೆ ಸೇರುವಾಗ ಬುಟ್ಟಿ ತುಂಬ ಬಾಯಲ್ಲಿ ನೀರೂರಿಸುವ ಅಣಬೆಯೋ ಅಣಬೆ!

ಸಸ್ಯ ವರ್ಗಕ್ಕೆ ಸೇರಿದ ಅಣಬೆಗೆ ಪತ್ರಹರಿತ್ತು ಇಲ್ಲದ ಕಾರಣ, ತಾನೇ ಆಹಾರ ತಯಾರಿಸಿ ಕೊಳ್ಳಲಾಗದ ಪರಾವಲಂಬಿ. ಫಂಗೈನ ಜಾತಿಗೆ ಸೇರಿದ ಅಣಬೆ ಯೂಕಾರ್ಯೋಟ ಕುಟುಂಬದ್ದಾಗಿದ್ದು ಮೈಕೋಟ ಸಾಮ್ರಾಜ್ಯಕ್ಕೆ ಸೇರಿದೆ. ಇವುಗಳಲ್ಲಿ ಕೆಲವೇ ಅಣಬೆಗಳನ್ನು ಬಿಟ್ಟರೆ ಉಳಿದವು ವಿಷಕಾರಿ. ಆ ಕಾರಣದಿಂದಲೆ ಚೀನಾ ದೇಶದಲ್ಲಿ ಅಣಬೆ ಸೇವಿಸಿ ಪ್ರತಿ ವರುಷ ಜನ ಸಾಯುತ್ತಾರೆ. ವಿಟಮಿನ್ ಟಿ2 ಹಾಗೂ ಡಿ ಜೀವನ ಸತ್ವವಿರುವ ಅಣಬೆ ಮಧುಮೇಹಿಗಳಿಗೆ ಔಷಧವಿದ್ದಂತೆ. ಸಾವಿರಾರು ಜಾತಿಯ ಅಣಬೆಗಳಲ್ಲಿ ಸುಮಾರು 20 ಜಾತಿಯ ಅಣಬೆಗಳನ್ನು ತಿನ್ನಲು ಬಳಸುತ್ತಾರೆ.

ತಿನ್ನುವ ಹಾಗೂ ತಿನ್ನದೆ ಇರುವ ಎರಡೂ ಬಗೆಯ ಅಣಬೆಗಳನ್ನು ನೋಡಿ ಆನಂದಿಸುವುದೇ ಸೊಗಸು. ಅವುಗಳ ಆಕರ್ಷಣೆ ಅಭೂತಪೂರ್ವವಾದದ್ದು. ಅದರ ಆಕಾರಕ್ಕೆ ಅನುಗುಣವಾಗಿ ಸ್ಥಳೀಯರು ತಮ್ಮದೆ ರೀತಿಯಲ್ಲಿ ಅವುಗಳಿಗೆ ಹೆಸರಿಟ್ಟಿದ್ದಾರೆ. ಹೆಗ್ಲಿ ಅಣಬೆ, ಕಲ್ಲಣಬೆ, ಹಾಲಣಬೆ, ಮರಳಣಬೆ, ಹಪ್ಪಳಣಬೆ, ಬೆಳ್ಳಣಬೆ, ಮರಣಬೆ, ಮುತ್ತಣಬೆ, ಬೋಗಿ ಅಣಬೆ, ದೋಸೆ ಅಣಬೆ, ಇಡ್ಲಣಬೆ, ಶೃಂಗಾರ ಅಣಬೆ-ಹೀಗೆ. ಸಸ್ಯ ಮತ್ತು ಮಾಂಸಾಹಾರಿಗಳು ಇಷ್ಟ ಪಡುವ ಅಣಬೆಗೆ ಮಾಂಸಾಹಾರಿ ಮಸಾಲೆಯನ್ನೆ ಹೆಚ್ಚು ಬಳಸುತ್ತಾರೆ. ಸಾರು, ಪಲ್ಲೆ, ಫ್ರೈ ಮುಂತಾದ ರುಚಿಕಟ್ಟಾದ ಅಡುಗೆಯನ್ನು ಅಣಬೆಯಿಂದ ತಯಾರಿಸಿ ಮೆಲ್ಲುತ್ತಾರೆ.

ನಿಸರ್ಗದತ್ತವಾದ ಅಣಬೆ ಮಳೆಗಾಲದಲ್ಲಿ ಮಾತ್ರ ದೊರೆತರೆ, ಅಣಬೆ ಬೆಳೆಯುವುದನ್ನೆ ಉದ್ಯಮವಾಗಿಸಿ ಕೊಂಡವರಲ್ಲಿ ಎಲ್ಲ ಕಾಲದಲ್ಲಿಯೂ ಅಣಬೆ ದೊರೆಯುತ್ತದೆ. ಆದರೆ ನಿಸರ್ಗದತ್ತವಾದ ಅಣಬೆ ರುಚಿ ಹಾಗೂ ಸತ್ವದಲ್ಲಿ ಮೇಲು. ಕೃಷಿಕ ಬೆಳೆದ ಅಣಬೆಯ ಬೆಲೆ ಒಂದು ಕೆ.ಜಿ.ಗೆ ₹200 ರಿಂದ 300 ಇದ್ದರೆ ನಿಸರ್ಗದತ್ತವಾದ ಒಂದು ದೊಡ್ಡ ಅಣಬೆ ಕೆಲವೊಮ್ಮೆ ಐದು ರೂಪಾಯಿಗೆ ಮಾರಾಟವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಜೊಯ್ಡಾ, ಹಳಿಯಾಳ, ಯಲ್ಲಾಪುರ, ಸಿರ್ಸಿ, ಸಿದ್ದಾಪುರ, ಭಟ್ಕಳ ಪೇಟೆಯಲ್ಲಿ ಮಾರಾಟಕ್ಕಾಗಿ ಅಣಬೆ ಹೇರಳವಾಗಿ ಮಳೆಗಾಲದಲ್ಲಿ ಬರುತ್ತದೆ.


ಶೃಂಗಾರಣಬೆ


ಹಾಲಣಬೆ


ಇಡ್ಲಣಬೆ


ಹಪ್ಪಳಣಬೆ

ಕಾಲಚಕ್ರದಲ್ಲಿ ವೃದ್ಧ ದಂಪತಿಯ ಯಾನ

ಎಸ್.ಆರ್. ವಿಜಯಶಂಕರ

ರಂಗಭೂಮಿ

ಕಾಲಚಕ್ರ ಎಂಬ ಮರಾಠಿ ಮೂಲ (ಜಯವಂತ ದಳ್ವಿ) ನಾಟಕದ ಕನ್ನಡದ ಅನುವಾದವನ್ನು (ಎಚ್. ಪಿ.ಕರ್ಕೇರಾ) ರಂಗ ಸಮೂಹ ಮಂಚಿಕೇರಿ ಜೂನ್ 9 ರಂದು ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಪ್ರದರ್ಶಿಸಿತು. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶ ಮಂಚಿಕೇರಿಯ ರಂಗ ಸಮೂಹ ಹವ್ಯಾಸಿ ಕಲಾವಿದರು ಮೂರು ವರ್ಷಗಳ ಹಿಂದೆ ಹುಲುಗಪ್ಪ ಕಟ್ಟಿಮನಿ ಅವರ ನಿರ್ದೇಶನದಲ್ಲಿ ಮೊದಲ ಪ್ರದರ್ಶನ ನೀಡಿದರು. ಆ ಬಳಿಕ ಹಲವು ಈ ನಾಟಕ ಪ್ರದರ್ಶನಗಳಾಗಿವೆ.

ಇಂದು ನಮ್ಮ ಸಮಾಜದಲ್ಲಿ ಹೆಚ್ಚುತ್ತಿರುವ ವೃದ್ಧ ತಂದೆ ತಾಯಿಯರ ಸಮಸ್ಯೆಗಳ ಸುತ್ತ 'ಕಾಲಚಕ್ರ' ತಿರುಗುತ್ತದೆ. ಇನಾಂದಾರ್-ರುಕ್ಮಿಣಿ ಬಾಯಿ ವೃದ್ಧ ದಂಪತಿಗೆ ವಿಶ್ವ, ಶರತ್ ಇಬ್ಬರು ಮಕ್ಕಳು. ವಿಶ್ವನ ಓದು ಹೈಸ್ಕೂಲಿಗೆ ನಿಂತಿದೆ. ತಂದೆ ಮಗ ಗಡಿಯಾರ ಅಂಗಡಿಯಲ್ಲಿ ದುಡಿದು ಶರತ್‌ನನ್ನು ಓದಿಸಿದ್ದಾರೆ. ದೊಡ್ಡ ಕಂಪೆನಿಯಲ್ಲಿ ಕೆಲಸದಲ್ಲಿರುವ ಅವನು ಮಡದಿ ಮಕ್ಕಳೊಂದಿಗೆ ದೆಹಲಿಯಲ್ಲಿದ್ದಾನೆ. ಊರಲ್ಲಿರುವ ಹಿರಿಯ ಮಗ ಸೊಸೆ ಜೊತೆ ವೃದ್ಧ ತಂದೆ ತಾಯಿಯರಿದ್ದಾರೆ. ಆದರೆ ಸೊಸೆ ಮಗ ಇಬ್ಬರಿಗೂ ತಂದೆ ತಾಯಿ ಜೊತೆ ಸರಿಬರುತ್ತಿಲ್ಲ. ಅವರಿಗೆ ಖರ್ಚು ಮಾಡುವ ಹಣ ವ್ಯರ್ಥವೆಂದು ತೋರುತ್ತಿದೆ; ಯಾಕೆಂದರೆ ಮಗನನ್ನು ಓದಿಸಲು ಹೆಚ್ಚಿನ ಹಣಬೇಕು. ಹೆಂಡತಿಯ ನಿಷ್ಠುರ ನಡೆಗಳನ್ನಾತ ನಿಯಂತ್ರಿಸಲಾರ. ಮೊಮ್ಮಗನಿಗೆ ರೆಸಿಡೆನ್ಶಿಯಲ್ ಸ್ಕೂಲ್ ಯಾಕೆ? ಮನೆಯಿಂದಲೇ ಶಾಲೆಗೆ ಹೋಗಬಹುದಲ್ಲ ಎಂಬುದು ಅಜ್ಜ ಅಜ್ಜಿಯರ ವಿಚಾರ. ಎರಡನೇ ಮಗ ಕೆಲವು ದಿನಗಳಿಗೂ ದೆಹಲಿ ಬರುವಂತೆ ತಂದೆ-ತಾಯಿಗಳನ್ನು ಆಹ್ವಾನಿಸುವುದಿಲ್ಲ. ಅವರೆಲ್ಲಾದರೂ ಅಲ್ಲೇ ಉಳಿದರೆ ಎಂಬ ಆತಂಕವೂ ಇದೆ. ಅಣ್ಣ ತಮ್ಮಂದಿರು ಜೊತೆ ಸೇರಿ ತಂದೆ ತಾಯಿಯರನ್ನು ಉಚಿತವಾದೊಂದು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ.

ಈ ನಡುವೆ ವೃದ್ಧ ತಂದೆ ಪತ್ರಿಕೆಯಲ್ಲೊಂದು ಜಾಹೀರಾತು ಕೊಡುತ್ತಾರೆ. ಮಕ್ಕಳಿಲ್ಲದವರು ದತ್ತು ಮಕ್ಕಳನ್ನು ಪಡೆಯುವಂತೆ, ಮನೆಯಲ್ಲಿ ಹಿರಿಯರು ವೃದ್ಧರಿಲ್ಲದವರು ಯಾರಾದರೂ ವೃದ್ಧ ದಂಪತಿಯನ್ನು ದತ್ತು ಪಡೆಯುವುದಾದರೆ ವೃದ್ಧ ದಂಪತಿ ಸಿದ್ಧರಿದ್ದಾರೆ. ವೃದ್ಧಾಶ್ರಮದಲ್ಲಿ ಇರಲಾರದೆ ಓಡಿಬಂದ ಈ ವೃದ್ಧರನ್ನು ಜಾಹೀರಾತು ನೋಡಿದ ತತ್ವಶಾಸ್ತ್ರದ ಪ್ರೊಫೆಸರ್‌ಗಳಾದ ರಾಘವ ಕರಮ್‌ಕರ್ ಇರಾವತಿ ದಂಪತಿ ದತ್ತು ಪಡೆಯುತ್ತಾರೆ. ಕರಮ್‌ಕರ್ ಮನೆಗೆ ಬಂದು ಹೋಗುವ ಹಲವರ ಮೂಲಕ ಮನುಷ್ಯ ಸ್ವಭಾವದ ಉನ್ನತ-ಕ್ಷುಲ್ಲಕ ಮುಖಗಳು ಅನಾವರಣಗೊಳ್ಳುತ್ತವೆ. ವೃದ್ಧ ಇನಾಂದಾರರ ಶಾಲೆಯ ಗೆಳತಿ ಶರದಿನಿ ಬಗ್ಗೆ ಅವರಿಗೆ ಸದಾ ಹಸಿರು ನೆನಪು. ರುಕ್ಮಿಣಿಬಾಯಿ ಸಾಯುವಾಗ ಮಗನಿಗೆ ನೀವು ಶರತ್ ಎಂಬ ಹೆಸರಿಟ್ಟುದು ಶರದಿನಿಗೋಸ್ಕರವೆ? ಎಂದು ಕೇಳುತ್ತಾಳೆ. ಕೊನೆಯಲ್ಲಿ ಅವರಿಗೊಂದು ದೊಡ್ಡ ಲಾಟರಿ ಬಹುಮಾನ ಬಂದ ದಿನ ವೃದ್ಧ ಇನಾಂದಾರರೂ ತೀರಿಕೊಳ್ಳುತ್ತಾರೆ. ಕರಮ್‌ಕರ್ ಮನೆಗೆ ಬರುವ ಕುರುಡರು ಬಾಬುರಾವ್ ಬಾಲ್ಕನಿಯಲ್ಲಿ ಕಾಗೆಗಳಿಗೆ ಹಾಕುವ ಬ್ರೆಡ್ ಚೂರುಗಳು ನಮ್ಮ ಮಾನವೀಯತೆಯ ವೈರುಧ್ಯಗಳನ್ನು ಎತ್ತಿ ಕಾಣಿಸುತ್ತವೆ.

ಮಿತ ಆದಾಯದ ಮಧ್ಯಮ ವರ್ಗದ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರವೇನು ಎಂಬುದನ್ನು ನಾಟಕ ಗಂಭೀರವಾಗಿ ಚಿಂತಿಸುತ್ತದೆ. ದೃಶ್ಯ ವಿವರಗಳಿಂದ ಚುರುಕಾಗಿ ಸಾಗುವ ನಾಟಕದಲ್ಲಿ ಅರ್ಥಪೂರ್ಣ ಹಳೆ ಕನ್ನಡ ಚಿತ್ರಗೀತೆಗಳನ್ನು ಬಳಸಿ (ಉದಾ ಆಡಿಸಿ ನೋಡು ಬೀಳಿಸಿ ನೋಡು, ನಾವಿಕನಾರೋ ನಡೆಸುವುದೆಲ್ಲೊ ಇತ್ಯಾದಿ) ಭಾವಪೂರ್ಣ ಕೊಂಡಿಗಳನ್ನು ಬೆಸೆಯಲಾಗಿದೆ. ಪಾತ್ರ ಪೋಷಣೆಗೆ ಪೂರಕವಾದ ಸಹಜ ಅಭಿನಯವಿರುವಂತೆ ಹುಲಗಪ್ಪ ಕಟ್ಟಿಮನಿ ನಾಟಕವನ್ನು ನಿರ್ದೇಶಿಸಿದ್ದಾರೆ. ರಂಗ ಚಲನೆ ವಾಸ್ತವತೆಗೆ ಪೂರಕವಾದ ಸರಳ ರಂಗ ಸಜ್ಜಿಕೆ. ಬೆಳಕು (ನಾಗರಾಜ್ ಹೆಗಡೆ ಜಾಲಿಮನೆ) ಹಾಗೂ ಸಂಗೀತ (ಕಿರಣ್ ಹೆಗಡೆ / ಪ್ರಕಾಶ್ ಭಟ್) ನಾಟಕದ ಭಾವ ಪ್ರಪಂಚಕ್ಕೆ ಪೂರಕವಾಗಿ ಯಶಸ್ವಿಯಾಗಿವೆ. ತಂಡದ ಅಭಿನಯ ಸಂಭಾಷಣೆಗಳು ಉನ್ನತ ಮಟ್ಟದಲ್ಲಿತ್ತು. ಮುಖ್ಯವಾಗಿ ವೃದ್ಧ ಇನಾಂದಾರ್ (ನಾಗರಾಜ್ ಹೆಗಡೆ ಜಾಲಿಮನೆ) ಬಾಬೂರಾವ್ (ಎಂ ಕೆ ಭಟ್) ವಿಶ್ವ (ಸುಬೋಧ ಹೆಗಡೆ) ರುಕ್ಮಿಣಿ ಬಾಯಿ (ನಿರ್ಮಲಾ ಹೆಗಡೆ) ಮುಂತಾದವರ ಅಭಿನಯ ಹೆಚ್ಚಿನ ಗಮನ ಸೆಳೆಯುತ್ತಿತ್ತು.

ಮರಾಠಿ ರಂಗಭೂಮಿ ವರ್ತಮಾನದ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸುತ್ತದೆ. ಸಾಂಕೇತಿಕವಾಗಿ ಕೆಟ್ಟು ಹೋಗಿರುವ ಹಿರಿಯರ ಗಡಿಯಾರದ ಕಾಲ ಅಲ್ಲಿಗೆ ನಿಂತಿದೆ. ಮಗನಿಗೆ ಅದನ್ನು ಸರಿಪಡಿಸಿ ಚಲಿಸುವಂತೆ ಮಾಡಲೂ ಆಗುವುದಿಲ್ಲ. ಆದರೆ ಸಂಸಾರದಲ್ಲಿ ಕಾಲಚಕ್ರ ಚಲಿಸಲೇ ಬೇಕಾಗುತ್ತದೆ. ಬದುಕು ಕೇವಲ ವೈಚಾರಿಕ, ವ್ಯಾವಹಾರಿಕ ಪ್ರಜ್ಞೆಯಿಂದ ನಡೆಯುವುದಿಲ್ಲ. ಸಂಸಾರದ ಮೂಲ ಸತ್ವ ಬದುಕಿನ ಭಾವಸತ್ಯದಲ್ಲಿದೆ ಮತ್ತು ಮಮತೆ ಮಾನವೀಯತೆಗಳು ಅದರ ಮೂಲ ತತ್ವ ಎಂಬುದನ್ನು ನಾಟಕ ತೋರಿಸಿಕೊಡುತ್ತದೆ. ಅದನ್ನು ಕಾಣಿಸಿಕೊಡುವಲ್ಲಿ ಗ್ರಾಮೀಣ ಮಂಚಿಕೇರಿಯ ಹವ್ಯಾಸಿ ಕಲಾವಿದರು ವೃತ್ತಿನಿರತ ಕಲಾವಿದರಷ್ಟೆ ಯಶಸ್ವಿಯಾಗಿದ್ದಾರೆ. ಶಾಂತ ಮನಸ್ಸಿನಿಂದ ಪ್ರಚಲಿತ ಸಮಸ್ಯೆಯೊಂದರ ಬಗೆಗೆ ಗಂಭೀರವಾಗಿ ಚಿಂತಿಸುವಂತೆ ಮಾಡುವಲ್ಲಿ ನಾಟಕ ಯಶಸ್ವಿಯಾಗಿದೆ.



ಕಾಲಚಕ್ರ ನಾಟಕದ ದೃಶ್ಯ

ಬಂಡೆಗಳ ಮೇಲೆ ಕಾವ್ಯ ಬರೆಸಿದ ನಾಡು

12ನೇ ಪುಟದಿಂದ...

ಬಂಡೆಯ ಮೇಲೆ ತಮಿಳು ಅಕ್ಷರಗಳಿದ್ದು ಪರಿಶೀಲಿಸಬೇಕೆಂದು ಹೈದರಾಬಾದಿನ ಪುರಾತತ್ವ ಇಲಾಖೆಯನ್ನು ಶಾಸ್ತ್ರಿ ಕೋರಿದರು. ಇಲಾಖೆಯ ನಿರ್ದೇಶಕ ಯಜ್ದಾನಿ, ಸಹಾಯಕ ನಿರ್ದೇಶಕ ಸೈಯದ್ ಯೂಸುಫ್ ಕೊಪ್ಪಳಕ್ಕೆ ಬಂದರು. ಕೂಲಂಕಷ ಸಂಶೋಧನೆ ನಡೆಸಿ, ಅದು ಬ್ರಾಹ್ಮಿಲಿಪಿಯ ಅಶೋಕನ ಶಿಲಾಶಾಸನವೆಂದು ಪತ್ತೆ ಹಚ್ಚಿದರು. ಪಶ್ಚಿಮದ ಕಡೆಯಿಂದ ಕೊಪ್ಪಳ ಊರು ಪ್ರವೇಶಿಸುವಾಗ ಬಲಬದಿಯಲ್ಲಿ ಪಾಲ್ಕಿಗುಂಡು ಬೆಟ್ಟವಿದೆ. ಅದರ ತುತ್ತತುದಿಯಲ್ಲಿ ಕಲ್ಲು ಚಪ್ಪಡಿಯೊಂದನ್ನು ಎರಡು ಬಂಡೆಗಳ ಮೇಲೆ ಹೊದೆಸಿಟ್ಟಿರುವಂತಹ ರಚನೆ ಕಾಣುತ್ತದೆ. ಅಲ್ಲಿಯೂ ಇದೇ ಬರಹವುಳ್ಳ ಶಾಸನವಿದೆ.

ಇದಾದ ಬಳಿಕ ಒಂದಾದಮೇಲೊಂದು ಅಶೋಕನ ಶಿಲಾಶಾಸನಗಳು ಪತ್ತೆಯಾದವು. ಈವರೆಗೆ ಕರ್ನಾಟಕದ ಕೊಪ್ಪಳದಲ್ಲಿ ಎರಡು, ರಾಯಚೂರು ಜಿಲ್ಲೆಯ ಮಸ್ಕಿಯಲ್ಲೊಂದು, ಬಳ್ಳಾರಿ ಜಿಲ್ಲೆಯ ನಿಟ್ಟೂರು-ಉದೆಗೊಳದಲ್ಲಿ ತಲಾ ಒಂದು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ-ಜತಿಂಗ ರಾಮೇಶ್ವರ-ಅಶೋಕ ಸಿದ್ದಾಪುರಗಳಲ್ಲಿ ತಲಾ ಒಂದು, ಯಾದಗಿರಿ ಜಿಲ್ಲೆಯ ಸನ್ನತಿಯಲ್ಲೊಂದು - ಒಟ್ಟು ಒಂಬತ್ತು ಶಿಲಾಶಾಸನಗಳು ಸಿಕ್ಕಿವೆ. ಇವುಗಳಲ್ಲಿ ಸನ್ನತಿಯದು ಬೃಹತ್ ಶಿಲಾಶಾಸನ (ಮೇಜರ್ ಎಡಿಕ್ಟ್). ಮಿಕ್ಕವು ಕಿರಿಯವು (ಮೈನರ್ ಎಡಿಕ್ಟ್). ಗ್ರಾನೈಟ್ ಕ್ವಾರಿಗಾಗಿ ಒಡೆದುಕೊಂಡ ಎಷ್ಟು ಬಂಡೆಗಳಲ್ಲಿ ಎಷ್ಟೆಷ್ಟು ಬರಹ, ಕನಸು, ಸಂದೇಶಗಳಿದ್ದವೋ; ಯಾವ್ಯಾವುವು ನಮ್ಮ ಮನೆಗಳ ನೆಲಹಾಸಾಗಿ ಸದಾಶಯವನ್ನು ಹುದುಗಿಸಿಕೊಂಡಿವೆಯೋ, ನೆಲದವ್ವನೇ ತಿಳಿಸಬೇಕು.


ಕೊಪ್ಪಳದ ಗವಿಮಠದ ಬಳಿಯ ಬಂಡೆಯಲ್ಲಿ ಕಾಣಸಿಗುವ ಸಾಮ್ರಾಟ ಅಶೋಕ ಬರೆಸಿದ ಶಿಲಾಶಾಸನ

ಆರದಿರಲಿ ಇರಾನಿ ಚಾಯ್ ಸಂಸ್ಕೃತಿ



ತಣ್ಣಗಾಗುತ್ತಿದೆ ಇರಾನಿ ಚಾಯ್ ಸಂಸ್ಕೃತಿ (ರಶ್ಮಿ ಎಸ್ ಜೂನ್ 9) ಲೇಖನ ಇರಾನಿ ಚಾಯ್ ಕುರಿತಾದ ಹಲವು ಸ್ವಾರಸ್ಯಕರ ಸಂಗತಿಗಳನ್ನು ತಿಳಿಸಿಕೊಟ್ಟಿತು. ನಾನು ಇರಾನಿ ಚಾಯ್ ಅಭಿಮಾನಿ. ಕಳೆದ ವಾರ ಸಿಕಂದರಾಬಾದ್‌ಗೆ ಹೋದಾಗ ರೈಲು ನಿಲ್ದಾಣ ಬಳಿಯ ರೆಜಿಮೆಂಟಲ್ ಬಜಾರ್‌ನ 'ಬ್ಲೂ-ಸಿ'ನಲ್ಲಿ ಬಿಸ್ಕೂಟ್‌ನೊಂದಿಗೆ ಚಾಯ್ ಕೊಡಿದು ಖುಷಿಪಟ್ಟೆ.

ವೆಂಕಟೇಶ್ ಮುದಗಲ್ ಕಲಬುರಗಿ

ಕಲ್ಯಾಣ ಕರ್ನಾಟಕದಲ್ಲಿನ ಇರಾನಿ ಚಹಾದ ವೈಶಿಷ್ಟ್ಯಗಳೊಂದಿಗೆ ಮಾನವೀಯ ಸಂಬಂಧಗಳನ್ನು ತಮ್ಮದೆಯಾದ ಭಾಷೆಯಲ್ಲಿ ಲೇಖಕಿ ಸೊಗಸಾಗಿ ವಿವರಿಸಿದ್ದಾರೆ. ನಾನೇ ಇರಾನಿ ಚಾಯ್ ಸೇವಿಸಿದಷ್ಟು ಸಂತೋಷವಾಯಿತು.

ಬೀರಪ್ಪ ಡಿ.ಡಂಬಳಿ ಕೋಹಳ್ಳಿ, ಬೆಳಗಾವಿ ಜಿಲ್ಲೆ

ಇರಾನಿ ಕೆಫೆಯ ಪರಿಮಳಭರಿತ ಚಹಾ ಇಲ್ಲದಿದ್ದರೂ ಇಂದಿಗೂ ಚಹಾ ಸಂಸ್ಕೃತಿ ಉಳಿದಿದೆ. ಚಹಾದ ಸ್ವಾದ, ಚಹಾ ಪ್ರಿಯರಿಗಷ್ಟೆ ಗೊತ್ತು. ಒಂದೊಂದೆ ಗುಟುಕ ಹೀರುತ್ತಾ ಆಸ್ವಾದಿಸುವ ಪರಿ ಕಳೆದು ಹೋದ ಚಹಾನುಭವದ ಮೆಲುಕು ಹಾಕಿತು.

ಎಸ್.ವಿಶ್ವನಾಥ ಐನಹಳ್ಳಿ, ಮೈಸೂರು

ಲೇಖನ ಓದಿ ವಿಷಾದವೆನಿಸಿತು. ಆತಿಥ್ಯದ ಸಂಸ್ಕೃತಿ ಮರೆಯಾಗದಂತೆ ಉಳಿಸಿಕೊಳ್ಳುವ ಜವಾಬ್ದಾರಿ ಎಲ್ಲರ ಹೊಣೆಯಾಗಿದೆ. ಇದಕ್ಕೆ ಜನರ ಸಹಕಾರವಿರಲಿ. ಪ್ರತಿ ಊರಿನಲ್ಲಿಯೂ ಒಂದಾದರೂ ಇರಾನಿ ಚಾಯ್ ಕೆಫೆ ತೆರೆಯುವಂತೆ ಆಗಲಿ.

ಸಾವಿತ್ರಮ್ಮ ಕೆ. ವಿಭೂತಿ ಹರಿಹರ



ಒಣಮೀನು ನಂಟು ನೆನಪುಗಳ ಗಂಟು

ನೆಲದ ನಂಟು ಒಣ ಮೀನು ಗಂಟು (ಗಣಪತಿ ಹೆಗಡೆ) ಕಾರವಾರದ ವಿಶೇಷ ಮೀನು ಮಾರುಕಟ್ಟೆ ಭಾವನಾತ್ಮಕ ನೆಂಟರನ್ನು ಬೆಸೆಯುವ ಪರಿಯೇ ಸೋಜಿಗ. ಇದಕ್ಕಾಗಿಯೇ ದೇಶದ ವಿವಿಧ ಭಾಗಗಳಲ್ಲಿ ನೆಲೆಸಿರುವ ಕಾರವಾರ ಮೂಲದ ಜನರು ವರ್ಷಕ್ಕೊಮ್ಮೆ ಸಿಗುವ ಒಣಮೀನನ್ನು ಖರೀದಿಸಿ ತಿಂಗಳು ಗಟ್ಟಲೆ ಅದರ ರುಚಿಯನ್ನು ಆಸ್ವಾದಿಸುವ ಪರಿ ಅನುಭವಿಸಿದವರಿಗೇ ಗೊತ್ತು. ಒಟ್ಟಿನಲ್ಲಿ ಮೇ ತಿಂಗಳ ಕೊನೆಯ ಎರಡು ಭಾನುವಾರ ಸ್ವಂತ ನೆಲದಿಂದ ದೂರದೂರುಗಳಲ್ಲಿ ನೆಲೆಸಿರುವ ಬಂಧು ಬಾಂಧವರು, ಸ್ನೇಹಿತರನ್ನು ಬೆಸೆಯುವ ಈ ಒಣಮೀನಿನ ಸಂತೆಯ ಅನುಭವ ಮಧುರ ನೆನಪು.

ಸಿಹಿಮೊಗೆ ರಮೇಶ್ ಮೈಸೂರು

ಮುನ್ನೋಟ 16-06-2024 ರಿಂದ 22-06-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆಕ್ರೋಶವೇ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಹಿರಿಯರು ನಿಮ್ಮ ಮಾತಿನಿಂದ ಬೇಸರಪಟ್ಟಿದ್ದರೂ ನಿಮಗೆ ಸಹಕರಿಸುವರು. ಶೀತ ಸಂಬಂಧಿ ಕಾಯಿಲೆಗಳು ಕಾಡಬಹುದು. ಸಂಗಾತಿಯ ನಡವಳಿಕೆಯಲ್ಲಿ ಭಿನ್ನತೆಯನ್ನು ಕಾಣಬಹುದು. ವ್ಯಾಪಾರ ವ್ಯವಹಾರಗಳಲ್ಲಿ ಎಚ್ಚರವಾಗಿರಿ. ಕೃಷಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಮೇಲ್ದರ್ಜೆಯ ಸ್ಥಾನ ದೊರೆಯಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಸಭ್ಯರಂತೆ ಇರುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ವೃತ್ತಿಯ ಜಾಗದಲ್ಲಿ ಹೊಸ ರೀತಿಯ ಸಮಸ್ಯೆಗಳು ಎದುರಾಗುವ ಲಕ್ಷಣಗಳಿವೆ. ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ತಂದೆಯಿಂದ ಸ್ಥಿರಾಸ್ತಿ ಕೊಳ್ಳಲು ಸಹಾಯ ಸಿಗುತ್ತದೆ. ಕಬ್ಬಿಣದ ಮಾರಾಟಗಾರರಿಗೆ ಲಾಭ ಹೆಚ್ಚುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆತ್ಮಗೌರವ ಬಹಳ ಜಾಸ್ತಿ ಇರುತ್ತದೆ. ಆದಾಯವು ನಿರೀಕ್ಷೆಯಷ್ಟಿರುವುದಿಲ್ಲ. ಪುಸ್ತಕ ವ್ಯಾಪಾರಿಗಳಿಗೆ, ಹಣಕಾಸಿನ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ವಿದೇಶದಲ್ಲಿ ಗಣಿಗಾರಿಕೆ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಉದ್ಯೋಗದ ಸ್ಥಳದಲ್ಲಿ ಹೊಸ ಸಮಸ್ಯೆಗಳು ಎದುರಾದರೂ ಅದನ್ನು ಜಾಣತನದಿಂದ ನಿವಾರಣೆ ಮಾಡಿಕೊಳ್ಳುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಬಹಳ ಚುರುಕಾಗಿ ಕೆಲಸ ಮಾಡುವಿರಿ. ಆದಾಯ ಕಡಿಮೆ ಇರುತ್ತದೆ. ವೃತ್ತಿಯಲ್ಲಿ ಆದಾಯ ಹೆಚ್ಚುವ ಸಾಧ್ಯತೆಗಳಿವೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಿಗೆ ಹೆಚ್ಚಿನ ಅನುಕೂಲಗಳು ಒದಗಿ ಬರುತ್ತವೆ. ಸಗಟು ಲೋಹ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ. ಸರ್ಕಾರಿ ಕೆಲಸಗಳಲ್ಲಿ ಅಡ್ಡಿ ಆತಂಕಗಳು ಎದುರಾಗಬಹುದು. ಸ್ವಂತ ಉದ್ಯೋಗ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಹಳ ಗತ್ತು ನಿಮ್ಮಲ್ಲಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಉದ್ಯೋಗದಲ್ಲಿ ಆದಾಯ ಹೆಚ್ಚುವ ಸಾಧ್ಯತೆಗಳಿವೆ. ಆದಾಯದಷ್ಟೇ ಖರ್ಚು ಇರುತ್ತದೆ. ವೃತ್ತಿಯಲ್ಲಿ ಗೌರವ ಇರುತ್ತದೆ. ಮಹಿಳೆಯರು ನಡೆಸುವ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ಸ್ವಲ್ಪ ಮಟ್ಟಿನ ವಿಳಂಬ ಆಗಬಹುದು. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ತಂದೆಯ ವ್ಯವಹಾರದಲ್ಲಿ ನಿಮಗೆ ಸ್ಥಾನ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಬಹಳ ಆಲಸೀತನ ನಿಮ್ಮಲ್ಲಿ ಇರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಹಿರಿಯರಿಂದ ಸೂಕ್ತ ಸಮಯಕ್ಕೆ ಸರಿಯಾದ ಸಹಕಾರ ಮತ್ತು ಧನಸಹಾಯ ಸಿಗುತ್ತದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವಿರಿ. ದ್ರವರೂಪದ ವಸ್ತುಗಳನ್ನು ಮಾರುವವರಿಗೆ ಲಾಭವಿದೆ. ಕಣ್ಣಿನ ತೊಂದರೆಗಳು ಕೆಲವರಿಗೆ ಕಾಡಬಹುದು. ಕೃಷಿಯಿಂದ ಆದಾಯ ಕಡಿಮೆಯಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಅಧಿಕಾರಸ್ಥರಂತೆ ಮಾತನಾಡುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಕಣ್ಣಿನ ವೈದ್ಯರಿಗೆ ಹೆಚ್ಚು ಸಂಪಾದನೆ ಇರುತ್ತದೆ. ಆರೋಗ್ಯಕ್ಕಾಗಿ ಹಣ ಖರ್ಚಾಗುವ ಸಾಧ್ಯತೆಗಳಿವೆ. ಹಿರಿಯರು ಕೊಟ್ಟ ಸಾಲಗಳನ್ನು ವಾಪಸ್ಸು ಕೇಳಬಹುದು. ವೃತ್ತಿಯ ಸ್ಥಳದಲ್ಲಿ ಹಿತಕರ ವಾತಾವರಣ ಇರುವುದಿಲ್ಲ. ವೃತ್ತಿಯಲ್ಲಿ ಮಹಿಳಾ ಮೇಲಧಿಕಾರಿಗಳಿಂದ ಸಹಾಯವನ್ನು ನಿರೀಕ್ಷೆ ಮಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸ್ವಲ್ಪ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ತಂದೆ ಮಕ್ಕಳ ನಡುವೆ ಕಾವೇರಿದ ಮಾತುಗಳಾಗಬಹುದು. ವ್ಯವಹಾರಗಳಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ವೃತ್ತಿಯಲ್ಲಿ ಇದ್ದ ಮುಸುಕಿನಗುದ್ದಾಟಗಳು ಹಾಗೆಯೇ ಮುಂದುವರೆಯುತ್ತವೆ. ಧಾರ್ಮಿಕ ಸಂಸ್ಥೆಗಳನ್ನು ನಡೆಸುವವರಿಗೆ ಸಮಾಜದಿಂದ ಸಹಾಯ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಮಾಜಮುಖಿ ಕೆಲಸ ಮಾಡಲು ಉತ್ಸುಕರಾಗಿರುವಿರಿ. ಆದಾಯವು ಕಡಿಮೆ ಇರುತ್ತದೆ. ಅನಿರೀಕ್ಷಿತ ಖರ್ಚು ವೆಚ್ಚಗಳು ಬರಬಹುದು ಹಾಗೂ ಅದನ್ನು ನಿಭಾಯಿಸುವ ಶಕ್ತಿ ಇರುತ್ತದೆ. ತಂದೆಯಿಂದ ಬರಬೇಕಾದ ಆಸ್ತಿಬರುವುದು ನಿಧಾನವಾಗುತ್ತದೆ. ವೃತ್ತಿಯಲ್ಲಿ ನಿಮ್ಮ ವೃತ್ತಿ ಧರ್ಮವನ್ನು ಕಾಪಾಡಿಕೊಳ್ಳುವಿರಿ. ಆಭರಣ ತಯಾರಕರಿಗೆ ಬೇಡಿಕೆ ಬರುತ್ತದೆ. ಹೈನುಗಾರಿಕೆ ಮಾಡುವವರಿಗೆ ಸ್ವಲ್ಪ ಹಿನ್ನಡೆ ಆಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸ್ಥಿತಪ್ರಜ್ಞರಾಗಿ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ ಹಾಗೂ ಅದರಲ್ಲೇ ನಿರ್ವಹಣೆ ಮಾಡುವ ಶಕ್ತಿ ನಿಮಗಿರುತ್ತದೆ. ವೃತ್ತಿಯಲ್ಲಿ ಏನೇ ಗೊಂದಲಗಳಿದ್ದರೂ ಧೈರ್ಯವಾಗಿ ನಿಭಾಯಿಸುವಿರಿ. ಹಣ ಗಳಿಸುವುದು ನಿಮ್ಮ ಚಟುವಟಿಕೆಯಲ್ಲಿ ಒಂದು ಭಾಗವಾಗಿರುತ್ತದೆ. ಹೈನುಗಾರಿಕೆಯಲ್ಲಿ ಆದಾಯ ಕಡಿಮೆಯಾಗಬಹುದು. ತಾಯಿಯು ನಿಮಗೆ ಸಾಕಷ್ಟು ಸಲಹೆ ಸೂಚನೆಗಳನ್ನು ಕೊಡುವರು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ನ್ಯಾಯ ಧರ್ಮ ಸಮ್ಮತವಾಗಿ ನಡೆಯುವಿರಿ. ಆದಾಯವು ಕಡಿಮೆ ಇದ್ದು, ಖರ್ಚನ್ನು ಸರಿದೂಗಿಸುವಿರಿ. ಸಮೂಹದಲ್ಲಿ ಮಾತನಾಡುವಾಗ ಎಚ್ಚರಿಕೆ ಇರಲಿ. ಧಾರ್ಮಿಕ ಮುಖಂಡರಗಳಿಗೆ ಗೌರವ ದೊರೆಯುತ್ತದೆ. ವೃತ್ತಿಯಲ್ಲಿ ಇರುವವರಿಗೆ ಕಿರಿಕಿರಿ ಹೆಚ್ಚಾಗುತ್ತದೆ. ಸಿಹಿ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ಲಾಭ ಹೆಚ್ಚುತ್ತದೆ. ಆಹಾರ ವಸ್ತುಗಳನ್ನು ತಯಾರಿಸಿ ಮಾರುವವರ ಲಾಭ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಒಂದು ರೀತಿಯ ಅಸಮಾಧಾನವು ನಿಮ್ಮಲ್ಲಿ ತುಂಬಿರುತ್ತದೆ. ಮಾತಿನಲ್ಲಿ ಬಹಳ ಕಠಿಣತೆ ಇರುತ್ತದೆ. ಕಬ್ಬಿಣದ ವ್ಯಾಪಾರಸ್ಥರಿಗೆ ವ್ಯವಹಾರ ವಿಸ್ತರಣೆ ಆಗುತ್ತದೆ ಹಾಗೂ ಲಾಭ ಹೆಚ್ಚುತ್ತದೆ. ಪಾದದಲ್ಲಿನ ನೋವು ಕಾಡಬಹುದು. ನಿಮ್ಮ ಸಹೋದ್ಯೋಗಿಗಳಿಂದ ನಿಮಗೆ ಸ್ವಲ್ಪ ಕಿರುಕುಳಗಳಾಗುವ ಸಾಧ್ಯತೆಗಳಿವೆ. ವೃತ್ತಿಯಲ್ಲಿ ನಿರೀಕ್ಷಿತ ಏಳಿಗೆ ಇರುವುದಿಲ್ಲ. ಕುಸುರಿ ಕಲೆಗಳನ್ನು ಮಾಡುವವರಿಗೆ ಬೇಡಿಕೆ ಬರುತ್ತದೆ.

ಪದಬಂಧ 2846



ಮೇಲಿನಿಂದ ಕೆಳಕ್ಕೆ

1. ಏನು ಮಾಡಿದರೆ ಏನಾಗಬಹುದೆಂಬ ತಿಳಿವಳಿಕೆ 4
2. ವಿಶ್ವಾಮಿತ್ರನನ್ನು ಕಾಡಿದ ತಾರೆಯ ಹೆಸರಿನವ 4
3. ತರಕಾರಿ ಮಾರುವ ತಮಿಳಿಗನ ಮೊನಚು ಬದನೆಕಾಯಿ 4
4. ಅರ್ಪಿಸಬಹುದಾದ ದೇಹ ಮತ್ತು ಆಂತರ್ಯ 4
7. ಹಲಸಿನ ಹಣ್ಣಿಗೆ ಸಂಸ್ಕೃತದ ಲೇಪ 5
9. ಕೋಪಗೊಂಡ ಉಗ್ರ ಶಿವನ ವಿಷ್ಣುಸ್ವರೂಪ 5
10. ಇನ್ನೊಬ್ಬರ ಅಂತರಂಗಕ್ಕೆ ನೋವುಂಟು ಮಾಡು 5
11. ಸಾಮಾನ್ಯರಿಗೆ ಒಳ್ಳೆಯದನ್ನು ಬಯಸಿದರು ಮಂದಿಯೇ ಮಾಯ 5
14. ಕಳ್ಳರನ್ನು ಬಂಧಿಸಿಡುವ ಕತ್ತಲ ಮನೆ 4
15. ಕಂಬದಿಂದೊಡೆದ ಮಾನವರೂಪಿ ಮೃಗರಾಜ 4
16. ವಿಷ್ಣು ಮಹೇಶ್ವರರ ಸಂಯೋಗದ ಪಟ್ಟಣ ಕೆಳಗಿನಿಂದ ಮೇಲಕ್ಕೆ 4
18. ಹತೋಟಿಗೆ ತರುವ ಕಡಿವಾಣ 4

ಎಡದಿಂದ ಬಲಕ್ಕೆ

1. ಗಂಡ ಹೆಂಡಿರಿಗೆ ಕಾನೂನಿನನ್ವಯ ಸಿಗುವ ಬಿಡುಗಡೆ 4
3. ಕುಶಲ ಕೆಲಸಗಳಲ್ಲಿ ನಿಸ್ಸೀಮ 4
5. ಮನ್ನಿಸುವ ಗುಣವನ್ನು ಗರ್ಭದಲ್ಲಿ ಹೊತ್ತ ಧಾರಿಣಿ 5
6. ಎಲ್ಲದಕ್ಕೂ ಬೇಕೊಂದು ಕಾರಣ 2
8. ದಯೆ ವಾತ್ಸಲ್ಯ ತುಂಬಿದ ತಾಯಿ 5
11. ಇವರೇ ಮಂದಿ 2
12. ಜಯ ಸಾಧನೆಗೆ ನಿಜವೊಂದೇ! 4
13. ಬರೀ ನೋಟುಗಳನ್ನು ಸೇರಿಸಿಟ್ಟುಕೊಂಡ ಪ್ರೇಕ್ಷಕ 4
14. ನಮ್ಮ ಹಿಡಿತಕ್ಕೆ ಸಿಗದ ಸಮಯ 2
15. ಹದಿನಾರು ಸಾವಿರನಾರಿಯರನ್ನು ಸೆರೆಯಲ್ಲಿಟ್ಟ ದಾನವ 5
17. ಪ್ರತ್ಯೇಕವಾಗಿ ಎರೆಯುವ ಹಾಲು 2
19. ಅಲಂಕಾರದ ಶೃಂಗಾರ ಬೆಡಗಿ ಐಶ್ವರ್ಯವಂತೆ 5
20. ನೀರಡಿಕೆಯಂತೆ ದುಡ್ಡಿನ ಬಾಯಾರಿಕೆ 4
21. ಸುದ್ದಿಗೆ ಗ್ರಾಸವಾಗುವ ರಾದ್ಧಾಂತ 4

ಪದಬಂಧ ಉತ್ತರ -2845

ಮೇಲಿಂದ ಕೆಳಕ್ಕೆ

1. ಜಹಾಜು 2.ಮರಳು 3.ನನಗೆ 4.ತರಂಗ 7.ಉರುಕ 9.ಸುರಂಗ 10.ಸಹಸಾ 11.ಶಮನ 12.ರಜನಿ 13.ನಲುಗು 14.ಜದ್ಮಪ 16.ಗಾಯನ 18.ರೂಪಕ 20.ಮಾನಸ 21.ನಮನ 22.ಕತಕ 23.ಲಕ್ಷ್ಮೀಶ

ಎಡದಿಂದ ಬಲಕ್ಕೆ

1. ಜಯರಾಮ 3.ನವನೀತ 5.ರಕ್ತಹೀನ 6.ಜುಳುಜುಳು 8.ಗೆಣಸುಗಡ್ಡೆ 10.ಸಕಲೇಶಪುರ 13.ನಗರಾಜ 15.ಸಾಮಗಾನ 17.ನಿಜಗುಣರೂಪ 19.ಸಮಾನಜನ 22.ಕಲಕಲ 24.ಮರುಮತ 25.ಸಮಾಧಾನ 26.ಕಮಲೇಶ


ಎಲ್. ಹನುಮಂತಯ್ಯ

ಕನ್ನಡ ಸಾಹಿತ್ಯ, ಚಳವಳಿ, ರಾಜಕಾರಣದ ಬಹು ಆಯಾಮಗಳ ಅವಲೋಕಿಸುತ್ತ, ವಿಸ್ತರಿಸುತ್ತ ಪ್ರಧಾನವಾಗಿ ದಲಿತ ಸಾಹಿತ್ಯದ ಮಿತಿಗಳನ್ನು ಭಂಜಿಸಿದ ಕವಿ ಎಲ್.ಹನುಮಂತಯ್ಯ, ದಲಿತ ಸಾಹಿತ್ಯ ಮೀಮಾಂಸೆಗೆ ಹೊಸ ಚೈತನ್ಯವಿತ್ತವರು. ಲೋಕಾಂತದ ಕಾವ್ಯವನ್ನು ಏಕಾಂತದಲ್ಲಿ ಧ್ಯಾನಿಸಿದ ಇವರು, ದಲಿತ ಸಾಹಿತ್ಯದ ಮೂರನೇ ಮಾದರಿಯ ನಿರ್ಮಾತೃ. ಈ ಜನಕವಿಗೆ 65 ವಸಂತಗಳು ತುಂಬುತ್ತಿದ್ದು ಬೆಂಗಳೂರಿನಲ್ಲಿ ಜೂನ್ 16 ರ ಭಾನುವಾರ 'ಎಲ್. ಹನುಮಂತಯ್ಯ ಬದುಕು ಬರಹ–ರಾಷ್ಟ್ರೀಯ ವಿಚಾರ ಸಂಕಿರಣ' ನಡೆಯುತ್ತಿದೆ. ಈ ಸಂದರ್ಭದಲ್ಲಿ ಅವರೊಂದಿಗಿನ ಮಾತುಕತೆ.

'ಅಕ್ಷರವೇ ಬಿಡುಗಡೆಯ ಮಂತ್ರ'

ಸಂದರ್ಶನ: ಸುಬ್ಬು ಹೊಲೆಯಾರ್

• ಸಾಮಾನ್ಯ ದಲಿತ ಕುಟುಂಬದಲ್ಲಿ ಹುಟ್ಟಿದ ನೀವು, ಮೇಲ್ಮನೆ ಪ್ಯಾನಲ್ ಉಪಸಭಾಪತಿ ಸ್ಥಾನದವರೆಗೆ ಬೆಳೆದು ಬಂದ ಬಗೆ....

ದಲಿತರಾಗಲಿ, ದಲಿತೇತರರಾಗಲಿ ಜೀವನದಲ್ಲಿ ಏನನ್ನಾದರೂ ಸಾಧಿಸುವಾಗ ಅವರ ಪ್ರಯತ್ನವಿಲ್ಲದೆ, ಶ್ರಮವಿಲ್ಲದೆ ಆಕಸ್ಮಿಕವಾಗಿ ಘಟಿಸುತ್ತದೆ ಎಂಬುದು ಸುಳ್ಳು. ಈ ಮಾತನ್ನು ಪೂರ್ಣವಿಶ್ವಾಸದಿಂದಲೇ ಹೇಳುತ್ತಿದ್ದೇನೆ. ಆರಂಭದಿಂದ ಈ ಹೊತ್ತಿನವರೆಗೂ ಯಾವ ದಾರಿಯಲ್ಲಿ ನಮ್ಮ ಚಿಂತನೆಗಳು ಇತ್ತೋ ಬಹುಶಃ ಅವು ನಮ್ಮನ್ನು ಈವರೆಗೂ ಕರೆದು ತಂದಿವೆ. ಸಮಾಜದ ಬಗೆಗಿನ ನಮ್ಮ ಚಿಂತನೆ ಮತ್ತು ಸಮಾಜದ ಒಳಿತಿನ ಪರವಾದ ನಿಲುವುಗಳಿಂದ ಈ ಹಂತ ಮುಟ್ಟಲಿಕ್ಕೆ ಸಾಧ್ಯವಾಗಿದೆ. 70-80ರ ದಶಕದಲ್ಲಿ ಸಮಾಜದಲ್ಲಿದ್ದ ಬಡತನ, ಅಸ್ಪೃಶ್ಯತೆ, ಮಹಿಳಾ ದೌರ್ಜನ್ಯಗಳು ನಮ್ಮನ್ನು ಮಾನಸಿಕವಾಗಿ ತುಂಬಾ ಘಾಸಿಗೊಳಿಸಿದವು. ಇದರ ವಿಮೋಚನೆಯ ದಾರಿಯನ್ನು ಅಂಬೇಡ್ಕರ್, ಲೋಹಿಯಾ, ಬಸವಣ್ಣ, ಮಾರ್ಕ್ಸ್ ಅವರ ಚಿಂತನೆಗಳು ತೋರಿದವು. ಅವುಗಳ ವಿವೇಕದಿಂದ ಸಾಮಾಜಿಕ ಅನಿಷ್ಟಗಳ ವಿರುದ್ಧ ಪ್ರತಿಭಟಿಸುವುದೇ ನಮ್ಮ ಜೀವನದ ಗುರಿಯಾಯಿತು. ಯಥಾಸ್ಥಿತಿ ವಾದವನ್ನು ಮೀರಿದ ಇಂತಹ ಭಿನ್ನ ಆಲೋಚನೆಗಳ ಫಲವಾಗಿ ವಿಧಾನ ಪರಿಷತ್ತಿಗೆ, ರಾಜ್ಯಸಭೆಗೆ ಅವಕಾಶ ದೊರಕಿತು.

• ಸಮಾಜದಲ್ಲಿ ಅಸ್ಪೃಶ್ಯತೆ ಇಲ್ಲದ ಊರು, ಮಹಿಳೆಯರ ಮೇಲೆ ದೌರ್ಜನ್ಯ ನಡೆಯದ ದಿನ, ಕನಸಾಗೇ ಉಳಿಯುತ್ತಿದೆಯಲ್ಲ..

ನಮ್ಮ ದೇಶಕ್ಕೆ ಬಹುದೊಡ್ಡ ಪರಂಪರೆ ಇದೆ. ಅದರ ಮುಂದೆ 75 ವರ್ಷ ಬಹಳ ಕಡಿಮೆ ಅವಧಿ. 2 ಸಾವಿರ ವರ್ಷದ ಪರಂಪರೆಯನ್ನ 75 ವರ್ಷಗಳಲ್ಲಿ ಬದಲಾವಣೆ ಮಾಡುತ್ತೀವೆಂಬುದು ಬರಿಯ ಆಶಾವಾದ. ಆದರೆ ಈ 75 ವರ್ಷಗಳಲ್ಲಿ ಚಾಲ್ತಿಗೆ ಬಂದ ತಿಳಿವಳಿಕೆ ಏನೆಂದರೆ ; ದಲಿತರ ಮೇಲಿನ, ಮಹಿಳೆಯರ ಮೇಲಿನ ದೌರ್ಜನ್ಯಗಳು ಅಪರಾಧ, ಕಾನೂನಿನ ಪ್ರಕಾರ ಶಿಕ್ಷಾರ್ಹ ಎಂಬ ಪ್ರಜ್ಞೆ ಬಹುಸಂಖ್ಯಾತರಲ್ಲಿ ಮೂಡಿದೆ. ಆದರೆ ಈ ಪರಂಪರೆಯ ಯಜಮಾನಿಕೆ ಇದೆಯಲ್ಲ, ಅವುಗಳ ಪ್ರಾಬಲ್ಯದಿಂದ ದೌರ್ಜನ್ಯವನ್ನು ಸಂಪೂರ್ಣ ನಿಲ್ಲಿಸೋಕೆ ಸಾಧ್ಯವಾಗುತ್ತಿಲ್ಲ. ಅವಿನ್ನೂ ಪ್ರಬಲವಾಗಿ ಕೆಲಸ ಮಾಡುತ್ತಿವೆ. ಯಾಕೆಂದರೆ; ಅವರ ಕೈಯಲ್ಲಿ ಅಧಿಕಾರವೂ ಇದೆ, 75 ವರ್ಷಗಳ ಸ್ವಾತಂತ್ರ್ಯವೂ ಇದೆ. ದೌರ್ಜನ್ಯಕ್ಕೆ ಒಳಗಾಗುತ್ತಿರುವವರ ಕೈಯಲ್ಲಿ ಅಧಿಕಾರವೂ ಇಲ್ಲ, ಅಧಿಕಾರದತ್ತ ಹೆಜ್ಜೆ ಹಾಕುವ ಇಚ್ಛಾಶಕ್ತಿಯೂ ಇಲ್ಲ. ಇನ್ನೂ ಈ ಫ್ಯೂಡಲ್ ವ್ಯವಸ್ಥೆಗೆ ದೌರ್ಜನ್ಯವು ಮನುಷ್ಯ ವಿರೋಧಿಯಾದದ್ದೆಂದೂ ಅನಿಸುತ್ತಿಲ್ಲ. ಅದಿನ್ನೂ ದೌರ್ಜನ್ಯವನ್ನು ಎಸಗಿ ಅಸ್ತಿತ್ವವನ್ನು ಕಂಡುಕೊಳ್ಳಬಲ್ಲೆ ಎಂಬ ವಿಕೃತ ಮನಸ್ಥಿತಿಯಲ್ಲಿದೆ. ಇಂತಹ ದೌರ್ಜನ್ಯಗಳಿಂದ ಮುಕ್ತರಾಗಲಿಕ್ಕಿರುವ ಏಕೈಕ ದಾರಿಯೇ, ದಲಿತರ ಅಧಿಕಾರ ಕೇಂದ್ರಿತ ರಾಜಕಾರಣ. ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಕೇಸು ದಾಖಲು ಮಾಡಿದವರನ್ನು ಸುಟ್ಟು ಹಾಕುತ್ತಿರುವ ಪ್ರಕರಣಗಳು ನಮ್ಮ ಕಣ್ಮುಂದೆ ನಡೆಯುತ್ತಲೇ ಇವೆ. ಇಂತವರಿಗೆ ರಕ್ಷಣೆ ಸಿಗುವುದು ಹೇಗೆ? ನಾವು ಅಧಿಕಾರ ಪಡೆಯುವಲ್ಲಿ ಯಶಸ್ವಾದರೆ ಮಾತ್ರ ಇಂತಹ ದೌರ್ಜನ್ಯಗಳಿಗೆ ಕಡಿವಾಣ ಹಾಕಲಿಕ್ಕೆ ಸಾಧ್ಯ.

• 70 - 80ರ ದಶಕದಲ್ಲಿ 'ಬೂಸಾ ಸಾಹಿತ್ಯ' ಪ್ರಕರಣದಿಂದ ದಲಿತ ಚಳವಳಿ, ಸಾಹಿತ್ಯ ಹುಟ್ಟಿ, ಹೊಸ ಸಂಚಲನಕ್ಕೆ ನಾಂದಿ ಹಾಡಿತು. ಈ 50 ವರ್ಷಗಳ ನಂತರ ಒಂದು ಬಗೆಯ ಸ್ತಬ್ಧತೆಯನ್ನು ಕಾಣುತ್ತಿದ್ದೀವಾ?

ಬೂಸಾ ಸಾಹಿತ್ಯ ಪ್ರಕರಣಕ್ಕೆ ಮತ್ತು ದಲಿತ ಚಳವಳಿಗೆ 50 ವರ್ಷ ಆಗಿದೆ. ಆದರೆ ನಮ್ಮ ಅಸ್ಪೃಶ್ಯತೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ದಲಿತ ಜನಾಂಗ ಎಚ್ಚರಗೊಂಡದ್ದು ಕಳೆದ 50 ವರ್ಷಗಳಲ್ಲಿ. ಎಚ್ಚರಕ್ಕೆ ಮುಖ್ಯ ಕಾರಣ, ನಮ್ಮಗಳಿಗೆ ಬಂದ ಅಕ್ಷರ ಜ್ಞಾನ, ಪ್ರಜಾಪ್ರಭುತ್ವದ ಕಲ್ಪನೆ - ಇದಕ್ಕೆ ಮೂಲ ಕಾರಣ ಅಂಬೇಡ್ಕರ್.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಶಿಕ್ಷಣ ಸಾರ್ವತ್ರೀಕರಣ ಆದಮೇಲೆ ದಲಿತ ಜನಾಂಗದ ಯುವಕರಲ್ಲಿ ಹೊಸ ಚಿಂತನೆ ಪ್ರಾಪ್ತಿಯಾಯಿತು. ಆ ಹೊಸ ಚಿಂತನೆಯ ಮೂಲಕ, ಈ ಸಮಾಜ ನನ್ನ ಮೇಲೆ ಏಕಿಷ್ಟು ದೌರ್ಜನ್ಯ ನಡೆಸುತ್ತಿದೆ? ನಾನೇನು ಅಪರಾಧ ಮಾಡಿದ್ದೇನೆ? ಯಾಕೆ ನನಗೆ ಅಸ್ಪೃಶ್ಯತೆಯ ಬಹಿಷ್ಕಾರ? ಅಂಥ ಅಕ್ಷರಸ್ಥ ಸಮುದಾಯ ಆಲೋಚಿಸಲಿಕ್ಕೆ ಆರಂಭಿಸಿತು. ಇದರ ಫಲವಾಗಿ ಕರ್ನಾಟಕದಲ್ಲಿ ಸಂಘಟಿತ ದಲಿತ ಚಳವಳಿ ಆರಂಭವಾಯಿತು. ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಹೇಳಿಕೆ ಆ ಕಾಲಕ್ಕೆ ಒಂದು ನೆಪವಷ್ಟೇ. ಆ ಹೊತ್ತಿಗೆ ತನಗೆ ಅನ್ನಿಸಿದ್ದನ್ನು ಧೈರ್ಯವಾಗಿ ಹೇಳುತ್ತಿದ್ದ ರಾಜಕಾರಣಿ ಇವರಾದ್ದರಿಂದ, ಅವರ ಮೇಲೆ ಸಮಾಜದ ಗಮನ ಹೆಚ್ಚಾಯಿತು. ಅಧಿಕಾರ ಕಳೆದುಕೊಂಡರು. ಇದೆಲ್ಲ ಒಂದು ಕಡೆಯಾದರೆ, ಮತ್ತೊಂದು ಕಡೆ; ಅವರ ಹೇಳಿಕೆಯಿಂದ ಸೂಕ್ಷ್ಮಗೊಂಡ ಸಮಾಜ ಎರಡು ನೆಲೆಯಲ್ಲಿ ಚಿಂತಿಸಲಿಕ್ಕೆ ಆರಂಭಿಸಿತು. ಒಂದು; ದಲಿತ ಸಮಾಜ ಬಸವಲಿಂಗಪ್ಪನವರ ಪರವಾಗಿ ನಿಂತದ್ದು ಮತ್ತು ಆಲೋಚಿಸಿದ್ದು. ಎರಡು; ದಲಿತೇತರ ಸಮಾಜ ಬಸವಲಿಂಗಪ್ಪನವರ ವಿರುದ್ಧವಾಗಿ ನಿಂತದ್ದು ಮತ್ತು ಆಲೋಚಿಸಿದ್ದು.

• 'ಅಕ್ಷಾರ ಅಕ್ಷಾರವೇ' ಎನ್ನುವುದು ಕನ್ನಡ ಕಾವ್ಯದ ಅರಿವನ್ನು ಮತ್ತು ದಲಿತರ ಬದುಕಿನ ವಿಮೋಚನೆಯನ್ನು ಒಟ್ಟೊಟ್ಟಾಗಿ ಹೇಳುವಾಗ, ಅದು ನಿಮಗೆಷ್ಟು ಯಶಸ್ವಿಯಾಗಿ ಕಂಡಿದೆ?

ಅಕ್ಷರ ದಲಿತ ಸಮುದಾಯದ ನಿಜವಾದ ದೇವರು. ನಾನು ಅದನ್ನ 'ಅಕ್ಷರ ದೇವ' ಅಂತಲೇ ಕರೆಯುತ್ತೇನೆ. ದಲಿತರನ್ನ ಸಾಂಸ್ಕೃತಿಕ ದಾಸ್ಯದಿಂದ ಬಿಡುಗಡೆಗೊಳಿಸುವ ಶಕ್ತಿ ಅದಕ್ಕಿದೆ. ಹಾಗಾಗಿ ನಾನು ಅದನ್ನ ದಲಿತರ ದೈವ ಅಂತ ಕರೆದೆ. ದಲಿತ ಬಂಡಾಯ ಚಳವಳಿಯ ಆರಂಭದಿಂದಲೂ ಇದರ ಮಹತ್ವವನ್ನು ಹೇಳುತ್ತಲೇ ಬಂದಿದ್ದೀನಿ. ನಾನು ಇಂದಿಗೂ ಪೂಜಿಸುತ್ತಿರುವ ಏಕೈಕ ದೈವವಿದು. ಈ ದೈವಕ್ಕೆ ಕತ್ತಲನ್ನು ಓಡಿಸಿ ಬೆಳದಿಂಗಳನು ಎರೆವ ಶಕ್ತಿ ಇದೆ. ಹಾಗಾಗಿ ಅಕ್ಷರ ಎಂಬ ತಿಳವಳಿಕೆಯಿಂದ ಬಿಡುಗಡೆ ಸಾಧ್ಯವೇ ಹೊರತು, ಮತ್ತಾವುದರಿಂದಲೂ ಅಲ್ಲ. ತಿಳವಳಿಕೆ ಬರದೇ ಹೋದರೆ ಕಾನೂನು ಕೂಡ ನಮ್ಮನ್ನು ಬಿಡುಗಡೆ ಮಾಡಲಿಕ್ಕೆ ಸಾಧ್ಯವಿಲ್ಲ. ಅಂಬೇಡ್ಕರ್ ಹೇಳಿದ ಮಾತು ಎಷ್ಟು ಸತ್ಯವೆಂದರೆ ಗುಲಾಮನನ್ನು ಗುಲಾಮ ಎಂದು ಕರಿ, ಅವನಲ್ಲಿ ಎಚ್ಚರ ಉಂಟಾಗುತ್ತದೆ' ಅಂದರು. ಅವರ ತಿಳವಳಿಕೆ ಈಗಲೂ ಎಷ್ಟು ಪ್ರಸ್ತುತ! ಇನ್ನೂ ದಲಿತರ ವಿಮೋಚನೆ ಅನ್ನೋದು ನಿರಂತರವಾಗಿ ಭಾರತದಂತಹ ದೇಶಗಳಲ್ಲಿ ನಡೆಯಬೇಕಾದ ಪ್ರಕ್ರಿಯೆ. ಅದಕ್ಕೆ ಅಂಬೇಡ್ಕರ್ ಅಂತಹ, ಗಾಂಧಿ ಅಂತಹ, ವಿವೇಕಾನಂದರಂತಹ ಅನೇಕ ದಾರ್ಶನಿಕರು ಬಂದರೂ ಅದರ ಕವಚ ಚೂರೂ ಮುಕ್ಕಾಗಿಲ್ಲ. ಈ ಕವಚಗಳನ್ನು ಕಳಚುವ ಶಕ್ತಿ ಅಕ್ಷರಕ್ಕಿದೆ. ಆದ್ದರಿಂದ ಇದು ಕನ್ನಡದ ವಿಮೋಚನೆಯೂ ಹೌದು! ಭಾರತದ ವಿಮೋಚನೆಯೂ ಹೌದು! ದಲಿತ ಶಕ್ತಿಯ ವಿಮೋಚನೆಯೂ ಹೌದು! ಎಲ್ಲ ಬಡವರ ವಿಮೋಚನೆಯೂ ಹೌದು! ಮತ್ತೇ ಅಕ್ಷರದ ತಿಳಿವಳಿಕೆ ಅನ್ನೋದು ಕೇವಲ ಓದಲ್ಲ, ಬರಿಯ ಪದವಿಗಳಲ್ಲ, ಅದು ಬಿಡುಗಡೆಯ ಮಂತ್ರ. ವಿಮೋಚನೆ ಅನ್ನೋದು ಸರ್ವರ ವಿಮೋಚನೆ. ಸರ್ವರ ವಿಮೋಚನೆಯಲ್ಲಿ ದೇಶದ, ಅಂತಿಮವಾಗಿ ವಿಶ್ವದ ವಿಮೋಚನೆ ಇದೆ.



ಮರ ಬೆಳೆಸುವ ಸರಳ ತಂತ್ರಗಳು

12ನೇ ಪುಟದಿಂದ...


ಸುಟ್ಟ ಮರಗಳ ಬುಡ, ಮುಳ್ಳಿನ ಕಂಟಿ, ಕುಮಸಲು ಬಳ್ಳಿಯ ಹಿಂಡು, ಮಣ್ಣಿನ ಏರಿಗಳ ಮೇಲೆ ಬೀಜ ನಾಟಿ ಮಾಡುವಂತೆ ವನ ಮಹೋತ್ಸವದ ಪ್ರಕಟಣೆಯಿದೆ. ಕೆಲಸಕ್ಕೆ ಬರದಿದ್ದವರಿಗೆ ದಂಡ ಹಾಕುವ ಕ್ರಮ ಕೂಡಾ ಇತ್ತು!

ಮರ ಬೆಳೆಸಲು ಗುಂಡಿ ತೋಡಿ ಸಸಿ ನೆಡುವುದೊಂದೇ ಏಕೈಕ ದಾರಿಯಲ್ಲ. ಮರದ ಟೊಂಗೆ, ಟಿಸಿಲು ಕತ್ತರಿಸಿ ನೆಟ್ಟರೂ ಚಿಗುರಿ ಬೆಳೆಯುತ್ತವೆ. ಕೃಷಿ ಭೂಮಿಗೆ ಬೇಲಿ, ಅಡಿಕೆ ತೋಟಕ್ಕೆ ನೆರಳು, ನದಿ ಕೊರೆತ ತಡೆಯುವುದಕ್ಕೆ ಸಸಿ ಬೆಳೆಸುವ ಸರಳ ಮಾರ್ಗ ಚಿಗುರು ಗೂಟ ನಾಟಿ ಮಾಡುವುದು. ಮಹಿಳೆಯರಂತೂ ಹಿತ್ತಲಿನ ಮಲ್ಲಿಗೆ, ಕನಕಾಂಬರ, ದಾಸವಾಳ, ನಂದಿಬಟ್ಟಲು, ಗಜಲಿಂಬೆ, ಅಮಟೆ, ನುಗ್ಗೆ ಮುಂತಾದವುಗಳನ್ನೆಲ್ಲ ಟಿಸಿಲು, ಟೊಂಗೆಗಳನ್ನು ತಂದು ಬೆಳೆಸುವುದು. ಹಾಲವಾಣ, ಲಕ್ಕಿ, ಗ್ಲಿರಿಸಿಡಿಯಾ, ಬೇಲಿ ಸಂಪಿಗೆ(ಬಕುಲ), ಆಡುಮುಟ್ಟದ ಗಿಡ, ದುರಂತ, ನಡತೆ, ಬಿದಿರು, ಮುಂಡಿಗೆ, ನರಿಕಬ್ಬು,ಆಲ, ಅರಳಿ, ಬಸರಿ–ಹೀಗೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಗೂಟದಿಂದ ಬೆಳೆಸಬಹುದಾದ ನೂರಾರು ಜಾತಿಗಳಿವೆ.

ಸಸ್ಯ ಜಾತಿಯ ಗುಣ ಆಧರಿಸಿ ಎಷ್ಟು ದಪ್ಪದ ಗೂಟ ನೆಡಬೇಕೆಂಬ ನಿರ್ಧಾರ ಮುಖ್ಯ ಉದಾಹರಣೆಗೆ ಆಲ, ಅಶ್ವತ್ಥ, ಬಿಳಿ ಬಸರಿ ಮುಂತಾದ ಫೈಕಸ್ ಜಾತಿಯನ್ನು ಈ ಕ್ರಮದಲ್ಲಿ ಬೆಳೆಸುವಾಗ ತೊಗಟೆಗೆ ಗಾಯವಾಗದಂತೆ ಕಡಿದು ತರಬೇಕು. ನಮ್ಮ ರಟ್ಟೆ ಗಾತ್ರದ ಮೂರು ನಾಲ್ಕು ಅಡಿ ಉದ್ದದ ಗೂಟವನ್ನು ಮಣ್ಣಿಗೆ ಮಳೆಗಾಲಕ್ಕಿಂತ 15-20 ದಿನ ಮುಂಚೆ ನೆಡಬೇಕು. ಬಿಸಿಲಿಗೆ ಗೂಟ ಬಾಡಬೇಕು, ಆದರೆ ಒಣಗಬಾರದೆಂಬುದು ಸೂಕ್ಷ್ಮ ತಂತ್ರ. ಹಾರೆಯಿಂದ ಎರಡಡಿ ಆಳ ರಂಧ್ರ ಮಾಡಿ ಅದರಲ್ಲಿ ಗೂಟ ನಿಲ್ಲಿಸಬೇಕು. ಅದು ಅಲುಗಾಡದಷ್ಟು ಭೂಮಿಯಲ್ಲಿ ಭದ್ರವಾದರೆ ಸಾಕು ಮಳೆಗೆ ಬೇರು ಕೊಟ್ಟು ಚಿಗುರುತ್ತದೆ. ಮಳೆ ಮುಗಿಯುತ್ತಲೇ ತರಗೆಲೆಗಳ ರಾಶಿ ಬುಡಕ್ಕೆ ಹಾಕಿದರೆ ಮಣ್ಣಿನ ತೇವ ಉಳಿದು ಗಿಡ ಬೆಳೆಯಲು ಅನುಕೂಲವಾಗುತ್ತದೆ. ರಾಜ್ಯದ ಬಹುತೇಕ ಹೆದ್ದಾರಿಯ ಆಲ, ಅರಳಿಯ ಸಾಲುಮರಗಳೆಲ್ಲ ಗೂಟ ನೆಟ್ಟು ಬೆಳೆದವು.

ಬರದ ಸೀಮೆಯ ಚಿತ್ರದುರ್ಗ ರಾಂಪುರ ಬಳ್ಳಾರಿಯ ಹೆದ್ದಾರಿ, ಜಮಖಂಡಿಯ ಮದರಕಂಡಿ ಸೇರಿದಂತೆ ಎಲ್ಲೆಡೆ ನೆರಳು ಕೊಟ್ಟ ಆಲದಮರಗಳು ಗೂಟದಿಂದ ಮರವಾಗಿದ್ದು. ರಸ್ತೆ ವಿಸ್ತರಣೆ ಕಾರಣಕ್ಕೆ ಹಲವನ್ನು ಈಗ ಕಳಕೊಂಡಿದ್ದೇವೆ. ಮಂಡ್ಯ, ಮದ್ದೂರು, ಕಿಕ್ಕೇರಿ ಪ್ರದೇಶಗಳ ಕೃಷಿ ಭೂಮಿಯಲ್ಲಿ ಬೆಳೆದ ಬಿಳಿ ಬಸುರಿಮರಗಳು ಗೂಟ ಮೂಲ. ಕೆ.ಆರ್.ಪೇಟೆಯ ನೀರವಂಜಿ (ಪೌಸೆ) ಮರಗಳು ಹೀಗೆಯೇ ಗೆದ್ದಿದ್ದು. ಯಾವ ಜಾತಿಯ ಸಸಿ ಎಲ್ಲಿ ನೆಡಬೇಕು? ಹೇಗೆ ನೆಡಬೇಕು? ಯಾವಾಗ ನೆಡಬೇಕು? ಅನುಭವದಲ್ಲಿ ಅರಿಯುತ್ತ ಹೋದರೆ ಗಿಡ ಗೆಲುವು ಸಾಧ್ಯವಿದೆ. ಸಾಲುಮರದ ತಿಮ್ಮಕ್ಕ ದಂಪತಿಯಾಗಲಿ, ತಿಪಟೂರಿನ ಗ್ಯಾರಘಟ್ಟದ ಬೀರಜ್ಜ, ಪಾಂಡವಪುರ ತಾಲ್ಲೂಕಿನ ಸುಂಕಾತೊಣ್ಣೂರಿನ ಗೌಡೇಗೌಡ ಅವರು ಆಲದಮರಗಳನ್ನು ಬೆಳೆಸಿದ್ದು ಗೂಟ ಊರುವ ಸರಳ ತಂತ್ರದಲ್ಲಿಯೇ ಅಲ್ಲವೇ? ರಾಜ್ಯದ ಗಡಿನಾಡು ಕೇರಳದ ಮಿಯಪದವು ಕೃಷಿಕ ಚಂದ್ರಶೇಖರ ಚೌಟ ತಮಗೆ 60 ವರ್ಷ ತುಂಬಿದಾಗ ಊರ ರಸ್ತೆ ಅಂಚಿನಲ್ಲಿ 60 ಆಲದ ಗೂಟ ನೆಟ್ಟಿದ್ದರು, ಅವು ಮರವಾಗುತ್ತಿವೆ. ಸಸಿ ನೆಡುವುದು ಅರಣ್ಯ ಇಲಾಖೆ ಕೆಲಸ ಮಾತ್ರವಲ್ಲ, ಪ್ರತಿಯೊಬ್ಬರೂ ಈ ಕಾರ್ಯದಲ್ಲಿ ಸಾಧ್ಯವಾದ ರೀತಿಯಲ್ಲಿ ಭಾಗವಹಿಸುವುದು ಮುಖ್ಯ. ಸಸಿ ನೆಡುತ್ತ, ಗೂಟ ಊರುತ್ತ ನಾವೂ ಹೋಗಬಹುದು. ಮಣ್ಣಿನ ಅಗಳಗಳ ಮೇಲೆ ನಾವು ತಿಂದ ಹಣ್ಣಿನ ಬೀಜಗಳನ್ನು ಊರಬಹುದು. ಕಣ್ಣುಮುಚ್ಚಿ ಹಸಿರು ಹರಿಯುತ್ತ ಇಷ್ಟು ಕಾಲ ಭೂಮಿಗೆ ಭಾರವಾಗಿ ಬದುಕಿದ ತಪ್ಪಿಗೆ ಕಾಡಿನ ಭೂಮಿಯಲ್ಲಿ ಆಲ, ಅರಳಿ, ಬಿಳಿ ಬಸರಿಯ ನಿಸರ್ಗದ ಬುನಾದಿ ವೃಕ್ಷದ ಗೂಟ ನೆಡುತ್ತ ಪಕ್ಷಿ ಸಂಕುಲಕ್ಕೆ ನೂರ್ಕಾಲ ನೆರವಾಗಿ ಹಸಿರೀಕರಣಕ್ಕೆ ಊರುಗೋಲಾಗಬಹುದು.





ನೀರ ಬಿಟ್ಟು ನೆಲದ ಮೇಲೆ ವೇಣುಗೋಪಾಲ!

12ನೇ ಪುಟದಿಂದ...

ದೇಗುಲದ ಪುನರ್ ನಿರ್ಮಾಣದಲ್ಲಿ 70ರಷ್ಟು ಮೂಲ ದೇವಾಲಯದ ಶಿಲೆಗಳನ್ನು ಬಳಸಿದ್ದು, ಗರುಡಗಂಬ ಸೇರಿದಂತೆ ಶೇಕಡ 30ರಷ್ಟು ಹೊಸ ಕಲ್ಲುಗಳನ್ನು ಬಳಸಲಾಗಿದೆ. ದೇವಾಯದ ಮುಂದೆ ಹಂಪಿಯ ಕಲ್ಲಿನ ರಥದ ಮಾದರಿ, ಮಂಟಪಗಳು ಮತ್ತು ತುಳಸಿ ಉದ್ಯಾನವನ ಗಮನ ಸೆಳೆಯುತ್ತವೆ.


ಆರೇಳು ಎಕರೆ ಪ್ರದೇಶದ ನಡುವೆ ವೇಣುಗೋಪಾಲಸ್ವಾಮಿ ದೇವಾಲಯ ಇದ್ದು, ವಾರದ ಎಲ್ಲ ದಿನವೂ ಬೆಳಿಗ್ಗೆ 9ರಿಂದ ಸಂಜೆ 6.30ರ ವರೆಗೆ ತೆರೆದಿರುತ್ತದೆ. ಶ್ರೀಹರಿ ಖೋಡೆ ಫೌಂಡೇಶನ್ ನಿಯೋಜಿಸಿರುವ ಅರ್ಚಕರು ದಿನದಲ್ಲಿ ಎರಡು ಬಾರಿ ವೇಣುಗೋಪಾಲಸ್ವಾಮಿ ಮತ್ತು ಪ್ರಾಕಾರದ ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ. ಇತರರಿಗೆ ಇಲ್ಲಿ ದರ್ಶನಕ್ಕೆ ಮಾತ್ರ ಅವಕಾಶ. ಯಾವುದೇ ಪ್ರವೇಶ ಶುಲ್ಕ ಮತ್ತು ವಾಹನ ಪಾರ್ಕಿಂಗ್ ಶುಲ್ಕವಿಲ್ಲ.

ಬೆಂಗಳೂರಿನಿಂದ ಬಂದಿದ್ದ ರಾಕೇಶ್ ಮತ್ತು ಸುಪ್ರಿಯಾ ದಂಪತಿಯನ್ನು ಮಾತಿಗೆಳೆದಾಗ... 'ವೇಣುಗೋಪಾಲಸ್ವಾಮಿ ದೇವಾಲಯ ಇರುವ ಜಾಗ ವಿಹಾರ ತಾಣ ಮಾತ್ರವಲ್ಲದೆ ಶ್ರದ್ಧಾ ಕೇಂದ್ರವೂ ಹೌದು. ಎರಡು ಮೂರು ತಾಸು ಇಲ್ಲಿದ್ದರೆ ಮೈ ಮನ ಹಗುರಾಗುತ್ತವೆ. ಆದರೆ ಇಲ್ಲಿಗೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆ ಕಲ್ಲು ಮಣ್ಣಿನಿಂದ ಕೂಡಿದೆ. ಮುಖ್ಯರಸ್ತೆಯಿಂದ ದೇವಾಲಯದ ವರೆಗೆ ಎರಡು ಕಿಲೊಮೀಟರ್ ಕ್ರಮಿಸುವಷ್ಟರಲ್ಲಿ 10 ಕಿಲೊಮೀಟರ್ ಕ್ರಮಿಸಿದ ಅನುಭವಾಯಿತು. ಈ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಿದೆ' ಎಂದರು.

ಮಾರ್ಗ: ಶ್ರೀರಂಗಪಟ್ಟಣ–ಬೀದರ್ ಹೆದ್ದಾರಿಯಲ್ಲಿ ಎಲೆಕೆರೆ ಹ್ಯಾಂಡ್‌ಪೋಸ್ಟ್ ಬಳಿ ಎಡಕ್ಕೆ ತಿರುವು ಪಡೆದು ಭೂ ವರಾಹನಾಥ ಕಲ್ಲಹಳ್ಳಿ ಮಾರ್ಗದಲ್ಲಿ ತೆರಳಿದರೆ ಹೊಸ ಕನ್ನಂಬಾಡಿ ಗ್ರಾಮದ ಸಿಗುತ್ತದೆ. ಅಲ್ಲಿಂದ ಎಡಕ್ಕೆ ಎರಡು ಕಿಲೊಮೀಟರ್ ಕ್ರಮಿಸಿದರೆ ವೇಣುಗೋಪಾಲಸ್ವಾಮಿ ದೇವಾಲಯ ಸಿಗುತ್ತದೆ. ಇದು ಬೆಂಗಳೂರಿನಿಂದ 147 ಕಿಲೊಮೀಟರ್, ಮೈಸೂರಿನಿಂದ 28 ಕಿಲೊಮೀಟರ್, ಮಂಡ್ಯದಿಂದ 46 ಕಿಲೊಮೀಟರ್ ದೂರದಲ್ಲಿದೆ. ಕೆಆರ್‌ಎಸ್ ಬೃಂದಾವನದಿಂದ 8 ಕಿಲೊಮೀಟರ್ ಅಂತರದಲ್ಲಿದೆ.

ಮೊದಲ ಓದು

ಪತ್ರಕರ್ತರೊಬ್ಬರ ನೆನಪಿನ ಬುತ್ತಿ...



...ಉಳಿದಾವ ನೆನಪು
ಲೇ: ಪದ್ಮರಾಜ ದಂಡಾವತಿ
ಪ್ರ: ಅಂಕಿತ ಪುಸ್ತಕ
ಸಂ: 9019190502
ಪು: 224 ₹250

ಪತ್ರಕರ್ತನ ವೃತ್ತಿಜೀವನದ ನೆನಪುಗಳು ಎಂಬ ಅಡಿಟಿಪ್ಪಣಿಯೊಂದಿಗೆ ಇರುವ ಈ ಪುಸ್ತಕ ಪತ್ರಿಕೋದ್ಯಮದ ಒಳಹೊರಗನ್ನು ಸರಳವಾಗಿ ಬಿಚ್ಚಿಡುತ್ತ ಹೋಗುತ್ತದೆ. 'ಪ್ರಜಾವಾಣಿ'ಯಂಥ ದೊಡ್ಡ ಪರಂಪರೆ ಇರುವ ಪತ್ರಿಕೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಸುದೀರ್ಘ ಕಾಲ ನಿರ್ವಹಿಸಿದ ಪದ್ಮರಾಜ ದಂಡಾವತಿ ಅವರು ವೃತ್ತಿ ಜೀವನ, ವೈಯಕ್ತಿಕ ಜೀವನ ಎರಡನ್ನೂ ನಿಭಾಯಿಸುವ ಪರಿಯನ್ನು ಸರಳವಾಗಿ ನಿರೂಪಿಸುತ್ತ ಬಂದಿದ್ದಾರೆ.

ಪ್ರಜಾವಾಣಿ ಕಚೇರಿಯಲ್ಲ, ಅದೊಂದು ಬಳಗ ಮತ್ತು ಪರಿವಾರ ಇದ್ದಂತೆ. ಪರಿವಾರದಲ್ಲಿ ಬರುವ ಎಲ್ಲ ಸಣ್ಣತನ, ದೊಡ್ಡತನ, ಧಾರಾಳಿಯಾಗುವುದು, ಔದಾರ್ಯ ಮರೆಯುವುದು, ಹೊಟ್ಟೆಕಿಚ್ಚು ಪಡುವುದು ಎಲ್ಲವೂ ಈ ವೃತ್ತಿ ಜೀವನದಲ್ಲಿ ಕಂಡು ಬರುವ ಗುಣಗಳೇ ಆಗಿವೆ. ಇವನ್ನು ಕೆಲವೊಂದು ಕಡೆ ಚೂಟಿದ್ದು, ಕೆಲವೊಂದು ಕಡೆ ಹೆಮ್ಮೆಯಿಂದ ಎತ್ತಿ ಹಿಡಿದಿದ್ದು, ಮತ್ತೆ ಕೆಲವೊಮ್ಮೆ ಜೀವನಕ್ಕೆ ಆಸರೆ ಆಗಿದ್ದೂ ಇವೆ. ಇವೆಲ್ಲವನ್ನೂ ಹೇಳುವಾಗ ಒಂದು ಎಚ್ಚರವನ್ನು ಲೇಖಕರು ಕಾಯ್ದು ಕೊಂಡಿದ್ದಾರೆ. ಕೆಟ್ಟದನ್ನು ಹೇಳುವಾಗ ಮರಳ ಮೇಲೆಯೂ, ಒಳಿತನ್ನು ಹೇಳುವಾಗ ಬಂಡೆಯ ಮೇಲೆಯೂ ಬರೆಯೇಬೇಕು. ಹಾಗೆಯೇ ಇಲ್ಲಿ ಕೆಡುಕು ತಂದವರ ಹೆಸರು ಬಹಿರಂಗವಾಗಿಲ್ಲ. ಒಳಿತನ್ನು ಮಾಡಿದವರ ಹೆಸರನ್ನು ಸಂಜೆಯ ತಂಪು ಹೊತ್ತಿನಲ್ಲಿ ನೆನೆಸಿದಂತೆ ನೆನಪಿಸಿಕೊಂಡಿದ್ದಾರೆ.

ಬೆಳಗಾವಿಯ ದಿನಗಳು, ಸುದ್ದಿ ಕಳಿಸುವಾಗ ಟೆಲಿಪ್ರಿಂಟರ್‌ನಿಂದ ಕಂಪ್ಯೂಟರ್ ಯುಗದವರೆಗೂ ಆದ ಬದಲಾವಣೆಗಳನ್ನೂ ದಾಖಲಿಸುತ್ತಲೇ, ಒತ್ತಡ ನಿರ್ವಹಣೆಯ ತಂತ್ರಗಳನ್ನೂ ಹೇಳುತ್ತ ಹೋಗುತ್ತಾರೆ. ಪತ್ರಿಕೋದ್ಯಮಕ್ಕೆ ಬರಬೇಕೆನ್ನುವವರ ತಯಾರಿ, ವೃತ್ತಿಕ್ಷೇತ್ರದಲ್ಲಿರುವವರು ಸಜ್ಜುಗೊಳ್ಳುವ ಮತ್ತು ಬದ್ಧತೆಯಿಂದ ದುಡಿಯುವ ಬಗೆ, ಓದುಗರ ನಾಡಿಮಿಡಿತ ಅರಿಯುವ ಬಗೆ ಹೇಗೆ, ಜನರ ಗುಣಸ್ವಭಾವಗಳನ್ನು ಸ್ವೀಕರಿಸಿ ಅವರನ್ನು ಬೆಳೆಸುವ, ತಿದ್ದುವ ಕೆಲವೊಮ್ಮೆ ಉದಾಸೀನವೇ ಮದ್ದು ಎಂಬಂತೆ ಮುನ್ನಡೆಯುವ ಬಗೆಯನ್ನು ಈ ಪುಸ್ತಕದ ಓದು ದಕ್ಕಿಸಿಕೊಡುತ್ತದೆ.

ಗೊತ್ತಿಲ್ಲದ ಹಕ್ಕಿಗಳ ಗೂಡಿನೆಡೆಗೆ ಪಯಣ



ಪಕ್ಷಿಗಳ ವಿಸ್ಮಯ ವಿಶ್ವ
ಲೇ: ಶ್ರೀಧರ ತುಮರಿ
ಪ್ರ: ನವಕರ್ನಾಟಕ
ಸಂ:08022161900
ಪು: 256 ₹790


ನಮಗೆ ಗೊತ್ತೇ ಇಲ್ಲದ ನೂರೆಂಟು ಪಕ್ಷಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಅನನ್ಯ ಕೃತಿ 'ಪಕ್ಷಿಗಳ ವಿಸ್ಮಯ ವಿಶ್ವ'. ಹವ್ಯಾಸಿ ಛಾಯಾಗ್ರಾಹಕ ಶ್ರೀಧರ ತುಮರಿ ಕೃತಿಯ ಲೇಖಕ. ಸುಂದರವಾದ ಚಿತ್ರಗಳೊಂದಿಗೆ 172 ವಿಭಿನ್ನ ಪಕ್ಷಿಗಳನ್ನು ಇಲ್ಲಿ ಅವರು ಪರಿಚಯಿಸಿದ್ದಾರೆ. ಕೃತಿಯಲ್ಲಿನ ಒಂದಷ್ಟು ಚಿತ್ರಗಳು ಕ್ಲೆಮೆಂಟ್ ಎಂ.ಫ್ರಾನ್ಸಿಸ್ ಅವರದ್ದು. ಗಮಟೇ ಹಕ್ಕಿಯ ಚಿತ್ರದೊಂದಿಗೆ ಪುಸ್ತಕ ಮುಖಪುಟವೇ ಆಕರ್ಷಣೀಯವಾಗಿದೆ.

'ಲೇಖಕ ತಮ್ಮ ಅನೇಕ ವರ್ಷಗಳ ಹವ್ಯಾಸವನ್ನು, ಅನುಭವವನ್ನು ಮತ್ತು ಪಕ್ಷಿಗಳ ಕುರಿತಾದ ಜ್ಞಾನ, ವಿಜ್ಞಾನಗಳನ್ನು ಈ ಪುಸ್ತಕದ ಮೂಲಕ ಸೊಗಸಾಗಿ ಹಂಚಿಕೊಂಡಿದ್ದಾರೆ. ಪಕ್ಷಿವೀಕ್ಷಕರು, ಪಕ್ಷಿಗಳ ಫೋಟೋಗ್ರಫಿ ಆಸಕ್ತರಿಗೆ ಆಕರ ಗ್ರಂಥವೆನಿಸುವುದರಲ್ಲಿ ಅನುಮಾನವಿಲ್ಲ' ಎಂದು ಡಾ.ಶ್ರೀಕಾಂತ್ ಅವರು ಮುನ್ನುಡಿಯಲ್ಲಿ ಬರೆದಿದ್ದಾರೆ.

ಕರ್ನಾಟಕದಲ್ಲಿ ಕಾಣಸಿಗುವ ಎಲ್ಲ ಪಕ್ಷಿಗಳನ್ನು ಆಯಾ ಪಕ್ಷಿಗಳ ಗುರುತಿಸುವಿಕೆ, ಸ್ವರೂಪ, ಜೀವನ ಶೈಲಿ, ಕೂಗು, ವಾಸಸ್ಥಳದ ಮಾಹಿತಿ, ಆಹಾರ ಕ್ರಮ, ಗೂಡು ಕಟ್ಟುವಿಕೆ ಮೊದಲಾದ ವಿವರಗಳೊಂದಿಗೆ ಪರಿಚಯಿಸುವ ಯತ್ನ ಮಾಡಿದ್ದಾರೆ. ತಲೆಯ ಮೇಲೆ ಗೆರೆ ಹೊಂದಿರುವ 'ಗೆರೆತಲೆ ಬಾತು', 'ಬೂದು ಜೋಳಿಗೆಕೊಕ್ಕು', ಮಲೆನಾಡಿನಲ್ಲಿ ದನ, ಎಮ್ಮೆಗಳ ಮೇಲೆ ಕೂರುವ 'ಜಾನುವಾರು ಬೆಳ್ಳಕ್ಕಿ'ಯಂತಹ ಸಾಮಾನ್ಯವಾಗಿ ತಿಳಿದಿರುವ ಪಕ್ಷಿಗಳ ಕುರಿತಾಗಿನ ಗೊತ್ತಿಲ್ಲದ ಒಂದಷ್ಟು ವಿವರಗಳು ಕೃತಿಯಲ್ಲಿದೆ.

'ಸಾಮಾನ್ಯ ಡೇಗೆ', 'ಎರೆಲಡ್ಡು', 'ಮೀನು ಗೂಬೆ', 'ಗಾಂಧೀ ಹಕ್ಕಿ', 'ಚಂದ್ರಮುಕುಟ', 'ತಂತಿಬಾಲದ ಕವಲುತೋಕೆ'ಯಂತಹ ಅಪರೂಪದ ಪಕ್ಷಿಗಳ ಪರಿಚಯವೂ ಕೃತಿಯಲ್ಲಿ ಕಾಣುತ್ತದೆ. ಈ ಪಕ್ಷಿಗಳು ಹೆಚ್ಚಾಗಿ ಎಲ್ಲಿ, ಯಾವಾಗ ಕಂಡುಬರುತ್ತವೆ ಎಂಬ ಮಾಹಿತಿಯೂ ಸಿಗುತ್ತದೆ. ಪ್ರತಿ ಪಕ್ಷಿಗಳ ಸುಂದರ ಚಿತ್ರಗಳು ಗಮನ ಸೆಳೆಯುತ್ತದೆ. ಪರಿಚಯದ ಭಾಷೆ ಸರಳವಾಗಿದೆ. ಮಾಹಿತಿಯೂ ಸಂಕ್ಷಿಪ್ತವಾಗಿದೆ. ವೈಜ್ಞಾನಿಕ ಹೆಸರುಗಳನ್ನು ಇಂಗ್ಲಿಷ್‌ನಲ್ಲಿ ನೀಡಿರುವುದು ಈ ಪಕ್ಷಿಗಳ ಕುರಿತು ಇನ್ನಷ್ಟು ಮಾಹಿತಿ ಹುಡುಕಾಟವನ್ನು ಸುಲಭವಾಗಿಸಿದೆ.

ಹಸೆ ಚಿತ್ತಾರದ ಮಾಹಿತಿ ನೀಡುವ ಕೃತಿ



ಹಸೆ ಚಿತ್ತಾರ
ಲೇ: ಡಾ.ಮೋಹನ್ ಚಂದ್ರಗುತ್ತಿ
ಪ್ರ: ಸುವ್ವಿ ಪ್ರಕಾಶನ
ಸಂ: 9480544099
ಪು: 164 ₹160

ಹಸೆ ಚಿತ್ತಾರವೆಂಬ ಕಲಾ ಪ್ರಕಾರವೊಂದು ಮಲೆನಾಡಿನ ಅಂಚಿನ ಸಮುದಾಯಗಳಲ್ಲಿ ಹಾಸು ಹೊಕ್ಕಾಗಿದೆ. ಸಾವಿರಾರು ವರ್ಷಗಳ ಬೆಟ್ಟಗಳ ಗುಹೆಗಳಲಿ, ಬಂಡೆಗಳ ಮೇಲೆ ಮೈದಳೆದುನಿಂತಿರುವ ಪ್ರಾಚೀನ ಮಾನವರ ಚಿತ್ತಾರದ ಮುಂದುವರಿದ ರೂಪವೇ ಈ ಹಸೆ ಚಿತ್ತಾರ.

ಮಲೆನಾಡಿನ ದೀವರೂ ಸೇರಿದಂತೆ ಆದಿಮ ಸಮುದಾಯಗಳ ಮದುವೆ ಸಮಾರಂಭದ ವೇಳೆ ಬರೆಯುವ ಈ ಚಿತ್ತಾರವು ಕೇವಲ ಚಿತ್ತಾರವಾಗಿ ಉಳಿಯದೆ ಅವರ ಬದುಕಿನ ವೈವಿದ್ಯಮಯ ಸಂತೋಷ ಹಾಗೂ ಸಂಕಟ, ಹಸಿವು, ವರ್ಣರಂಜಿತ ಬದುಕಿನ ಅಭಿವ್ಯಕ್ತಿಯಾಗಿ ಕಾಣುತ್ತದೆ.

ಆಧುನಿಕತೆಯ ಕಾಲದಲ್ಲಿ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇಂತಹ ಕಲೆಯ ಕುರಿತು ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿನ ಪ್ರಾಧ್ಯಾಪಕ ಮೋಹನಚಂದ್ರಗುತ್ತಿ ಅತ್ಯಂತ ಆಳವಾದ ಅಧ್ಯಯನವನ್ನು ಮಾಡಿ ಈ ಕೃತಿಯನ್ನು ಹೊರತಂದಿದ್ದಾರೆ.

ಹತ್ತುವರ್ಷಗಳ ನಿರಂತರ ಸಂಶೋಧನೆಯ ಫಲವೇ ಈ ಕೃತಿ. ಆದಿಮ ಕಾಲ ಪರಂಪರೆಯ ಬೇರುಗಳಿಂದ ಹಿಡಿದು ಆಧುನಿಕ ಸಂದರ್ಭದಲ್ಲಿ ಉಂಟಾಗಿರುವ ಪಲ್ಲಟಗಳನ್ನೂ ಈ ಕೃತಿಯಲ್ಲಿ ವಿವರಿಸಿದ್ದಾರೆ. ಇದರ ಜತೆಗೆ ಕಲಾವಿದರನ್ನೂ ಪರಿಚಯ ಮಾಡಿಕೊಟ್ಟಿದ್ದಾರೆ. ಕಲಾವಿದರ ಸೂಚಿಯನ್ನು ನೀಡುವುದರ ಮೂಲಕ ಸಮುದಾಯದ ಸಂಕಥನವಾಗಿ ಈ ಕೃತಿ ಮೂಡಿಬಂದಿದೆ.

ಚಿತ್ತಾರವೊಂದು ಆದಿಮ ಕಾಲದಲ್ಲಿ ತಾಂತ್ರಿಕವಾಗಿ ಬಳಕೆಯಾಗುತ್ತಿದ್ದುದರಿಂದ ಹಿಡಿದು ಇತ್ತೀಚಿನ ಭಿನ್ನ ರೀತಿಯ ಅನುಸಂದಾನವನ್ನು ಈ ಕೃತಿಯಲ್ಲಿ ತಾರ್ಕಿಕವಾಗಿ ಮಂಡಿಸಲಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಎಷ್ಟು ಉಪಯುಕ್ತವೋ ಕಲಾವಿದರಿಗೂ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ಬರೆದಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬಾಳ್ಗೆಳೆಯ

ಬಾಳ್ಗೆಳೆಯ (ನಾ). ಬಾಳಿನುದ್ದಕ್ಕೂ ಸ್ನೇಹಿತನಾಗಿರುವವನು.

(ಬಾಳ್ + ಕೆಳೆಯ)

ಋಷ್ಯಮೂಕ ಪರ್ವತದಲ್ಲಿ ಲಕ್ಷ್ಮಣನು ಅಣ್ಣ ರಾಮನಿಗೆ 'ಈ ಗಿರಿಯಲ್ಲಿ ದಿಟವಾಗಿ ಛಲ ಬಲಾನ್ವಿತ ಮಹಾಧೈರ್ಯಯುತ ಸನ್ಮಿತ್ರನನ್ನು ಪಡೆಯುತ್ತೇವೆ.' ಎಂದು ಹೇಳಿದನು. ತಮ್ಮನ ಧೈರ್ಯ ಹಾಗೂ ಶುಭದ ನುಡಿ ಕೇಳಿ ರಾಮ ನಗೆ ಬೀರಿದನು. ಮಲೆಯ ನೆತ್ತಿಯಂತೆ ತಲೆಯೆತ್ತಿ ಧ್ಯಾನಸ್ಥನಾದನು. ಸರೋವರದಿಂದ ಮೇಲೇರುತ್ತಿದ್ದ ಮಂಜನ್ನು, ಅದರಲ್ಲಿ ರವಿಕಿರಣ ಕೆತ್ತಿದ ನೀಲಿ ರಂಗೋಲಿಯನ್ನು ತದೇಕ ಚಿತ್ತದಿಂದ ನೋಡುತ್ತಿದ್ದನು. ಪ್ರಕೃತಿಯ ಪವಾಡದಲ್ಲಿ ಒಂದಾಗಿದ್ದ ಅವನು 'ಯಾರಲ್ಲಿ ನೋಡು ಸೌಮಿತ್ರಿ?' ಎಂದು ಹೇಳಿ ಮೇಲೆದ್ದು ಬಂಡೆ ಬಂಡೆಯೆಡೆ ನುಸುಳಿದವರಾರೆಂದು ಹುಡುಕತೊಡಗಿದನು. 'ಎಲ್ಲಿ' ಎಂಬ ಲಕ್ಷ್ಮಣನ ಪ್ರಶ್ನೆಗೆ 'ಇಲ್ಲಿಯೋ, ಮತ್ತೆಲ್ಲಿಯೋ ನನಗೆ ಗೊತ್ತಿಲ್ಲ. ಕಣ್ಣಿಗೆ ಕಾಣಿಸುತ್ತಿಲ್ಲ. ನನ್ನ ಬಾಳಿನ ಗೆಳೆಯನೊಬ್ಬನು ಬರುತ್ತಾನೆಂದು ಮನಸ್ಸು ಹೇಳುತ್ತಿದೆ' ಎಂದು ರಾಮನು ಮಾತನಾಡುತ್ತ ಭಾವವಶನಾಗಿ ಕಂಬನಿದುಂಬಿ ನಿಟ್ಟುಸಿರುಬಿಟ್ಟನು.

ಅಷ್ಟರಲ್ಲಿ ಬಂಡೆಯೆ ಮಾತಾಡಿತೆಂಬಂತೆ ಒಂದು ದನಿ ಕೇಳಿಸಿತು. ರಾಮಲಕ್ಷ್ಮಣರು ಮೂಕವಿಸ್ಮಿತರಾಗಿ ನೋಡುತ್ತಿರಲು ಋಷ್ಯಮೂಕದ ಮಹತ್ತೆ ಮೈ ತಳೆದು ಬಂದಂತೆ- ಕಾಡು ಬೆಳೆದ ನೆತ್ತಿಯ ಮೇಲೆ ಆಕಾಶದಲ್ಲಿ ಬರೆದ ಚಿತ್ರದಂತೆ ಭವ್ಯ ಪುರುಷ ಆಂಜನೇಯನು ಗೋಚರಿಸಿದನು.

ರಾಮ ಮತ್ತು ಹನುಮಂತರ ಸ್ನೇಹ ವಿಶ್ವದ ಪುರಾಣ ಕಥಾ ಸಾಹಿತ್ಯದಲ್ಲಿಯೆ ವಿಶಿಷ್ಟವಾದುದು. ಅದು ಬಾಳಿನುದ್ದಕ್ಕೂ ನಿರಂತರವಾಗಿರುವ ನೇಹ. ಅದನ್ನು ಕುವೆಂಪು ಅವರು 'ಬಾಳ್ಗೆಳೆಯ' ಎಂಬ ಪದ ರೂಪಿಸಿ, ನೇಹದ ಆಂತರ್ಯದ ಅರ್ಥವನ್ನು ವಿಶದ ಪಡಿಸಿದ್ದಾರೆ.

'ಇಲ್ಲಿಯೋ
ಮೇಣೆಲ್ಲಿಯೋ ಅರಿಯೆನಾಂ, ವತ್ಸ! ಕಾಣದು ಕಣ್ಗೆ,
ಬಗೆಗೆ ಸುಳಿದಿದೆ ಬರವು ಬಾಳ್ಗೆಳೆಯನೊರ್ವನಾ!'
ಎನುತೆನುತೆ ತನ್ನ ಬೆಳ್ಪಿಗೆ ತಾನೆ ಬೆರಗಾಗಿ,
ನಿಂದನು ಅನಾಥನೊಲ್ ಸೀತಾನಾಥ ದಾಶರಥಿ,
ಕಣ್‌ತೊಯ್ದು ಸುಯ್ದು.

ವಿವಿಡ್ ಸಿಡ್ನಿ ಬೆಳಕಿನ ಬೆರಗು

ಸಿ.ಜಿ.ಮಂಜುಳಾ

> 'ವಿವಿಡ್ ಸಿಡ್ನಿ' ಉತ್ಸವ-ಬೆರಗು ಹುಟ್ಟಿಸುವ ಬೆಳಕಿನ ಉತ್ಸವ. ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ ವರ್ಣ ವಿನ್ಯಾಸಗಳ ಬೆಳಕಿನ ಮಾಯಾಲೋಕವೇ ಸಿಡ್ನಿ ನಗರದಲ್ಲಿ ಸೃಷ್ಟಿಯಾಗುತ್ತದೆ.

ಆಸ್ಟ್ರೇಲಿಯಾದಲ್ಲಿ ಜೂನ್‌ನಿಂದ ಆಗಸ್ಟ್‌ವರೆಗೆ ಚಳಿಗಾಲ. ಶರತ್ಕಾಲ ಕಳೆದು ಮೈ ಕೊರೆಯುವ ಚಳಿಗಾಲ ಶುರುವಾಗುತ್ತಿದ್ದಂತೆಯೇ ಪ್ರತಿ ವರ್ಷ, ನ್ಯೂ ಸೌತ್ ವೇಲ್ಸ್ ರಾಜ್ಯದ ರಾಜಧಾನಿಯಾದ ಸಿಡ್ನಿಯಲ್ಲಿ 23 ದಿನಗಳ 'ವಿವಿಡ್ ಸಿಡ್ನಿ' ಎಂಬ ಹೆಸರಿನ ಬೆಳಕಿನ ಉತ್ಸವವೂ ಆರಂಭವಾಗುತ್ತದೆ. ಕೊರೆಯುವ ಚಳಿಗೆ ಬೆಚ್ಚನೆಯ ಮುದ ನೀಡುತ್ತಲೇ ಬೌದ್ಧಿಕ ಕೋಲ್ಮಿಂಚುಗಳನ್ನೂ ನೀಡುವಂತಹದ್ದು ಈ ಉತ್ಸವ. ಸೃಜನಾತ್ಮಕತೆ, ಆವಿಷ್ಕಾರ, ವಿಚಾರ ಹಾಗೂ ತಂತ್ರಜ್ಞಾನಗಳ ಸಂಯೋಜನೆಗಳ ಸಂಭ್ರಮಾಚರಣೆಯ 'ವಿವಿಡ್ ಸಿಡ್ನಿ', ಸಿಡ್ನಿ ನಗರದ ಹಗಲು-ರಾತ್ರಿಗಳಿಗೆ ಹೊಸ ರಂಗು ತುಂಬುತ್ತದೆ.

ಮೇ 24ರಂದು ಆರಂಭಗೊಂಡ ಈ ಉತ್ಸವ ಜೂನ್ 15ಕ್ಕೆ ಮುಕ್ತಾಯಗೊಂಡಿತು. ಉತ್ಸವದ ಈ ವರ್ಷದ ಘೋಷವಾಕ್ಯ 'ಮಾನವೀಯತೆ'. ಕಳೆದ ವರ್ಷ, ಇದೇ ಅವಧಿಯಲ್ಲಿ ಸಿಡ್ನಿ ನಗರದಲ್ಲಿ 'ವಿವಿಡ್ ಉತ್ಸವ'ದ ಬೆಳಕಿನ ಲೋಕದಲ್ಲಿ ನಡೆದಾಡಿ ಕಣ್ಮನಗಳನ್ನು ನಾವೂ ತುಂಬಿಕೊಂಡಿದ್ದೆವು. ಒಪೆರಾ ಹೌಸ್, ಹಾರ್ಬರ್ ಬ್ರಿಜ್, ಕಸ್ಟಮ್ ಹೌಸ್‌ನಂತಹ ಸಿಡ್ನಿ ನಗರದ ಸುಪ್ರಸಿದ್ಧ ತಾಣಗಳು ಸೇರಿದಂತೆ ನಗರದ ಪ್ರಮುಖ ಕಟ್ಟಡಗಳು, ಸಾರ್ವಜನಿಕ ಸ್ಥಳಗಳು, ರಾತ್ರಿಗಳಲ್ಲಿ ವಿವಿಧ ರಂಗುಗಳ ಬೆಳಕಿನಲ್ಲಿ ತೋಯುತ್ತಾ ಸೃಷ್ಟಿಸುವಂತಹ ಮಾಂತ್ರಿಕತೆ ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತದೆ.

ಸಿಡ್ನಿಯ ಪ್ರಮುಖ ಪ್ರವಾಸಿ ಆಕರ್ಷಣೆಯ ತಾಣ 'ಡಾರ್ಲಿಂಗ್ ಹಾರ್ಬರ್'ನಲ್ಲಿ ಲೇಸರ್ ಷೋ ನಡೆಯುವಂತಹ ನೀರಿರುವ ಕಡೆ ಕುಳಿತು ನೀರಿನ ಮಧ್ಯೆ ಎದ್ದು ಬರುವ ಬೆಳಕಿನ ವಿನ್ಯಾಸಗಳ ಪ್ರದರ್ಶನಗಳನ್ನು ನಾವು ನೋಡಿದ್ದೆವು. ಈ ಲೇಸರ್ ಲೈಟ್ ಷೋಗಳ ವೀಕ್ಷಣೆಗೆ ಅಲ್ಲಿ ಅಂದು ಜನ ಜಾತ್ರೆಯೇ ನೆರೆದಿತ್ತು. ಮಕ್ಕಳು ರಂಗುರಂಗಿನ ಲೈಟುಗಳಿರುವ ಕತ್ತಿ, ಗದೆಗಳಂತಹ ಆಟಿಕೆಗಳನ್ನು ಕೈಯಲ್ಲಿ ಹಿಡಿದು ಝಳಪಿಸಿ ಆಟವಾಡುತ್ತಾ ಕಿನ್ನರ ಲೋಕವನ್ನು ಸೃಷ್ಟಿಸಿದ್ದರು.

ಬೆಳಕು, ಸಂಗೀತ, ಹೊಸ ವಿಚಾರಧಾರೆ ಹಾಗೂ ಆಹಾರ ವೈವಿಧ್ಯ- ಈ ಉತ್ಸವದ ಮುಖ್ಯ ಅಂಶಗಳು. ಹೀಗಾಗಿ, ಆರ್ಟ್ ಇನ್‌ಸ್ಟಾಲೇಷನ್‌ಗಳು, 3 ಡಿ ಲೈಟ್ ಪ್ರೊಜೆಕ್ಷನ್‌ಗಳು, ಸ್ಫೂರ್ತಿದಾಯಕ ವಿಚಾರ-ವಿನಿಮಯಗಳು, ಸಂಗೀತದಲ್ಲಿ ಮೀಯಿಸುವ ಕಾರ್ಯಕ್ರಮಗಳು, ಆಹಾರ ವೈವಿಧ್ಯದ ಸವಿ ಉಣಿಸುವ ಕಾರ್ಯಕ್ರಮಗಳು ಸಿಡ್ನಿ ನಗರಕ್ಕೆ ಹೊಸ ಮೆರುಗು ತುಂಬುತ್ತವೆ. ವಿಶ್ವಮಟ್ಟದ ಶೆಫ್‌ಗಳು ಹಾಗೂ ರೆಸ್ಟೊರೆಂಟ್‌ಗಳು, ಪಾಕಶಾಸ್ತ್ರದ ಪ್ರಾವೀಣ್ಯವನ್ನು ಪ್ರಸ್ತುತಿ ಪಡಿಸುತ್ತವೆ.



ವಿವಿಡ್ ಸಿಡ್ನಿ ಹಬ್ಬದ ಸಂದರ್ಭದಲ್ಲಿ ಬಣ್ಣದೋಕುಳಿಯಲ್ಲಿ ಸಿಡ್ನಿ ಒಪೆರಾ ಹೌಸ್ ಮಿಂದೆದ್ದಿದ್ದು ಹೀಗೆ...



ನದಿ ನೀರಿನಲ್ಲಿ ವರ್ಣಚಿತ್ರದಂತೆ ಕಂಡ ಸಿಡ್ನಿ ಹಾರ್ಬರ್ ಬ್ರಿಜ್

ಡಾರ್ಲಿಂಗ್ ಹಾರ್ಬರ್ ಕಡೆಗೆ ಹೆಜ್ಜೆ ಹಾಕುವಾಗಲೇ ಉದ್ದಕ್ಕೂ ವೈವಿಧ್ಯಮಯ ತಿನಿಸುಗಳ ಅಂಗಡಿ ಮಳಿಗೆಗಳಿದ್ದುದನ್ನು ನೋಡಿದ್ದೆವು. ಆಸ್ಟ್ರೇಲಿಯಾದಲ್ಲಿ ಎಲ್ಲೆಡೆ ಕಾಣಸಿಗುವ ಜನಪ್ರಿಯ ಬರ್ಗರ್ ಅಂಗಡಿ 'ಬೆಟ್ಟಿಸ್ ಬರ್ಗರ್'ನಿಂದ ವೆಜ್ ಹಾಗೂ ಚಿಕನ್ ಬರ್ಗರ್‌ಗಳನ್ನು ಖರೀದಿಸಿದ್ದೆವು. ಜೊತೆಗೆ, ಡಬಲ್ ಸ್ಕೂಪ್ ಐಸ್ ಕ್ರೀಂ ವಿಥ್ ರಮ್ ಆ್ಯಂಡ್ ರೆಸಿನ್, ಮತ್ತೊಂದು ಸ್ಕೂಪ್ ಐಸ್ ಕ್ರೀಮ್ ವಿಥ್ ಚೆರ್ರಿ ಬ್ರಾಂಡಿ ಮತ್ತು ಕಾಫಿಯ ಸ್ವಾದ ಚಳಿಯನ್ನು ದೂರವಾಗಿಸಲು ನೆರವಿಗೆ ಬಂದವು. ಅಂದು ಸೋಮವಾರವಾಗಿದ್ದರೂ(ಜೂನ್ 12, 2023) 'ಕಿಂಗ್ಸ್ ಬರ್ತ್ ಡೇ' ಎಂಬ ಕಾರಣಕ್ಕಾಗಿ ಸಾರ್ವಜನಿಕ ರಜೆ ಇದ್ದದ್ದರಿಂದ ಮಕ್ಕಳ ಜೊತೆಗೆ ಬಂದ ಕುಟುಂಬಗಳಿಂದಾಗಿ ಜನಜಂಗುಳಿ ಹೆಚ್ಚಿತ್ತು. ಈವರೆಗೆ 'ಕ್ವೀನ್ಸ್ ಬರ್ತ್ ಡೇ' ಎಂದು ಆಚರಿಸಲಾಗುತ್ತಿದ್ದುದು ಕಳೆದ ವರ್ಷವಷ್ಟೇ 'ಕಿಂಗ್ಸ್ ಬರ್ತ್ ಡೇ' ಎಂದಾಗಿತ್ತು. ಆಸ್ಟ್ರೇಲಿಯಾ, ಬ್ರಿಟಿಷ್ ವಸಾಹತು ಆಗಿದ್ದಂತಹ ಕಾಮನ್ ವೆಲ್ತ್ ರಾಷ್ಟ್ರ. ಬ್ರಿಟನ್ ರಾಣಿ 2ನೆ ಎಲಿಜಬೆತ್ ತೀರಿಕೊಂಡು ದೊರೆ ಚಾರ್ಲ್ಸ್ ಸಿಂಹಾಸನವೇರಿದ ನಂತರ ಆಗಿದ್ದ ಬದಲಾವಣೆ ಅದು. ವಿಚಿತ್ರವೆಂದರೆ ಚಾರ್ಲ್ಸ್ ನಿಜವಾದ ಜನ್ಮದಿನ ಇರುವುದು ನವೆಂಬರ್ 14ಕ್ಕೆ. ಆದರೆ, ಸಾರ್ವಜನಿಕ ಆಚರಣೆಗಳ ಅನುಕೂಲಕ್ಕಾಗಿ ದಿನಾಂಕ ಬದಲಿಸಿ ಜನರಿಗೆ ದೀರ್ಘ ವಾರಾಂತ್ಯ ರಜೆಯ ಲಭ್ಯತೆಗಾಗಿ ಸೋಮವಾರಗಳಂದೇ ಈ ಜನ್ಮದಿನವನ್ನು ಆಚರಿಸುವ ಸಂಪ್ರದಾಯ ಬಂದಿದೆ. ಆಸ್ಟ್ರೇಲಿಯಾದ ಬೇರೆ ಬೇರೆ ರಾಜ್ಯಗಳು ಬೇರೆ ಬೇರೆ ತಿಂಗಳುಗಳಲ್ಲಿ ದೊರೆಯ ಜನ್ಮದಿನಕ್ಕೆ ಸಾರ್ವಜನಿಕ ರಜಾ ದಿನವನ್ನು ಘೋಷಿಸುತ್ತವೆ. ಹೀಗಾಗಿ ಈ ವರ್ಷ, ಜೂನ್ 10ರ ಸೋಮವಾರ, ನ್ಯೂ ಸೌತ್ ವೇಲ್ಸ್‌ನಲ್ಲಿ 'ಕಿಂಗ್ಸ್ ಬರ್ತ್ ಡೇ'ಗಾಗಿ ಸಾರ್ವಜನಿಕ ರಜೆ ಇತ್ತು.

ದಕ್ಷಿಣ ಗೋಳಾರ್ಧದಲ್ಲಿಯೇ ಅತಿ ದೊಡ್ಡ ಕಲಾ ಉತ್ಸವ 'ವಿವಿಡ್ ಸಿಡ್ನಿ' ಎಂಬಂಥ ಪ್ರತಿಪಾದನೆಗಳೂ ಇವೆ. ಅಂತರರಾಷ್ಟ್ರೀಯ ಉತ್ಸವ ಹಾಗೂ ಕಾರ್ಯಕ್ರಮಗಳ ಸಂಘದಿಂದಲೂ (ಐಎಫ್‌ಇಎ) 'ವಿವಿಡ್ ಸಿಡ್ನಿ' ಮಾನ್ಯತೆ ಗಳಿಸಿಕೊಂಡಿದ್ದು ಹಲವು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಹಲವು ವರ್ಷಗಳು ಆಸ್ಟ್ರೇಲಿಯಾದ ಅತ್ಯುತ್ತಮ ಪ್ರವಾಸಿ ಕಾರ್ಯಕ್ರಮ ಎಂಬಂಥ ಮಾನ್ಯತೆಯನ್ನೂ 'ವಿವಿಡ್ ಸಿಡ್ನಿ' ಗಳಿಸಿಕೊಂಡಿದೆ.

ಸಿಡ್ನಿ ನಗರದ ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ 'ವಿವಿಡ್ ಸಿಡ್ನಿ' ಮುಖ್ಯವಾದುದು. ಈ ಉತ್ಸವ ಆಸ್ಟ್ರೇಲಿಯಾದ ಪ್ರವಾಸಿಗರನ್ನಷ್ಟೇ ಅಲ್ಲದೆ ಹೊರ ದೇಶಗಳ ಪ್ರವಾಸಿಗರನ್ನೂ ಆಕರ್ಷಿಸುತ್ತದೆ.

ಈ ವರ್ಷದ 'ವಿವಿಡ್ ಸಿಡ್ನಿ 2024' -ನಾವು ಮನುಷ್ಯರಾಗಿರುವುದನ್ನು ಅನ್ವೇಷಿಸಿದೆ. ಜತೆಗೆ ಒಟ್ಟಾಗಿ ನಾವು ಉತ್ತಮ ಪ್ರಪಂಚ ಹೇಗೆ ಕಟ್ಟಬಲ್ಲೆವು ಎಂಬುದನ್ನೂ ಪ್ರತಿಪಾದಿಸಿದೆ ಎಂದು ಈ ಉತ್ಸವದ ನಿರ್ದೇಶಕಿ ಗಿಲ್ ಮಿನೆರ್ವಿನಿ ಹೇಳುತ್ತಾರೆ.

ಬದಲಾಗುತ್ತಿರುವ ಕಾಲ ಹಾಗೂ ಪ್ರಪಂಚದಲ್ಲಿ ಬದುಕಿನ ಅರ್ಥ ಹಾಗೂ ಉದ್ದೇಶದ ನಮ್ಮ ಅನ್ವೇಷಣೆಗೆ ಹೊಸ ತುರ್ತು ಎದುರಾಗಿರುವ ಸಂದರ್ಭ ಇದು. ನಾವು ಯಾರು ಹಾಗೂ ನಮ್ಮಿಂದ ಏನು ಸಾಧ್ಯ ಎಂಬುದನ್ನು ಕಂಡುಕೊಳ್ಳಲು ಅಂತರಂಗದ ಶೋಧನೆ ಅಗತ್ಯ. ನಮ್ಮನ್ನು ಮಾನವೀಯಗೊಳಿಸುವಂತಹ ಪ್ರೀತಿ, ದಯೆ, ಕರುಣೆ, ಸೃಜನಾತ್ಮಕತೆಯ ಅಂಶಗಳನ್ನು ಕಂಡುಕೊಳ್ಳಲು ನಮ್ಮೊಳಗೆ ನಾವು ನೋಡಿಕೊಳ್ಳಬೇಕು.

ಸೃಜನಾತ್ಮಕತೆ ಇಲ್ಲದಿದ್ದಲ್ಲಿ ಮನುಷ್ಯತ್ವ ಬದುಕುಳಿಯದು. ನಮ್ಮ ಜನರು ಹಾಗೂ ನಮ್ಮ ಭೂಮಿಯನ್ನು ಗೌರವಿಸುವ ವಿಶ್ವವನ್ನು ಸೃಷ್ಟಿಸಲು ನಾವು ಒಳ್ಳೆಯ ಮನುಷ್ಯರಾಗಬೇಕು ಎಂಬ ಸಂದೇಶ 'ವಿವಿಡ್ ಸಿಡ್ನಿ 2024'ರಲ್ಲಿತ್ತು. ಸಶಕ್ತ ಸಮುದಾಯಗಳು, ಸುಸ್ಥಿರ ಪರಿಸರ ಹಾಗೂ ಬೌದ್ಧಿಕ ಸ್ವಾತಂತ್ರ್ಯಕ್ಕೆ ನೆರವಾಗುವಂತಹದ್ದು 'ಸೃಜನಾತ್ಮಕತೆ'; ನಾವು ಮನುಷ್ಯರಾಗಿರುವುದರ ಬೆನ್ನೆಲುಬು ಅದು. ಕಲೆ, ಬದುಕಿಗೆ ಅರ್ಥವನ್ನು ನೀಡುತ್ತದೆ, ನಮ್ಮ ಬದುಕಿನ ಗುಣಮಟ್ಟ ಸುಧಾರಿಸುತ್ತದೆ. ಸುಖದ ಭಾವನೆಯನ್ನೂ ನೀಡುತ್ತದೆ. ನಮ್ಮ ಮನಸ್ಸನ್ನು ಹೊಸ ವಿಚಾರಗಳಿಗೆ ತೆರೆಸುತ್ತದೆ.. ಕಥೆ, ಕಲೆ, ಸಂಗೀತ, ಆಹಾರ ಮತ್ತಿತರ ಸೃಜನಾತ್ಮಕ ಅಭಿವ್ಯಕ್ತಿಗಳ ಮೂಲಕ ಮನುಷ್ಯರಾಗಿ ನಾವು ಬೆಸೆದುಕೊಳ್ಳುತ್ತೇವೆ. ಸೃಜನಾತ್ಮಕತೆ, ಕಲ್ಪನೆ ನಮ್ಮನ್ನು ಮಾನವೀಯವಾಗಿಸುತ್ತದೆ. ಮಾನವ ಸೃಜನಾತ್ಮಕತೆ ತಂತ್ರಜ್ಞಾನ ಅಭಿವೃದ್ಧಿಗೆ ಅವಕಾಶ ಮಾಡುತ್ತದೆ; ಸಮಸ್ಯೆಗಳನ್ನು ಪರಿಹರಿಸಿ ಹೊಸ ಬಗೆಯ ಪರಿಹಾರಗಳನ್ನು ಸೃಷ್ಟಿಸುತ್ತದೆ ಎಂಬಂಥ ತಾತ್ವಿಕತೆ 'ವಿವಿಡ್ ಸಿಡ್ನಿ' ಉತ್ಸವದ ಹಿಂದೆ ಇದೆ.

14ನೇ ಉತ್ಸವ

ಈ ವರ್ಷ, ಈ ಉತ್ಸವದ 14ನೇ ವರ್ಷಾಚರಣೆ. ಯಾವುದೇ ಚೌಕಟ್ಟುಗಳಿಲ್ಲದೆ, ಸರಹದ್ದುಗಳಾಚೆಗೆ ನಿಂತು ಚಿಂತಿಸುವ ಕಲಾವಿದರು, ಸಂಗೀತಗಾರರು, ಚಿಂತಕರು ಹಾಗೂ ಪಾಕಶಾಸ್ತ್ರ ಪ್ರವೀಣರ ಅಭಿವ್ಯಕ್ತಿಗಳ ಹೊಸ ಸಾಧ್ಯತೆಗಳ ಅನಾವರಣವು ಪ್ರವಾಸಿಗರಿಗೆ ಹಾಗೂ ಸಿಡ್ನಿ ಸೈಡರ್ಸ್‌ಗೆ (ಸಿಡ್ನಿ ನಿವಾಸಿಗಳು) ಮುದ ನೀಡಿವೆ ಎಂಬುದು ಉತ್ಸವ ಸಂಘಟಕರ ಹೇಳಿಕೆ. ಪ್ರತಿ ವರ್ಷ ಬಹಳಷ್ಟು ಉಚಿತ ಪ್ರದರ್ಶನಗಳಿದ್ದರೂ ಕೆಲವು ಬೆಳಕಿನ ಪ್ರದರ್ಶನಗಳನ್ನು ವೀಕ್ಷಿಸಲು ಟಿಕೆಟ್‌ಗಳನ್ನು ಖರೀದಿಸಬೇಕು. ಈ ಬಾರಿ ಸಿಡ್ನಿಯ ಆಕರ್ಷಕ ತಾಣಗಳ ಮಾರ್ಗಗಳಲ್ಲಿ ಹಾದು ಹೋಗುವ ಕೆಲವು ಸ್ಥಳೀಯ ರೈಲುಗಳಲ್ಲೂ ಸಂಗೀತದ ನಿನಾದದೊಂದಿಗೆ ಬೆಳಕಿನ ಪ್ರದರ್ಶನಗಳಿದ್ದವು. 'ಟೆಕ್ನೊ ಟ್ರೇನ್'ಗಳು ಎಂದು ಕರೆಯಲಾಗುವ ಈ ಟ್ರೇನ್‌ಗಳಲ್ಲಿ ಸಂಚರಿಸಲು ವಿಶೇಷ ಟಿಕೆಟ್‌ಗಳನ್ನು ಖರೀದಿಸಬೇಕು.




ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಿಶ್ಯೂ ಚಿಕ್ಕು ಕೊಶ್ರುಷ್ಟು ಕಥೆಯ ಬೌ ಬೌ ಗಡಿಯಾರ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಮನೆಯಲ್ಲಿದ್ದ ಟಾಮಿ ಎಂಬ ನಾಯಿಮರಿ ಬಹಳ ಹೊತ್ತಿನಿಂದ ಗಡಿಯಾರವನ್ನೇ ದಿಟ್ಟಿಸಿ ನೋಡುತ್ತಿತ್ತು. ಗಂಟೆ ಉರುಳಿದಂತೆ ಗಡಿಯಾರದೊಳಗಿಂದ ಹೊರಬರುತ್ತಿದ್ದ ಹಕ್ಕಿಯೊಂದು ಚೀಂವ್...ಚೀಂವ್...ಎನ್ನುತ್ತಿತ್ತು. ಕೆಲ ಹೊತ್ತು ಕಾದ ಟಾಮಿ ಮತ್ತೊಮ್ಮೆ ಹಕ್ಕಿ ಹೊರಬಂದಾಗ ಏಕಾಏಕಿ ಜಿಗಿದು ಅದನ್ನು ಕಚ್ಚಿ ಎಳೆದು ಬಿಸಾಡಿತು. ಹಕ್ಕಿ ಕೂತಿದ್ದ ಆ ಗೂಡಿನೊಳಗೆ ತಾನೇ ಕುಳಿತು ಬೌ ಬೌ ಎಂದು ಕೂಗತೊಡಗಿತು.



ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಗ	ಪ್ರೋ	ಹ	ಮು
ಉ	ಕಂ	ಕೊ	ಕಾ
ಬೈ	ಉ	ಚಿಂ	ಕೇ

1

	ತ್ಸಾ	ಹ
	ತ್ಸಾ	ಹ

2

	ಳಿ	ಕೆ
	ಳಿ	ಕೆ

3

	ತ	ನ
	ತ	ನ

4

	ಳ	ಗ
	ಳ	ಗ

5

	ರ	ವಿ
	ರ	ವಿ

6

	ಗಾ	ಲು
	ಗಾ	ಲು

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಾಯಾ ತ್ರಿಶೂಲ

11		1		13
12		5		8
2	6	3	10	4
		7		
		9		

ನೀವು ಮಾಯಾಚೌಕಗಳ ಬಗ್ಗೆ ಕೇಳಿದ್ದೀರಿ, ಓದಿದ್ದೀರಿ.
ಎಡದಿಂದ ಬಲಕ್ಕೆ ಹಾಗೂ ಮೇಲಿಂದ ಕೆಳಕ್ಕೆ ಹೇಗೆ ಕೂಡಿದರೂ ಮೊತ್ತ ಒಂದೇ ಆಗಿರುತ್ತದೆ. ಹಾಗೂ ಬಳಸುವ ಸಂಖ್ಯೆಗಳು ಕ್ರಮವಾಗಿರುತ್ತವೆ. ಆದರೆ ಇಲ್ಲೊಂದು ತ್ರಿಶೂಲವಿದೆ. ತ್ರಿಶೂಲದಲ್ಲಿನ ಸಂಖ್ಯೆಗಳನ್ನು ಮೇಲಿಂದ ಕೆಳಕ್ಕೆ ಕೂಡಿಸಿದರೂ ಹಾಗೂ ಎಡದಿಂದ ಬಲಕ್ಕೆ ಕೂಡಿಸಿದರೂ ಮೊತ್ತ 25 ಬರುತ್ತದೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜಾಣಪದ ಆಟ

ಇಲ್ಲಿರುವ ದ, ದಾ, ದಿ, ದೀ ಬಳ್ಳಿಗೆ ಅಕ್ಷರ ಪಟ್ಟಿಯಿಂದ ಎರಡಕ್ಷರ ಆಯ್ದು ಹಿಂದೆ ಮುಂದೆ ತುಂಬಿ ಪದ ಮಾಡಿ.

1		ದ	
2		ದಾ	
3		ದಿ	
4		ದೀ	
5		ದು	
6		ದೂ	
7		ದೆ	
8		ದೇ	
9		ದೈ	
10		ದೊ	
11		ದೋ	
12		ದೌ	
13		ದಂ	

ಅಕ್ಷರ ಪಟ್ಟಿ	
ಉ	ಕು
ಆ	ತಿ
ಬ	ಣ
ರು	ಅ
ಬಂ	ಒಂ
ಒಂ	ರ
ಳ್ಳಿ	ಕಂ
ರ	ವ
ಕ	ಸಂ
ಲು	ಆ
ಕು	ಓ
ಹ	ಬ
ಸು	ಳೆ



ಪಂಚ-ಕ್ವಿಜ್ಞಾಯ

1. ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ್ದು ಯಾವಾಗ?
2. ಪ್ರಪಂಚದಲ್ಲೇ ಪ್ರಖ್ಯಾತರಾದ ಪಕ್ಷಿ ಶಾಸ್ತ್ರಜ್ಞ ಯಾರು?
3. ನಡುರಾತ್ರಿ ಸೂರ್ಯನ ಭೂಮಿ ಎಂದು ಕರೆಯುವ ದೇಶ ಯಾವುದು?
4. ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಯಾರು?
5. ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಯಾವ ದಿನವೆಂದು ಆಚರಿಸಲಾಗುತ್ತದೆ?

ಕಳೆದ ಸಂಚಿಕೆಯ ಸರಿ ಉತ್ತರಗಳು


ಪ್ರಾಸಪದಬಂಧ: 1.ಬೆಳಕು-ಕೊಳಕು 2.ಪಂಗಡ-ಮುಂಗಡ 3.ಸಹಿತ-ರಹಿತ 4.ಸಂಪತ್ತು-ವಿಪತ್ತು 5.ಸುರುಗಿ-ತಿರುಗಿ 6.ಮಾರುತಿ-ಕೀರುತಿ
ಜಾಣಪದ ಆಟ: 1.ಅವಲಕ್ಕಿ 2.ಅವಮಾನ 3.ಅವಸರ 4.ಅವರಾದಿ 5.ಅವಘಡ 6.ಅವರಾತ್ರಿ 7.ಅವಧಾನಿ 8.ಅವಕಾಶ 9.ಅವತಾರ 10.ಅವಧೂತ
ಹುಡುಕಾಟ: 1.ಬಾಳು ಬೆಳಗಿತು 2.ಲಕ್ಷಾಧೀಶ್ವರ 3.ಗಂಡಭೇರುಂಡ 4.ಗಾಳಿಪಟ 5.ಧರಣಿ ಮಂಡಲ ಮಧ್ಯದೊಳಗೆ 6.ರವಿಚಂದ್ರ 7.ತಿರುಪತಿ 8.ಲಗ್ನಪತ್ರಿಕೆ 9.ಕದಂಬ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಧನುಷ್ ಕೆ.ಆರ್.
ತುಮಕೂರು



ಸ್ನೇಹ ಎಚ್.ಬಿ.
ಹಾವೇರಿ




ನಿಶ್ಚಿತ ಎಸ್.
ರಾಯಚೂರು



ಆರಾಧ್ಯ ಬಿ.
ರಾಯಚೂರು



ಸೃಜನಾ ಟಿ.ಆರ್.
ಹೊಸಪೇಟೆ



ಸಮನ್ವಿ ಜಿ.ಆರ್.
ಬೆಂಗಳೂರು



ಮಹಿಳಾ ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ಏಕದಿನ ಪಂದ್ಯ ಇಂದು • ಸ್ಮೃತಿ ಮಂದಾನ, ಶ್ರೇಯಾಂಕಾ ಮೇಲೆ ಚಿತ್ತ

ಶುಭಾರಂಭದ ನಿರೀಕ್ಷೆಯಲ್ಲಿ ಹರ್ಮನ್ ಬಳಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ವರ್ಷ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಅದಕ್ಕೂ ಮುನ್ನ ನಡೆಯಲಿರುವ ಪ್ರತಿಯೊಂದು ಸರಣಿಯೂ ಮಹಿಳಾ ಕ್ರಿಕೆಟ್ ತಂಡಗಳಿಗೆ ಮಹತ್ವದ್ದಾಗಿವೆ.

ಇದೇ ಹೊತ್ತಿನಲ್ಲಿ ಬೆಂಗಳೂರು ಕೂಡ ಮಹಿಳೆಯರ ಮೂರು ಏಕದಿನ ಪಂದ್ಯಗಳನ್ನು ಆಯೋಜಿಸಲಿದೆ. ಈ ಸರಣಿಯ ಮೊದಲ ಪಂದ್ಯವು ಭಾನುವಾರ ನಡೆಯಲಿದೆ. ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ.

ಜೆಮಿಮಾ ರಾಡ್ರಿಗಸ್ ಮತ್ತು ಪೂಜಾ ವಸ್ತ್ರಕರ್ ಅವರು ಫಿಟ್ ಆಗಿರುವುದರಿಂದ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡದ ಬಲ ವೃದ್ಧಿಸಿದೆ. ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೆಮಿಮಾ ಮತ್ತು ಪೂಜಾ ಲವಲವಿಕೆಯಿಂದ ಅಭ್ಯಾಸ ಮಾಡಿದರು.


ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಅಭ್ಯಾಸ ನಡೆಸಿದ ಭಾರತ ತಂಡದ ಆಟಗಾರ್ತಿಯರು –ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

'ಜೆಮಿಮಾ ಅವರು ಅನುಭವಿ ಆಟಗಾರ್ತಿ. ದಕ್ಷಿಣ ಆಫ್ರಿಕಾದಂತಹ ಉತ್ತಮ ತಂಡದ ಎದುರಿನ ಸರಣಿಯಲ್ಲಿ ಜೆಮಿಮಾ ಅವರು ಫಿಟ್ ಆಗಿ ಮರಳಿರುವುದು ನಮ್ಮ ಆತ್ಮವಿಶ್ವಾಸ ಹೆಚ್ಚಿಸಿದೆ' ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಸುದ್ದಿಗಾರರಿಗೆ ತಿಳಿಸಿದರು.

ಕಳೆದ ಜನವರಿಯಲ್ಲಿ ಆಸ್ಟ್ರೇಲಿಯಾ ಎದುರು ಭಾರತ ತಂಡವು ಏಕದಿನ ಮತ್ತು ಟಿ20 ಸರಣಿಗಳಲ್ಲಿ ಸೋತಿತ್ತು. ಈಚೆಗೆ ನಡೆದಿದ್ದ ಸರಣಿಯಲ್ಲಿ ಭಾರತ ತಂಡವು 5–0ಯಿಂದ ಬಾಂಗ್ಲಾದೇಶ ವಿರುದ್ಧ ಜಯಿಸಿತು.

11ರ ಬಳಗದಲ್ಲಿ ಕರ್ನಾಟಕದ ಹುಡುಗಿ ಶ್ರೇಯಾಂಕಾ ಪಾಟೀಲ ಅವರಿಗೆ ಸ್ಥಾನ ಸಿಗುವುದು ಬಹುತೇಕ ಖಚಿತವಾಗಿದೆ. ವಿಕೆಟ್‌ಕೀಪರ್ ಸ್ಥಾನಕ್ಕಾಗಿ ಯಸ್ತಿಕಾ ಭಾಟಿಯಾ ಮತ್ತು ರಿಚಾ ಘೋಷ್ ನಡುವೆ ಪೈಪೋಟಿ ಇದೆ.

ಮಹಿಳಾ ಪ್ರೀಮಿಯರ್ ಲೀಗ್ ಚಾಂಪಿಯನ್ ಆಗಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಅವರು ಉತ್ತಮ ಲಯದಲ್ಲಿದ್ದಾರೆ. ಹರ್ಮನ್ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳಿದರೆ, ದೊಡ್ಡ ಮೊತ್ತ ಗಳಿಸುವುದು ಸುಲಭವಾಗಲಿದೆ.

ಲಾರಾ ವೊಲ್ವಾರ್ಡ್ಟ್ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡದಲ್ಲಿ ಉತ್ತಮ ಆಲ್‌ರೌಂಡರ್‌ಗಳಿದ್ದಾರೆ. ಕಳೆದ ನಾಲ್ಕು ದಿನಗಳಿಂದ ತಂಡದ ಆಟಗಾರ್ತಿಯರು ಅಭ್ಯಾಸ ನಡೆಸಿದ್ದು, ಆತಿಥೇಯ ತಂಡಕ್ಕೆ ಸವಾಲೊಡ್ಡಲು ಸಿದ್ಧವಾಗಿದೆ.

ಮಳೆ ಸಾಧ್ಯತೆ: ಪಂದ್ಯದ ಸಮಯದಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ. ಎರಡು ದಿನಗಳ ಹಿಂದೆ ಮಂಡಳಿ ಅಧ್ಯಕ್ಷರ ಇಲೆವನ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಅಭ್ಯಾಸ ಪಂದ್ಯವು ಮಳೆಯಿಂದಾಗಿ ಅರ್ಧಕ್ಕೆ ಮೊಟಕಾಗಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 1.30

ಎಲಿಮಿನೇಷನ್ ಸುತ್ತಿಗೆ ಭಾರತದ ಪುರುಷರ ರಿಕರ್ವ್ ತಂಡ

ಅಂತಾಲ್ಯ (ಟರ್ಕಿ), (ಪಿಟಿಐ): ಭಾರತದ ಪುರುಷರ ರಿಕರ್ವ್ ತಂಡ, ಒಲಿಂಪಿಕ್ಸ್ ಅಂತಿಮ ಕ್ವಾಲಿಫೈಯರ್‌ನಲ್ಲಿ ಅಗ್ರ ಶ್ರೇಯಾಂಕದೊಡನೆ 24 ತಂಡಗಳ ಎಲಿಮಿನೇಷನ್ ಸುತ್ತನ್ನು ತಲುಪಿದೆ.

ತರುಣದೀಪ್ ರೈ, ಧೀರಜ್ ಬೊಮ್ಮದೇವರ ಮತ್ತು ಪ್ರವೀಣ್ ಜಾಧವ್ ಅವರನ್ನು ಒಳಗೊಂಡ ತಂಡ 2018 ಪಾಯಿಂಟ್ಸ್ ಕಲೆಹಾಕಿ, ಚೀನಾ ತೈಪಿ (2008) ಮತ್ತು ಜರ್ಮನಿ (1998) ತಂಡಗಳನ್ನು ಹಿಂದೆಹಾಕಿತು. 32ರ ಸುತ್ತಿನಿಂದ ಅಗ್ರ 24ರ ಸುತ್ತನ್ನು ಪ್ರವೇಶಿಸಿತು. ಒಟ್ಟು 46 ತಂಡಗಳು ಭಾಗವಹಿಸಿದ್ದವು.

ಅಗ್ರಸ್ಥಾನದಲ್ಲಿ ಸ್ಪರ್ಧೆ ಮುಗಿಸಿದ ಕಾರಣ ಭಾರತ ಅಂತಿಮ 16ರ (ಪ್ರಿಕ್ವಾರ್ಟರ್ ಫೈನಲ್) ಸುತ್ತಿಗೆ ಬೈ ಪಡೆದಿದೆ. ಈ ಸುತ್ತಿನಲ್ಲಿ ಭಾರತದ ಎದುರಾಳಿ 17ನೇ ಶ್ರೇಯಾಂಕದ ಲಕ್ಸೆಂಬರ್ಗ್. ಎಲಿಮಿನೇಷನ್ ಸುತ್ತಿನಲ್ಲಿ ಮೊದಲ ಮೂರು ರ್‍ಯಾಂಕ್ ಪಡೆಯುವ ತಂಡಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುತ್ತವೆ.

ಭಾರತದ ಮಹಿಳಾ ರಿಕರ್ವ್ ತಂಡ ಶುಕ್ರವಾರ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಕೆಳ ಕ್ರಮಾಂಕದ ಉಕ್ರೇನ್ ಎದುರು 3–5ರಲ್ಲಿ ಅನಿರೀಕ್ಷಿತ ಆಘಾತ ಅನುಭವಿಸಿತ್ತು. ಈಗಾಗಲೇ ಪ್ರಬಲ ತಂಡಗಳು ಅರ್ಹತಾ ಕೋಟಾದಲ್ಲಿ ಒಲಿಂಪಿಕ್ಸ್‌ಗೆ ಸ್ಥಾನ ಕಾದಿರಿಸಿರುವ ಕಾರಣ, ಅಗ್ರ ರ್‍ಯಾಂಕ್ ಆಧಾರದಲ್ಲೂ ಭಾರತ ಮಹಿಳಾ ತಂಡಕ್ಕೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಅವಕಾಶವಿದೆ.

ಯುರೋ ಕಪ್ ಫುಟ್‌ಬಾಲ್ ಟೂರ್ನಿ: ಸ್ವಿರ್ಜಲೆಂಡ್‌ಗೆ ಮಣಿದ ಹಂಗೆರಿ

ಆತಿಥೇಯ ಜರ್ಮನಿಗೆ ಗೆಲುವು

ಮ್ಯೂನಿಚ್ (ಎಎಫ್‌ಪಿ): ಆತಿಥೇಯ ಜರ್ಮನಿ ತಂಡವು ಯುರೋಪಿಯನ್ ಚಾಂಪಿಯನ್‌ಷಿಪ್‌ನ ಆರಂಭಿಕ ಪಂದ್ಯದಲ್ಲಿ 5–1 ಗೋಲುಗಳಿಂದ ಸ್ಕಾಟ್ಲೆಂಡ್ ತಂಡವನ್ನು ಸೋಲಿಸಿತು.

ಶುಕ್ರವಾರ ತಡರಾತ್ರಿ ನಡೆದ ಈ ಪಂದ್ಯದ 10ನೇ ನಿಮಿಷ ಫ್ಲೋರಿಯನ್ ವಿರ್ಟ್ಜ್ ಮೊದಲ ಗೋಲು ಗಳಿಸಿದರೆ, ಜಮಾಲ್ ಮುಸಿಯಾಲಾ (19ನೇ ನಿ) ಜರ್ಮನಿಯ ಮುನ್ನಡೆಯನ್ನು ದ್ವಿಗುಣಗೊಳಿಸಿದರು. ನಂತರ ಕೈ ಹ್ಯಾವರ್ಟ್ಜ್ (45 + 1 ಪೆನಾಲ್ಟಿ), ನಿಕೊಲಸ್ ಫ್ಯೂಯೆಲ್ಕ್ರುಗ್ (68ನಿ) ಮತ್ತು ಎಮ್ರೆ ಕ್ಯಾನ್ (90 + 3) ಗೋಲು ಗಳಿಸಿದರು. ಸ್ಕಾಟ್ಲೆಂಡ್‌ಗೆ ಜರ್ಮನಿಯ ಆಂಟೋನಿಯೊ ರುಡಿಗರ್ (87 ನಿಮಿಷ) ಅವರು ಉಡುಗೊರೆ ಗೋಲು ನೀಡಿದರು.

ಒರಟು ಆಟವಾಡಿದ ಸ್ಕಾಟ್ಲೆಂಡ್‌ನ ರಯಾನ್ ಪೋರ್ಟಿಯಸ್ ಅವರಿಗೆ ವಿರಾಮಕ್ಕೆ ಮೊದಲಿನ ಅವಧಿಯಲ್ಲಿ ರೆಡ್ ಕಾರ್ಡ್ ತೋರಿಸಿ ಹೊರಗೆ ಕಳುಹಿಸಲಾಯಿತು. ಹೀಗಾಗಿ ತಂಡ ಹತ್ತು ಆಟಗಾರರಿಗೆ ಸೀಮಿತಗೊಂಡಿತು. ಈ ವೇಳೆ ಜರ್ಮನಿಗೆ ದೊರೆತ ಪೆನಾಲ್ಟಿ ಅವಕಾಶವನ್ನು ಕೈ ಹ್ಯಾವರ್ಟ್ಜ್ ಅವರು ಗೋಲು ಆಗಿ ಪರಿವರ್ತಿಸಿದರು.

ಶನಿವಾರ ಕೊಲೋನ್‌ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡವು 3–1 ರಿಂದ ಹಂಗೆರಿ ತಂಡವನ್ನು ಸೋಲಿಸಿತು.


ಗೋಲು ಗಳಿಸಿದ ಸಂಭ್ರಮದಲ್ಲಿ ಸ್ವಿಟ್ಜರ್‌ಲೆಂಡ್‌ನ ಕ್ವಾಡ್ವೊ ದುವಾ (ಬಲ) –ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಸ್ವಿಟ್ಜರ್ಲೆಂಡ್ ಪರ ಕ್ವಾಡ್ವೊ ದುವಾ (12ನೇ ನಿಮಿಷ), ಮೈಕೆಲ್ ಎಬಿಸ್ಚರ್ (45 ನಿ) ಮತ್ತು ಬ್ರೀಲ್ ಎಂಬೋಲೊ (90 + 3) ಗೋಲು ಗಳಿಸಿದರೆ, ಹಂಗೆರಿ ಪರ ಬರ್ನಾಬಸ್ ವರ್ಗ (66 ನಿ) ಏಕೈಕ ಗೋಲು ಗಳಿಸಿದರು.

ಸ್ಪೇನ್ ಶುಭಾರಂಭ: ಮೂರು ಬಾರಿಯ ಚಾಂಪಿಯನ್ ಸ್ಪೇನ್ ತಂಡವು 'ಬಿ' ಗುಂಪಿನ ಪಂದ್ಯದಲ್ಲಿ 3–0ಯಿಂದ ಕ್ರೊಯೇಷಿಯಾ ತಂಡವನ್ನು ಸುಲಭವಾಗಿ ಮಣಿಸಿತು. ಅಲ್ವಾರೊ ಮೊರಾಟಾ (29ನೇ ನಿ), ಫ್ಯಾಬಿಯನ್ ರೂಯಿಜ್ (32ನೇ ನಿ) ಮತ್ತು ಡ್ಯಾನಿ ಕರ್ವಾಜಾಲ್ (45 + 2ನೇ ನಿ) ಸ್ಪೇನ್ ಪರ ಗೋಲು ಗಳಿಸಿದರು.

ಬ್ರಿಕ್ಸ್ ಕ್ರೀಡಾಕೂಟ ಮಹಿಳಾ ಟಿಟಿ ತಂಡಕ್ಕೆ ಕಂಚು

ನವದೆಹಲಿ (ಪಿಟಿಐ): ರಷ್ಯಾದ ಕಜಾನ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಮೊದಲ ಪದಕ ಗೆದ್ದಿದೆ. ಪೊಯ್ಮಂಟಿ ಬೈಸ್ಯಾ, ಮೌಮಿತಾ ದತ್ತಾ ಮತ್ತು ಯಾಶಿನಿ ಶಿವಶಂಕರ್ ಅವರನ್ನೊಳಗೊಂಡ ಮಹಿಳಾ ಟೇಬಲ್ ಟೆನಿಸ್ ತಂಡವು ಕಂಚಿನ ಪದಕವನ್ನು ಗೆದ್ದಿದೆ.

ರಷ್ಯಾದ ನಗರದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಭಾರತ ತಂಡ ಚೀನಾ ವಿರುದ್ಧ 1-3 ರಿಂದ ಸೋತು ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು. ಮೊದಲ ಗೇಮ್‌ನಲ್ಲಿ ಯಾಶಿನಿ 11-7, 4-11, 11-8, 7-11, 11-2 ರಲ್ಲಿ ಗೆದ್ದರು. ಆದರೆ ಚೀನಾ ಉಳಿದ ಮೂರು ಪಂದ್ಯಗಳನ್ನು ಗೆದ್ದು ಫೈನಲ್ ಪ್ರವೇಶಿಸಿತು.

ಅನಿರ್ಬನ್ ಘೋಷ್, ಜೀತ್ ಚಂದ್ರ ಮತ್ತು ಸ್ನೇಹಿತ್ ಸುರವಜ್ಜುಲಾ ಅವರನ್ನೊಳಗೊಂಡ ಪುರುಷರ ತಂಡ ಬಹ್ರೇನ್ ವಿರುದ್ಧ 3-1 ಅಂತರದಲ್ಲಿ ಜಯ ಸಾಧಿಸಿ ಐದನೇ ಸ್ಥಾನ ಪಡೆಯಿತು.

'ಕೂಟದಲ್ಲಿ ಇದು ನಮ್ಮ ಮೊದಲ ಪದಕವಾಗಿದೆ. ದೇಶ ಹೆಮ್ಮೆಪಡುವಂತೆ ಮಾಡಿದ್ದೀರಿ' ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ತಂಡವನ್ನು 'ಎಕ್ಸ್'ನಲ್ಲಿ ಅಭಿನಂದಿಸಿದ್ದಾರೆ.




ಬೆಂಗಳೂರಿನಲ್ಲಿ ಗುರುವಾರ ನಡೆದ ಅಂತರ ಕಾನೂನು ಕಾಲೇಜು ಟೇಬಲ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ತಂಡ. (ನಿಂತವರು ಎಡದಿಂದ) ಎಸ್‌ಎಲ್‌ಸಿ ಪಿಇಡಿ ಸಂತೋಷ್ ಜಿ, ಎಸ್‌ಎಲ್‌ಸಿ ಪ್ರಾಂಶುಪಾಲೆ ಡಾ.ಪ್ರಣೀತಾ ಬಿ.ಎಸ್, ಪವನ್, ಕೆಎಸ್‌ಎಲ್‌ಯು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಖಾಲೀದ್ ಖಾನ್, ರೋಹನ್, (ಕುಳಿತವರು) ಮಂಜುನಾಥ್, ಶಿವಕುಮಾರ್, ನಿಹಾಲ್ ಕುಮಾರ್

ಟೆನಿಸ್: ನಗಾಲ್ ಫೈನಲ್‌ಗೆ

ಪೆರುಜಿಯಾ, ಇಟಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇಲ್ಲಿ ನಡೆಯುತ್ತಿರುವ ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದರು. ಈ ಮೂಲಕ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಅಗ್ರ 50ರಲ್ಲಿ ಸ್ಥಾನ ಪಡೆಯುತ್ತ ದಾಪುಗಾಲು ಹಾಕಿದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ವಿಶ್ವದ 77ನೇ ಕ್ರಮಾಂಕದ ನಗಾಲ್ 7-6 (7-2), 1-6, 6-2 ರಿಂದ ಸ್ಪೇನ್‌ನ ಬರ್ನಾಬೆ ಜಪಾಟಾ ಮಿರಾಲ್ಲೆಸ್ ಅವರನ್ನು ಮೂರು ಸೆಟ್‌ಗಳ ಹೋರಾಟದಲ್ಲಿ ಹಿಮ್ಮೆಟ್ಟಿಸಿದರು.


ಭಾರತದ ಸುಮಿತ್ ನಗಾಲ್

ಮತ್ತೊಂದು ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಇಟಲಿಯ ಲೂಸಿಯಾನೊ ದರ್ಡೆರಿ ಮತ್ತು ನಾಲ್ಕನೇ ಶ್ರೇಯಾಂಕದ ಜರ್ಮನಿಯ ಡೇನಿಯಲ್ ಆಲ್ಟ್‌ಮೇಯರ್ ಸೆಣಸಲಿದ್ದು, ಅದರ ವಿಜೇತರನ್ನು ಆರನೇ ಶ್ರೇಯಾಂಕದ ನಗಾಲ್ ಭಾನುವಾರ ಫೈನಲ್‌ನಲ್ಲಿ ಎದುರಿಸಲಿದ್ದಾರೆ.

ಮೊದಲ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಗೆದ್ದುಕೊಂಡ ನಗಾಲ್, ಎರಡನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದರು. ಆದರೆ, ಮೂರನೇ ಸೆಟ್‌ನಲ್ಲಿ ಮತ್ತೆ ಹಿಡಿತ ಸಾಧಿಸಿದ ಭಾರತದ 26 ವರ್ಷದ ಆಟಗಾರ ಗೆಲುವು ಸಾಧಿಸಿ ಮುನ್ನಡೆದರು.

ಈ ವರ್ಷ ಚೆನ್ನೈ ಓಪನ್ ಗೆದ್ದಿದ್ದ ನಗಾಲ್, ಕಳೆದ ವಾರ ಹೀಲ್ ಬ್ರಾನ್ ನೆಕರ್‌ಕಪ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದರು. ಇದೀಗ ವರ್ಷದ ಮೂರನೇ ಪ್ರಶಸ್ತಿಯ ಹೊಸ್ತಿಲಲ್ಲಿದ್ದಾರೆ.

ಟೇಬಲ್ ಟೆನಿಸ್: ಹುಬ್ಬಳ್ಳಿಯ ಕೆಎಸ್‌ಎಲ್‌ಯು ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು, ಗುರುವಾರ ಶ್ರೀಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಅಂತರ ಕಾನೂನು ಕಾಲೇಜು ಟೇಬಲ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು.

ಶೇಷಾದ್ರಿಪುರಂ ಕಾನೂನು ಕಾಲೇಜು ಮತ್ತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಜಂಟಿ ಆಶ್ರಯದಲ್ಲಿ ನಡೆದ ಈ ಟೂರ್ನಿಯ ಪುರುಷರ ವಿಭಾದಲ್ಲಿ 15 ತಂಡಗಳು ಮತ್ತು ಮಹಿಳಾ ವಿಭಾಗದಲ್ಲಿ 14 ತಂಡಗಳು ಭಾಗವಹಿಸಿದ್ದವು.

ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜು ಎರಡನೇ, ಆತಿಥೇಯ ಶೇಷಾದ್ರಿಪುರಂ ಕಾನೂನು ಕಾಲೇಜು ಮೂರನೇ ಸ್ಥಾನ ಪಡೆದವು. ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜು ನಾಲ್ಕನೇ ಸ್ಥಾನ ಗಳಿಸಿತು.

ಮಂಗಳೂರಿನ ಎಸ್‌ಡಿಎಂ ಕಾಲೇಜು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಯಿತು. ಬೆಳಗಾವಿಯ ಆರ್.ಎಲ್. ಕಾನೂನು ಕಾಲೇಜು ಎರಡನೇ ಸ್ಥಾನ ಪಡೆಯಿತು. ಬೆಂಗಳೂರಿನ ಕ್ರೈಸ್ಟ್ ಕಾನೂನು ಕಾಲೇಜು ಮೂರನೇ ಮತ್ತು ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜು ನಾಲ್ಕನೇ ಸ್ಥಾನ ಪಡೆದವು.

ಮಾಜಿ ಹಾಕಿ ಆಟಗಾರ ಸುಕೇಂದರ್ ಇನ್ನಿಲ್ಲ



ಬೆಂಗಳೂರು: ರಾಜ್ಯ ಹಾಕಿ ತಂಡದ ಮಾಜಿ ಆಟಗಾರ ಜೆ. ಸುಕೇಂದರ್ (83) ಅವರು ವಯೋಸಹಜ ಕಾಯಿಲೆಯಿಂದ ಶನಿವಾರ ನಿಧನರಾದರು.

1958ರಿಂದ 1961ರವರೆಗೆ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಅವರು ಮೈಸೂರು ರಾಜ್ಯ ಹಾಕಿ ತಂಡವನ್ನು ಪ್ರತಿನಿಧಿಸಿದ್ದರು. ಅಫ್ಗಾನಿಸ್ತಾನದ ಕಾಬೂಲ್‌ಗೆ ಪ್ರವಾಸ ಮಾಡಿದ್ದ ಭಾರತ ವಿಶ್ವವಿದ್ಯಾಲಯ ತಂಡದ ಭಾಗವಾಗಿದ್ದ ಅವರು, ಸಿಐಎಲ್‌ನಲ್ಲಿ ಅಧಿಕಾರಿಯಾಗಿದ್ದರು. ಅವರ ನಿಧನಕ್ಕೆ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಸಂತಾಪ ಸೂಚಿಸಿದೆ.

ಗೋಲ್ ಕೀಪರ್ ಸರ್ಕಿಕ್ ನಿಧನ



ಲಂಡನ್ (ಎಎಫ್‌ಪಿ): ಮಾಂಟೆನಿಗ್ರೊ ಮತ್ತು ಮಿಲ್ವಾಲ್ ಗೋಲ್ ಕೀಪರ್ ಮತಿಜಾ ಸರ್ಕಿಕ್ ತಮ್ಮ 26ನೇ ವಯಸ್ಸಿನಲ್ಲಿ ನಿಧನರಾದರು ಎಂದು ಅವರ ಕ್ಲಬ್ ಮತ್ತು ರಾಷ್ಟ್ರೀಯ ಫುಟ್‌ಬಾಲ್ ಅಸೋಸಿಯೇಷನ್ ಶನಿವಾರ ಪ್ರಕಟಿಸಿದೆ.

'ಇಂದು ಮುಂಜಾನೆ ಹಠಾತ್ ನಿಧನರಾದರು. 'ಬ್ರೇವ್ ಫಾಲ್ಕನ್ಸ್'ನ (ಮಾಂಟೆನಿಗ್ರೊ ತಂಡಕ್ಕೆ ಕರೆಯುವ ಹೆಸರು) ಪ್ರೀತಿಯ ಸದಸ್ಯ, ಸದಾ ಹಸನ್ಮುಖಿ' ಎಂದು ಮಾಂಟೆನಿಗ್ರೊ ಫುಟ್‌ಬಾಲ್ ಸಂಸ್ಥೆ ಸಂದೇಶದಲ್ಲಿ ತಿಳಿಸಿದೆ. ಸರ್ಕಿಕ್, ಮಾಂಟೆನಿಗ್ರೊ ಪರ ಒಂಬತ್ತು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

